"JANAPADA" Monthly - June 2018
"ಜನಪದ" ಮಾಸಿಕ – ಜೂನ್ 2018
Page No. -52
RNI No. KAR/KAN/2010/20676
Regd No.KA/BGGPO/2526/2018-20 Licensed to post without prepayment Licence No.WPP-34,, Published on 29th
Dt. 29th & 30th Posted at (Every month), Bangalore PSO, Mysore Road, Bangalore - 26



ವಾರ್ಷಿಕ ಚಂದಾ ರೂ.25/-

# ಜನಪದ

ಜೂನ್ 2018



# ಮೈತ್ರಿ ಸರ್ಕಾರ



ರಾಜ್ಯದ 25 ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಹೆಚ್.ಡಿ.ಕುಮಾರಸ್ವಾಮಿ ಅವರನ್ನು
ರಾಜ್ಯಪಾಲರಾದ ವಜುಭಾಯಿ ವಾಲಾ ಅವರು ಅಭಿನಂದಿಸುತ್ತಿರುವುದು.



ರಾಜ್ಯದ 9ನೇ ಉಪಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಡಾ॥ ಜಿ. ಪರಮೇಶ್ವರ್ ಅವರನ್ನು
ರಾಜ್ಯಪಾಲರಾದ ವಜುಭಾಯಿ ವಾಲಾ ಅವರು ಅಭಿನಂದಿಸುತ್ತಿರುವುದು.



ಮಾಜಿ ಪ್ರಧಾನಮಂತ್ರಿ ಜವಾಹರ್ ಲಾಲ್ ನೆಹರು ಅವರ 54ನೇ ಪುಣ್ಯಸ್ಮರಣೆ ಅಂಗವಾಗಿ ಮೇ 27 ರಂದು ವಿಧಾನಸೌಧದ
ಆವರಣದಲ್ಲಿರುವ ಅವರ ಪ್ರತಿಮೆ ಬಳಿ ಇರಿಸಲಾಗಿದ್ದ ಭಾವಚಿತ್ರಕ್ಕೆ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಪುಷ್ಪನಮನ ಸಲ್ಲಿಸಿದರು.




ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಇಲಾಖೆವತಿಯಿಂದ ತಯಾರಿಸಲಾಗಿದ್ದ ಕ್ಷೇತ್ರವಾರು ಅಭ್ಯರ್ಥಿಗಳ ವಿವರವನ್ನು ಒಳಗೊಂಡಿರುವ ಚುನಾವಣಾ
ಕೈಪಿಡಿಯನ್ನು ಮುಖ್ಯ ಚುನಾವಣಾಧಿಕಾರಿ ಸಂಜೀವ್ ಕುಮಾರ್ ಅವರು ಬಿಡುಗಡೆ ಮಾಡಿದರು.. ಈ ಸಂದರ್ಭದಲ್ಲಿ ವಾರ್ತಾ ಇಲಾಖೆಯ ಆಯುಕ್ತರಾದ
ಡಾ.ಪಿ.ಎಸ್. ಹರ್ಷ, ಜಂಟಿ ಮುಖ್ಯ ಚುನಾವಣಾಧಿಕಾರಿ ಡಾ.ಬಿ.ಆರ್. ಮಮತಾ ಅವರು ಉಪಸ್ಥಿತರಿದ್ದರು




05 ಸಮ್ಮಿಶ್ರ ಸರ್ಕಾರದ ಸಾರಥಿ ಕುಮಾರಸ್ವಾಮಿ
• ಶಂಕರ್

10 ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಅಂತರಾಳದ ಅನಿಸಿಕೆ

14 ಡಾ.ಜಿ.ಪರಮೇಶ್ವರ್ ರಾಜ್ಯದ 9 ನೇ ಉಪಮುಖ್ಯಮಂತ್ರಿ
• ಉಮೇಶ್ ಕೂಲಿಗೆರೆ

17 ನಮ್ಮನ್ನು ಬಡಿದೆಬ್ಬಿಸುತ್ತಿದೆ ಪರಿಸರ ದಿನಾಚರಣೆ
• ನವಿಕ

20 ದೇವದಾಸಿ ಪದ್ಧತಿ ನಿರ್ಮೂಲನೆಗೆ ಪಣತೊಟ್ಟಿರುವ ಸೀತವ್ವ
• ಮಹಾಂತೇಶ ಮ. ಜಾಂಗಟೆ

22 ಮುದ್ದು ಮಕ್ಕಳಿಗೆ ದುಡಿತ ತರವೇ
• ವೈ. ಕೆ. ಸಂಧ್ಯಾ ಶರ್ಮ

25 24 ನೇ ಮುಖ್ಯಮಂತ್ರಿ: ಬಿ.ಎಸ್.ಯಡಿಯೂರಪ್ಪ
• ಹೆಚ್. ಶಿವಣ್ಣ

26 ದಾಖಲೆ ಮತದಾನ ದಾಖಲಿಸಿದ 15ನೇ ವಿಧಾನಸಭಾ ಚುನಾವಣೆ

28 ಬಯಲು ನಾಡಲ್ಲೂ ಕಂಗೊಳಿಸುತ್ತಿರುವ ಅಡಿಕೆ ತೋಟ
• ಗಣಪತಿ ಹಾಸ್ಪುರ

31 ರಕ್ತದಾನ ಜೀವದಾನ
• ಡಾ. ಗುರುಲಿಂಗಪ್ಪ ಅಂಕದ

33 ಅಪಘಾತ ನಿಯಂತ್ರಣಕ್ಕೆ ರಕ್ಷಣಾತ್ಮಕ ಚಾಲನೆ
• ಡಾ. ಅನಿಲ್ ಕುಮಾರ್ ಪಿ

36 ಹೀಗೊಂದು ಮಾದರಿ ಸರ್ಕಾರಿ ಶಾಲೆ
• ಚಂದ್ರಹಾಸ

40 ಬಿಸಿಲ ನಾಡಲ್ಲಿ ಜೇನಿನ ಹೊಳೆ ಹರಿಸಿದ ರೈತರು
• ತುಕಾರಾಂ ರಾವ್ ಬಿ. ವಿ.

43 ನೆನಪಿನಂಗಳದಲ್ಲಿ ಆರ್.ಕೆ. ನಾರಾಯಣ್
• ಡಾ. ಕರೀಗೌಡ ಬೀಚನಹಳ್ಳಿ

47 ಗದುಗಿನ ವೀರನಾರಾಯಣ ದೇವಸ್ಥಾನ
• ಪಿ. ಎಸ್. ಪರ್ವತಿ

ಪ್ರಧಾನ ಸಂಪಾದಕರು
ಡಾ. ಪಿ. ಎಸ್. ಹರ್ಷ, ಐ.ಪಿ.ಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಎಂ. ರವಿಕುಮಾರ್
ಜಂಟಿ ನಿರ್ದೇಶಕರು
ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in
emagazine : karnatakajanapada.com | www.karnatakainformation.gov.in

ಮುದ್ರಕರು
ಲಾವಣ್ಯ ಮುದ್ರಣ
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು – 50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

# ಓದುಗರಿಂದ...




ತಮ್ಮ ಇಲಾಖೆಯಿಂದ ಪ್ರಕಟವಾಗುವ ಮಾಸ ಪತ್ರಿಕೆ 'ಜನಪದ'ದಲ್ಲಿ ಹೆಸರಿಗೆ ತಕ್ಕಂತೆ ಸಮಾಜದ, ಪ್ರತಿ ವರ್ಗ ಜನರಿಗೆ ಮನದಟ್ಟಾಗುವಂತಹ ಲೇಖನಗಳನ್ನು ಪ್ರಕಟಿಸಲಾಗುತ್ತಿದೆ. ಇದರಲ್ಲಿ ಪ್ರಕಟವಾಗುವ ಲೇಖನಗಳು ಜನಸಾಮಾನ್ಯರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಜ್ಞಾನದ ನಂದಾದೀಪವಾಗಿದೆ ಎಂದೇ ಹೇಳಬಹುದು. ಅಲ್ಲದೆ ರೈತರಿಗೆ ಅನುಕೂಲವಾಗುವಂತಹ ಸರಣಿ ಲೇಖನಗಳನ್ನು ಕೂಡ ಪ್ರಕಟಿಸಿದ್ದೀರಿ. ಇಂತಹ ಜ್ಞಾನ ವಿಕಾಸ ನೀಡುವ ಜನಪದ ಪತ್ರಿಕೆಗೆ ಚಂದಾದಾರರಾಗಿರುವುದು ನನಗೆ ಹೆಮ್ಮೆ ಎನಿಸುತ್ತದೆ.

– **ಹೆಚ್.ಬಿ. ಚನ್ನ ಕೃಷ್ಣಯ್ಯ,** ಹೊಸಹೊನಗನ ಹಳ್ಳಿ

---

ಮೇ ತಿಂಗಳ ಜನಪದ ಸಂಚಿಕೆಯು ಚುನಾವಣಾ ವಿಶೇಷಾಂಕವಾಗಿ ಉತ್ತಮವಾಗಿ ಮೂಡಿಬಂದಿದೆ. ಮತದಾನದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವಂತಹ ಲೇಖನಗಳ ಜೊತೆಗೆ ವಿದ್ಯುನ್ಮಾನ ಮತಯಂತ್ರ ಬಳಕೆ ಕುರಿತ ಮಾಹಿತಿ, ಚುನಾವಣಾ ನೀತಿ ಸಂಹಿತೆಯಲ್ಲಿ ಬರುವ ವಿಷಯಗಳು, ಮತದಾನದ ಗುರುತಿಗಾಗಿ ಬಳಸುವ ನೇರಳೆ ಶಾಯಿ, ಚುನಾವಣಾ ಆಯೋಗವು ಚುನಾವಣೆ ನಡೆಸಲು ಸನ್ನದ್ಧವಾಗಿರುವ ಮಾಹಿತಿ ಮತ್ತು ಕರ್ನಾಟಕ ವಿಧಾನಸಭಾ ಕ್ಷೇತ್ರಗಳ ವಿವರವನ್ನು ನೀಡುವ ಮೂಲಕ ಚುನಾವಣೆಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿಯನ್ನು ನೀಡಿದ್ದೀರಿ. ಇಂತಹ ಉತ್ತಮ ವಿಶೇಷಾಂಕವನ್ನು ಹೊರತಂದಿರುವ ಸಂಪಾದಕ ವರ್ಗದವರಿಗೆ ನನ್ನ ಅಭಿನಂದನೆಗಳು.

– **ಜಿ.ಕೆ. ಶ್ರೀಪತಿ,** ಹರಿಹರ

---

ಪ್ರತಿ ಐದು ವರ್ಷಗಳಿಗೆ ಚುನಾವಣೆ ಬರುತ್ತದೆ. ನಾವು ಮತ ಹಾಕುತ್ತೇವೆ, ಹೊಸ ಸರ್ಕಾರ ರಚನೆಯಾಗುತ್ತದೆ ಅಷ್ಟೇ, ಎಂದು ತಿಳಿದಿದ್ದ ನನಗೆ ಮೇ ತಿಂಗಳ ಜನಪದವನ್ನು ಓದಿದ ನಂತರ ಚುನಾವಣೆಗಾಗಿ ಚುನಾವಣಾ ಆಯೋಗ ಎಷ್ಟೆಲ್ಲಾ ಸಿದ್ಧತೆಯನ್ನು ಮಾಡಿಕೊಳ್ಳುತ್ತದೆ ಎಂಬ ವಿಚಾರ ತಿಳಿಯಿತು. ಅಲ್ಲದೆ ಪತ್ರಿಕೆಯಲ್ಲಿ ಮತದಾರರಿಗೆ ಜಾಗೃತಿ ಮೂಡಿಸುವ ಸಲುವಾಗಿ ಪ್ರಕಟಿಸಲಾಗಿರುವ ಎಲ್ಲಾ ಲೇಖನಗಳು ಮಾಹಿತಿಯನ್ನು ನೀಡುವ ಜೊತೆಗೆ ಮತದಾರನಿಗೆ ಮತದಾನದ ಮಹತ್ವವನ್ನು ತಿಳಿಸುವಲ್ಲಿ ಯಶಸ್ವಿಯಾಗಿವೆ ಎಂದರೆ ತಪ್ಪಾಗಲಾರದು. ಲೇಖನಗಳ ಜೊತೆಗೆ ಯಾವುದೇ ಆಮಿಷಕ್ಕೆ ಒಳಗಾಗದೇ ಮತ ಚಲಾಯಿಸುವಂತೆ ವ್ಯಂಗ್ಯಚಿತ್ರಗಳ ಮೂಲಕ ಜಾಹಿರಾತು ನೀಡಿರುವುದು ಇನ್ನೂ ಉತ್ತಮವಾಗಿದೆ. ಒಟ್ಟಿನಲ್ಲಿ ಚುನಾವಣೆ ಪ್ರಕ್ರಿಯೆ ಬಗ್ಗೆ ಯುವ ಪೀಳಿಗೆಯವರು ತಿಳಿದುಕೊಳ್ಳಲು ಈ ವಿಶೇಷ ಸಂಚಿಕೆ ತುಂಬಾ ನೆರವಾಗಲಿದೆ ಎಂಬುದು ನನ್ನ ಅಭಿಪ್ರಾಯ.

**–ಅರ್ಪಿತಾ ಕೆ.ಎಸ್,** ಆನೇಕಲ್

---

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಮತದಾನದ ಹಕ್ಕನ್ನು ನೀಡಲಾಗಿದೆ. ಆದರೆ ಪ್ರಜ್ಞಾವಂತ ಜನರು ಮತದಾನ ಮಾಡುವುದು ಕಡಿಮೆ ಎಂದೆ ಹೇಳಬೇಕು. ಆದಾಗ್ಯೂ ಈ ವರ್ಷ ದಾಖಲೆಯ ಮತದಾನವಾಗಿದೆ. ಇದಕ್ಕೆ ಚುನಾವಣಾ ಆಯೋಗವು ಮತದಾರರಲ್ಲಿ ಮತದಾನದ ಕುರಿತು ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಕಾರಣವಾಗಿರಬಹುದು. ಇದೇ ಕಾರಣಕ್ಕಾಗಿ ತಮ್ಮ ಇಲಾಖೆವತಿಯಿಂದ ಚುನಾವಣಾ ವಿಶೇಷಾಂಕವಾಗಿ ಹೊರತಂದಿರುವ ಮೇ ಸಂಚಿಕೆಯ ಜನಪದ ಮಾಸ ಪತ್ರಿಕೆ ಕೂಡ ಮತದಾರರಲ್ಲಿ ಜಾಗೃತಿ ಮೂಡಿಸಿದೆ. ಹಾಗೂ ಪತ್ರಿಕೆಯಲ್ಲಿ ಪ್ರಕಟಿಸಿರುವ ಎಲ್ಲಾ ಲೇಖನಗಳು ಉಪಯುಕ್ತ ಮಾಹಿತಿಯನ್ನು ಒದಗಿಸಿವೆ.

**–ಬಸವಣ್ಣನವರ್,** ಗದಗ

---

ಸುಭದ್ರ ಸರ್ಕಾರವನ್ನು ತರಬೇಕಾದರೆ ಎಲ್ಲರೂ ತಪ್ಪದೇ ಚುನಾವಣೆಯಲ್ಲಿ ಮತದಾನ ಮಾಡಬೇಕು. ಆಗ ಮಾತ್ರ ಸುಭದ್ರ ಸರ್ಕಾರ ತರಲು ಸಾಧ್ಯ. ಆದ್ದರಿಂದ ಈ ನಿಟ್ಟಿನಲ್ಲಿ ಮತದಾರರಲ್ಲಿ ಅರಿವು ಮೂಡಿಸುವ ಸಲುವಾಗಿ ಮೇ ಮಾಹೆಯ ಜನಪದ ಸಂಚಿಕೆಯಲ್ಲಿ ಪ್ರಕಟಿಸಲಾಗಿರುವ ಲೇಖನಗಳು ಅತ್ಯುತ್ತಮವಾಗಿ ಮೂಡಿಬಂದಿದೆ. 'ಚುನಾವಣೆ ಅಂದು ಇಂದು' ಲೇಖನ ಓದಿದ ನನಗೆ ನಲವತ್ತು ವರ್ಷಗಳ ಹಿಂದೆ ಎತ್ತಿನಗಾಡಿಯಲ್ಲಿ ಅಜ್ಜ, ಅಜ್ಜಿ, ಅಪ್ಪ–ಅಮ್ಮ ಮತ್ತು ಅಣ್ಣಂದಿರೊಂದಿಗೆ ನಮ್ಮ ಊರಿನಿಂದ 3 ಕಿ.ಮೀ ದೂರದ ಮತಗಟ್ಟೆಗೆ ಹೋಗಿ ನಾನು ಮೊದಲ ಬಾರಿಗೆ ಮತ ಹಾಕಿದ ನೆನಪು ಮರುಕಳಿಸಿತು. ಈಗಿನ ಕಾಲದ ಯುವಕರು ತಮ್ಮ ಬೀದಿಯಲ್ಲೇ ಇರುವ ಮತಗಟ್ಟೆಗೆ ಹೋಗಿ ಮತ ಹಾಕಲು ಸೋಮಾರಿತನ ಮಾಡುತ್ತಾರೆ. ಲೇಖಕರು ನಮ್ಮ ಕಾಲದಲ್ಲಿ ಚುನಾವಣೆ ಹೇಗೆ ನಡೆಯುತ್ತಿತ್ತು ಎಂಬುದನ್ನು ಸಂಕ್ಷಿಪ್ತವಾಗಿ ಓದುಗರಿಗೆ ನೀಡಿದ್ದಾರೆ. ಅಲ್ಲದೆ ಈ ಸಂಚಿಕೆಯಲ್ಲಿ ಪ್ರಕಟಿಸಿರುವ ಇತರ ಲೇಖನಗಳು ಮಾಹಿತಿಯುಕ್ತವಾಗಿವೆ.

**–ಚನ್ನೇಗೌಡರು,** ಸಾಲಿಗ್ರಾಮ

---

ಮೇ ಜನಪದ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಚುನಾವಣೆ ಮತ್ತು ಬಾಬಾಸಾಹೇಬರ ಕನಸುಗಳು' ಲೇಖನವನ್ನು ಲೇಖಕ ಡಾ.ಎಸ್. ನರೇಂದ್ರಕುಮಾರ್ ಅವರು ತುಂಬಾ ಅರ್ಥಪೂರ್ಣವಾಗಿ ಓದುಗರಿಗೆ ನೀಡಿದ್ದಾರೆ ಎಂದೇ ಹೇಳಬಹುದು. ಅಂಬೇಡ್ಕರ್ ಅವರು ಉದ್ದೇಶಿಸಿದ ಪ್ರಜಾಪ್ರಭುತ್ವದ ಕಲ್ಪನೆ, ಮತ್ತು ಅದರ ಅನುಷ್ಠಾನಕ್ಕಾಗಿ ಅವರು ಪಟ್ಟ ಪರಿಶ್ರಮವನ್ನು ಲೇಖಕರು ಚನ್ನಾಗಿ ಬಿಂಬಿಸಿದ್ದಾರೆ. ಈ ಲೇಖನವು ಓದುಗರಿಗೆ ಅಂಬೇಡ್ಕರ್ ಅವರ ಚಿಂತನೆಗಳ ಅರಿವನ್ನು ಮಾಡಿಸಿದೆ.

– **ಎ. ಎಂ. ಶ್ರೀನಿವಾಸ್,** ಜಗಳೂರು


'ಜನಪದ' ಮಾಸಿಕ ಈಗ
**www.kanaja.in**ನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/–

'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.

ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.)




# ಸಮ್ಮಿಶ್ರ ಸರ್ಕಾರದ ಸಾರಥಿ ಕುಮಾರಸ್ವಾಮಿ

ಶಂಕರ್

**ಹರದನಹಳ್ಳಿ**

**ದೇವೇಗೌಡ**

**ಕುಮಾರಸ್ವಾಮಿ** ಆದ ನಾನು.... ಎಂದು ಹೇಳುತ್ತಿದ್ದಂತೆ ಜನಸ್ತೋಮದಲ್ಲಿ ಮುಗಿಲುಮಟ್ಟಿದ ಶಿಳ್ಳೆ, ಹರ್ಷೋದ್ಗಾರದ ನಡುವೆ ರಾಜ್ಯದ 25 ನೇ ಮುಖ್ಯಮಂತ್ರಿಯಾಗಿ ಹೆಚ್.ಡಿ. ಕುಮಾರಸ್ವಾಮಿ ಅವರು ಪ್ರಮಾಣ ವಚನ ಸ್ವೀಕರಿಸುವ ಮೂಲಕ, ರಾಜ್ಯದ ಅಭಿವೃದ್ಧಿಗೆ ಪೂರಕ 'ಕುಮಾರಪರ್ವ'ಕ್ಕೆ ನಾಂದಿ ಹಾಡಿದರು.

ಮೇ 23, 2018 ರಂದು ಬುಧವಾರ ವಿಧಾನಸೌಧದ ಪೂರ್ವದ್ವಾರದಲ್ಲಿ ಸಿಂಗಾರಗೊಂಡು ನಳನಳಿಸುತ್ತಿದ್ದ ವೇದಿಕೆಯ ಮುಂದೆ ಮಧ್ಯಾಹ್ನದಿಂದಲೇ ಜಮಾಯಿಸ ತೊಡಗಿದ್ದ ಜನಸಮೂಹಕ್ಕೆ ಕಾರ್ಮೋಡದಂತೆ ಕವಿದ ಮೋಡ ಮಳೆಯಾಗಿ ಧಾರಾಕಾರವಾಗಿ ಸುರಿದಾಗ ತಮ್ಮ ಜನನಾಯಕನ ಮುಖ್ಯಮಂತ್ರಿ ಸ್ವೀಕಾರ ಕಣ್ತುಂಬಿಸಿಕೊಳ್ಳಲಾಗದ ಚಡಪಡಿಕೆ, ಆತಂಕ..... ಆದರೆ ಕೆಲವೇ ಸಮಯದಲ್ಲಿ ಮೋಡ ಕರಗಿ ನೀರಾಗಿ ಹರಿದು ಶುಭ್ರ ನೀಲಾಕಾಶದ ಹೊಳಪಿನಲ್ಲಿ ಶ್ವೇತಧಾರಿ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯಪಾಲರಾದ ವಜುಭಾಯಿ ವಾಲಾ ಅವರಿಂದ ರಾಜ್ಯದ ಮುಖ್ಯಮಂತ್ರಿಯಾಗಿ ಸಂಜೆ 4.30ರ ವೇಳೆಗೆ ಭಗವಂತ ಹಾಗೂ ನಾಡಿನ ಜನತೆಯ ಹೆಸರಿನಲ್ಲಿ ಪ್ರಮಾನ ವಚನ ಸ್ವೀಕರಿಸಿದರು.

ಅವರ ರಾಜಕೀಯ ಹೋರಾಟ ಇಂದಿನದೇನಲ್ಲ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪುತ್ರರಾದರೂ, ರಾಜ್ಯ ರಾಜಕಾರಣದಲ್ಲಿ ತಮ್ಮದೇ ವರ್ಚಸ್ಸನ್ನು ಗಳಿಸುವ ಮೂಲಕ ಸಣ್ಣ ಪುಟ್ಟ ಹಳ್ಳಿ ಗಾಡಿನಲ್ಲೂ 'ಕುಮಾರಣ್ಣ' ಎಂದೇ ಆತ್ಮೀಯತೆಯಿಂದ ಮತ್ತು ಪ್ರೀತಿಯಿಂದ ಕರೆಸಿಕೊಂಡವರು. ರಾಜಕೀಯಕ್ಕೆ ಆಕಸ್ಮಿಕವಾಗಿ ಕಾಲಿಡುವ ಮೂಲಕ ಎರಡು ದಶಕಗಳ ಹಿಂದೆ ರಾಜಕಾರಣಕ್ಕೆ ಬಂದಾಗ ಅವರಿಗೆ ರಾಜಕಾರಣಕ್ಕಿಂತ ಸಿನಿಮಾ ನಿರ್ಮಾಣ ಮತ್ತು ಕೃಷಿಯಲ್ಲೇ ಹೆಚ್ಚಿನ ಆಸಕ್ತಿ.





# ಕುಮಾರ ಪರ್ವ

ಈ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿ ಹೆಚ್.ಡಿ.ಕುಮಾರಸ್ವಾಮಿ ಮತ್ತು ಉಪ ಮುಖ್ಯಮಂತ್ರಿಯಾಗಿ ಡಾ.ಜಿ.ಪರಮೇಶ್ವರ್ ಅವರು ಪ್ರಮಾಣ ವಚನ ಸ್ವೀಕರಿಸಿದ ಕಾರ್ಯಕ್ರಮಕ್ಕೆ ರಾಷ್ಟ್ರ ಮಟ್ಟದ ನಾಯಕರು, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ವಿವಿಧ ಪಕ್ಷದ ಮುಖಂಡರು ಹಾಜರಿದಿದ್ದು ರಾಷ್ಟ್ರೀಯ ಮಟ್ಟದಲ್ಲಿ ಹೊಸ ಸಂಚಲನ ಮೂಡಿಸಿತು. ರಾಷ್ಟ್ರದಲ್ಲಿ ಪ್ರಭಲ ರಾಜಕೀಯ ಪರ್ಯಾಯ ಶಕ್ತಿ ನಿರ್ಮಾಣಕ್ಕೆ ನಾಂದಿ ಹಾಡಿದ ಸಂದರ್ಭಕ್ಕೆ ಸಾಕ್ಷಿಯಾಯಿತು.

ಕಾಂಗ್ರೆಸ್ ನಾಯಕಿಯಾದ ಸೋನಿಯಾಗಾಂಧಿ, ಕಾಂಗ್ರೆಸ್ ಅಧ್ಯಕ್ಷರಾದ ರಾಹುಲ್ ಗಾಂಧಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿಯಾದ ಮಮತಾ ಬ್ಯಾನರ್ಜಿ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿಗಳಾದ ಬಿಎಸ್‌ಪಿ  ನಾಯಕಿ ಮಾಯಾವತಿ, ಸಮಾಜವಾದಿ ಪಕ್ಷದ ನಾಯಕರಾದ ಅಖಿಲೇಶ್ ಯಾದವ್, ದೆಹಲಿ ಮುಖ್ಯಮಂತ್ರಿಯಾದ ಅರವಿಂದ್ ಕೇಜ್ರಿವಾಲ್, ಕೇರಳ ಮುಖ್ಯಮಂತ್ರಿಗಳಾದ ಪಿಣರಾಯಿ ವಿಜಯನ್, ಪಾಂಡಿಚೆರಿ ಮುಖ್ಯಮಂತ್ರಿಯಾದ ವಿ.ನಾರಯಣಸ್ವಾಮಿ, ಆಂಧ್ರ ಮುಖ್ಯಮಂತ್ರಿಯಾದ ಚಂದ್ರಬಾಬುನಾಯ್ಡು, ಮಹಾರಾಷ್ಟ್ರ ಮಾಜಿ ಮುಖ್ಯಮಂತ್ರಿಯಾದ ಶರದ್ ಪವಾರ್, ಕಮ್ಯುನಿಸ್ಟ್ ನಾಯಕರಾದ ಸಿಪಿಎಂ ನ ಸೀರಾರಾಂ ಯೆಚೂರಿ, ಸಿಪಿಐ ನ ಡಿ.ರಾಜ, ಉತ್ತರ ಪ್ರದೇಶದ ಅಜೀತ್ ಸಿಂಗ್, ಬಿಹಾರದ ಆರ್‌ಜೆಡಿ ನಾಯಕರಾದ ತೇಜಸ್ವಿಯಾದವ್, ಲೋಕತಾಂತ್ರಿಕ ಜನತಾದಳದ ನಾಯಕರಾದ ಶರದ್‌ಯಾದವ್ ಸೇರಿದಂತೆ ರಾಷ್ಟ್ರೀಯ ನಾಯಕರುಗಳ ಹಾಜರಾತಿ ಹೆಚ್.ಡಿ.ಕುಮಾರಸ್ವಾಮಿ ಅವರ 'ಕುಮಾರ ಪರ್ವ' ಆರಂಭಕ್ಕೆ ಸಾಕ್ಷೀಕರಿಸಿದ್ದು ವಿಶೇಷ.

ಹೀಗಿರುವಾಗ 1996 ರಲ್ಲಿ ಕನಕಪುರ ಲೋಕಸಭಾ ಕ್ಷೇತ್ರದಿಂದ 11 ನೇ ಲೋಕಸಭೆಗೆ ಸ್ಪರ್ಧಿಸಿ ಆಯ್ಕೆಯಾಗುವ ಮೂಲಕ ಅಧಿಕೃತ ಚುನಾವಣಾ ರಾಜಕೀಯ ಪ್ರಕ್ರಿಯಗೆ ಹೆಜ್ಜೆ ಇಟ್ಟರು. ಆದರೆ ಮೊದಲ ಗೆಲುವಿನಂತೆ ನಂತರದ 1998 ರ ಲೋಕಸಭೆ ಹಾಗೂ 1999 ರ ವಿಧಾನಸಭೆಗೆ ನಡೆದ ಚುನಾವಣೆಗಳಲ್ಲಿನ ಸೋಲು ಅವರನ್ನು ರಾಜಕೀಯದಿಂದ ವಿಮುಖರಾಗುವಂತೆ ಮಾಡಿದರು ಸಹ, ಜನರ ಒತ್ತಾಯ, ಪ್ರೀತಿಗೆ ತಮ್ಮ ನಿರ್ಧಾರ ಬದಲಾಯಿಸಿ ಮತ್ತೆ ಸಕ್ರಿಯ ರಾಜಕಾರಣದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಮೂಲಕ ರಾಜ್ಯದ ರಾಜಕಾರಣದಲ್ಲಿ ಇತಿಹಾಸ ಸೃಷ್ಟಿಸಿದ ನಾಯಕರಾದರು.

2004 ರ ವಿಧಾನಸಭಾ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗುವ ಮೂಲಕ ರಾಜ್ಯ ರಾಜಕಾರಣದ ಹೊಸ ಮನ್ವಂತರಕ್ಕೆ ನಾಂದಿ ಹಾಡಿದರು ಎನ್ನಲೇಬೇಕು. 2004ರಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ಸಮ್ಮಿಶ್ರ ಸರಕಾರ ಅಧಿಕಾರಕ್ಕೆ ಬಂದಾಗ ಕುಮಾರಸ್ವಾಮಿ ಅತಿ ಪ್ರಮುಖ ಪಾತ್ರ ವಹಿಸಿದ್ದರು.  ಆನಂತರ ನಡೆದ ರಾಜಕೀಯ ಬೆಳವಣಿಗೆಯಲ್ಲಿ ಬಿಜೆಪಿ ಜೊತೆ ಕೈಜೋಡಿಸುವ ಮೂಲಕ ಫೆಬ್ರವರಿ 3, 2006 ರಂದು ಮೊದಲ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ರಾಜ್ಯಪಾಲ ಚತುರ್ವೇದಿ ಅವರಿಂದ ಪ್ರಮಾಣವಚನ ಸ್ವೀಕರಿಸಿ 20 ತಿಂಗಳ ಆಡಳಿತದ ಚುಕ್ಕಾಣಿ ಹಿಡಿದರು.

ತಮ್ಮ 20 ತಿಂಗಳ ಅಧಿಕಾರದ ಅವಧಿಯಲ್ಲಿ ಅವರು ನಡೆಸಿದ "ಗ್ರಾಮವಾಸ್ತವ್ಯ"  ದೇಶದಾದ್ಯಂತ ಸಂಚಲನವನ್ನೇ ಮೂಡಿಸಿತು ಎಂದರೆ ಅತಿಶಯೋಕ್ತಿಯಲ್ಲ. ಜನಸಾಮಾನ್ಯರು ಶಕ್ತಿ ಸೌಧಕ್ಕೆ ಆಗಮಿಸಿ ಮುಖ್ಯಮಂತ್ರಿಯನ್ನು ಭೇಟಿಯಾಗುವುದು ಅಷ್ಟು ಸುಲಭದ ವಿಚಾರವಲ್ಲ. ಅಂತಹದರಲ್ಲಿ ಮುಖ್ಯಮಂತ್ರಿಯವರೇ ತಮ್ಮ ಗ್ರಾಮಕ್ಕೆ ಆಗಮಿಸಿ ಒಂದು ರಾತ್ರಿ ಗ್ರಾಮಸ್ಥರ ಮನೆಯಲ್ಲಿಯೇ ಉಳಿದುಕೊಂಡು ನಮ್ಮ ಸಮಸ್ಯೆ ಮತ್ತು ಕುಂದುಕೊರತೆಯನ್ನು ವಿಚಾರಸುತ್ತಾರೆ ಎಂದಾಗ ಜನರು ಕುಮಾರಸ್ವಾಮಿ ಅವರನ್ನು ತಮ್ಮ ಬಂಧುವಿನಂತೆ ಕಂಡರು. ಅಲ್ಲದೆ ಅಧಿಕಾರಿಗಳು ಕೂಡ 'ಗ್ರಾಮವಾಸ್ತವ್ಯ' ಮಾಡುವಂತೆ ಅವರು ಪ್ರೇರೇಪಿಸಿದರು. ಹಾಗಾಗಿ ಇವರ 'ಗ್ರಾಮವಾಸ್ತವ್ಯ' ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡಿತು. ಗ್ರಾಮವಾಸ್ತವ್ಯದಲ್ಲಿ ಅವರು ಜನರ ಕುಂದುಕೊರತೆಯನ್ನು ಆಲಿಸುವ ಜೊತೆಗೆ ಶೀಘ್ರದಲ್ಲಿ ಪರಿಹಾರವನ್ನು ಒದಗಿಸಿಕೊಡುತ್ತಿದ್ದರು. ಈ ಕಾರಣದಿಂದ ತಮ್ಮ ಊರಿಗೂ ಕುಮಾರಣ್ಣ ಅವರು ಬರಲಪ್ಪಾ ಎಂದು ಜನರು ಆಶಿಸುತ್ತಿದ್ದರಲ್ಲದೆ ಸ್ಥಳೀಯ ಮುಖಂಡರಿಗೆ ಅವರನ್ನು ಕರೆದುಕೊಂಡು ಬರುವಂತೆ ಒತ್ತಡ ಹಾಕುತ್ತಿದ್ದರು. ಇದರಿಂದಾಗಿ ತಮ್ಮ ಕ್ಷೇತ್ರಕ್ಕೆ ಕುಮಾರ ಸ್ವಾಮಿ ಅವರನ್ನು ಕರೆದೊಯ್ಯಲು ಜಿಲ್ಲಾ ಉಸ್ತುವಾರಿ ಸಚಿವರುಗಳು ಪೈಪೋಟಿ ನಡೆಸುತ್ತಿದ್ದರು.

ದುಶ್ಚಟಗಳಿಂದ ಕುಟುಂಬಗಳು ಬೀದಿಗೆ ಬರುವಂತಾಗಿದೆ ಎಂಬುದನ್ನು ಮನಗಂಡ ಅವರು ಸರಾಯಿ, ಲಾಟರಿ



ಕನಿಷ್ಠ ಅವಧಿಯಲ್ಲಿ ಅತಿಹೆಚ್ಚು ಜನಪರ ಕಾರ್ಯಕ್ರಮಗಳನ್ನು ಮಾಡಿ ನಾಡಿನುದ್ದಕ್ಕೂ ಜನನಾಯಕನ ಪಟ್ಟಗಳಿಸುವ ಮೂಲಕ ಖ್ಯಾತಿ ಪಡೆದ ರಾಜ್ಯದ ಮುಖ್ಯಮಂತ್ರಿಗಳಲ್ಲಿ ಮತ್ತೊಬ್ಬರಿಲ್ಲ.

- ಹೊಳೆನರಸೀಪುರ ತಾಲೂಕಿನ ಹರದನಹಳ್ಳಿಯಲ್ಲಿ ಹೆಚ್.ಡಿ.ದೇವೇಗೌಡ- ಚನ್ನಮ್ಮ ದಂಪತಿಯ ಮೂರನೇ ಮಗನಾಗಿ 1959 ಡಿಸೆಂಬರ್ 16 ರಂದು ಜನನ.
- ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹೊಳೆನರಸೀಪುರ ಹಾಗೂ ಹಾಸನದಲ್ಲಿ. 10 ನೇ ತರಗತಿ ಬೆಂಗಳೂರಿನ ಎಂಇಎಸ್ ಶಾಲೆಯಲ್ಲಿ.
- ಪಿಯುಸಿ ವಿದ್ಯಾಭ್ಯಾಸ ವಿಜಯಾ ಕಾಲೇಜ್ ಬೆಂಗಳೂರು.
ಬಿಎಸ್ಸಿ ಪದವಿ, ನ್ಯಾಷನಲ್ ಕಾಲೇಜ್ ಬೆಂಗಳೂರು.
- ಚಿತ್ರ ನಿರ್ಮಾಣ ಹಾಗೂ ಕೃಷಿಕ ವೃತ್ತಿ.
- 1986 ರಲ್ಲಿ ಅನಿತಾ ಕುಮಾರಸ್ವಾಮಿ ಅವರೊಂದಿಗೆ ವಿವಾಹ. ಪುತ್ರ - ಚಿತ್ರನಟ ನಿಖಿಲ್ ಕುಮಾರ್.
- 1996 ರಲ್ಲಿ 11 ನೇ ಲೋಕಸಭೆಗೆ ಕನಕಪುರ ಕ್ಷೇತ್ರದಿಂದ ಆಯ್ಕೆ.
2004 ರಲ್ಲಿ ಕರ್ನಾಟಕ ವಿಧಾನಸಭೆಗೆ ಆಯ್ಕೆ.
- ಫೆಬ್ರವರಿ 2006 ರಿಂದ ಅಕ್ಟೋಬರ್ 2007 ಮೊದಲ ಬಾರಿಗೆ ರಾಜ್ಯದ ಮುಖ್ಯಮಂತ್ರಿ.
2009 ರಲ್ಲಿ 15ನೇ ಲೋಕಸಭೆಗೆ ಎರಡನೇ ಬಾರಿ ಆಯ್ಕೆ.
- 2018ರ 15 ನೇ ವಿಧಾನಸಭೆಗೆ ಆಯ್ಕೆ, ಎರಡನೇ ಬಾರಿ ಮುಖ್ಯಮಂತ್ರಿ ಪಟ್ಟ.





ನಿಷೇಧವನ್ನು ಜಾರಿಗೆ ತರುವ ಮೂಲಕ ಮಹಿಳೆಯರ ಪಾಲಿಗೆ ಕುಮಾರಣ್ಣ ಆದರು. ಅವರು ನಡೆಸುತ್ತಿದ್ದ ಜನತಾದರ್ಶನ ರಾತ್ರಿಯಾದರೂ ಮುಗಿಯುತ್ತಿರಲಿಲ್ಲ. ಅಷ್ಟರ ಮಟ್ಟಿಗೆ ಕುಮಾರಸ್ವಾಮಿಯವರ ಮೇಲೆ ನಂಬಿಕೆ ಇಟ್ಟು ತಮ್ಮ ಸಮಸ್ಯೆಯನ್ನು ಹೊತ್ತು ಜನಸಾಮಾನ್ಯರು ಸಾಗರೋಪಾದಿಯಲ್ಲಿ ಜನತಾದರ್ಶನಕ್ಕೆ ಬರುತ್ತಿದ್ದರು. ಅವರು ಕೂಡ ಯಾವುದೇ ಕಾರಣಕ್ಕೂ ಜನತಾದರ್ಶನದ ಸಮಯವನ್ನು ಬೇರೆ ಕಾರ್ಯಕ್ಕಾಗಿ ಮುಂದೂಡುತ್ತಿರಲಿಲ್ಲ. ಹಾಗಾಗಿ ಅವರ ಕಾಲದಲ್ಲಿ ಜನತಾದರ್ಶನವು ಹೆಚ್ಚು ಜನಪ್ರಿಯತೆಯನ್ನು ಪಡೆದಿತ್ತು. ಬೆಳಗಾವಿ ಸುವರ್ಣಸೌಧ ನಿರ್ಮಾಣ, ಶಾಲಾ ವಿಧ್ಯಾರ್ಥಿನಿಯರಿಗೆ ಸೈಕಲ್, ಮುಂತಾದ ಕಾರ್ಯಕ್ರಮಗಳ ಯಶಸ್ಸಿನ ಜೊತೆಗೆ ಅಂದು ನಡೆಸಿದ ಜನಪರ ಕಾರ್ಯಕ್ರಮಗಳಿಂದ ನಾಡಿನ ಜನತೆಯ ಮನೆ-ಮನಗಳನ್ನು ಮುಟ್ಟಿ ಜನಮಾನಸದ ಹೃದಯ ಸಾಮ್ರಾಟನಾಗಿ ನೆಲೆನಿಂತಿದ್ದು ಸುಳ್ಳಲ್ಲ. ಹಾಗಾಗಿಯೇ ಅಂದು ಎಲ್ಲರ ಪ್ರೀತಿಯ 'ಕುಮಾರಣ್ಣ'ನಾಗುವ ಮೂಲಕ ಶಾಶ್ವತವಾಗಿ ಮನಗೆದ್ದದ್ದು ಈಗ ಇತಿಹಾಸ.

ಕನಿಷ್ಠ ಅವಧಿಯಲ್ಲಿ ಅತಿಹೆಚ್ಚು ಜನಪರ ಕಾರ್ಯಕ್ರಮಗಳನ್ನು ಮಾಡಿ ನಾಡಿನುದ್ದಕ್ಕೂ ಜನನಾಯಕನ ಪಟ್ಟಗಳಿಸುವ ಮೂಲಕ ಖ್ಯಾತಿ ಪಡೆದ ರಾಜ್ಯದ ಮುಖ್ಯಮಂತ್ರಿಗಳಲ್ಲಿ ಮತ್ತೊಬ್ಬರಿಲ್ಲ.

ಮುಂದೆ ನಡೆದ ರಾಜಕೀಯ ವಿದ್ಯಾಮಾನಗಳಲ್ಲಿ ಮುಖ್ಯಮಂತ್ರಿ ಗಾದಿಗೆ ರಾಜೀನಾಮೆ ನೀಡಿದರೂ ಸಹ, 2008 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗ ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ ಕೀರ್ತಿಯೂ ಕುಮಾರಸ್ವಾಮಿ ಅವರದು. ವಿಪಕ್ಷ ನಾಯಕರಾಗಿ ಅವರು ಆಡಳಿತ ಪಕ್ಷದಲ್ಲಿನ ಒಂದೊಂದೇ ಹಗರಣಗಳನ್ನು ದಾಖಲೆಗಳ ಸಮೇತ ಬಯಲಿಗೆ ತರುವ ಮೂಲಕ ರಾಷ್ಟ್ರಮಟ್ಟದಲ್ಲಿ ಸಂಚಲನವನ್ನು ಮೂಡಿಸಿದರು. ಆನಂತರದ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಿಂದ ನಿರಂತರ ಗೆಲುವು ಸಾಧಿಸಿಕೊಂಡು ಬಂದ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯದಾದ್ಯಂತ ಪ್ರವಾಸ ಮಾಡುತ್ತಾ ಪಕ್ಷವನ್ನು ಸಂಘಟಿಸುತ್ತಾ ಹೆಜ್ಜೆ ಇಟ್ಟರು.

2018 ರ ಈ ಚುನಾವಣೆ ಸಂದರ್ಭದಲ್ಲಿ ಅನಾರೋಗ್ಯದ ನಡುವೆಯೂ ಪಕ್ಷದ ಗೆಲುವಿಗಾಗಿ ಸತತವಾಗಿ ರಾಜ್ಯದಾದ್ಯಂತ ಪ್ರವಾಸ ಮಾಡಿದರು. ತಾವು ಸ್ಪರ್ಧಿಸಿದ್ದ ರಾಮನಗರ ಹಾಗೂ ಚನ್ನಪಟ್ಟಣ ಎರಡೂ ಕ್ಷೇತ್ರಗಳಲ್ಲಿ ಗೆಲುವು ದಾಖಲಿಸಿದರು. ಅಂತಿಮವಾಗಿ ಚನ್ನಪಟ್ಟಣದ ಗೆಲುವನ್ನು ಉಳಿಸಿಕೊಳ್ಳುವ ಮೂಲಕ ಚನ್ನಪಟ್ಟಣದ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಮುಖ್ಯಮಂತ್ರಿ ಗಾದಿಗೇರಿದ ಇತಿಹಾಸ ಬರೆದಿದ್ದಾರೆ.

1959 ಡಿಸೆಂಬರ್ 16 ರಂದು ಹೆಚ್.ಡಿ.ದೇವೇಗೌಡ ಹಾಗೂ ಚೆನ್ನಮ್ಮ ದಂಪತಿಯ ಮಗನಾಗಿ ಜನಿಸಿದ ಹೆಚ್.ಡಿ.ಕುಮಾರಸ್ವಾಮಿ ಅವರ ರಾಜಕೀಯ ಬದುಕು ಆರಂಭಗೊಂಡಿದ್ದು 20 ವರ್ಷಗಳ ಹಿಂದೆ. ಆದರೆ ಅವರ ರಾಜಕೀಯ ಉತ್ತರಾದಾಯಿತ್ವ, ಬದ್ಧತೆ ಮತ್ತು ಜನಪರ ಕಾಳಜಿ ಅವರನ್ನು ಮತ್ತೆ ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರಕಾರದಲ್ಲಿ ಎರಡನೇ ಬಾರಿಗೆ ಮುಖ್ಯಮಂತ್ರಿ ಗಾದಿಗೆ ತಂದು ಕೂರಿಸಿದೆ. ಜನಸಾಮಾನ್ಯರ, ರೈತರ- ಮಹಿಳೆಯರ ಪರ ಸದಾ ಮರುಗುವ ಕುಮಾರಣ್ಣ ಅವರೀಗ ತಮ್ಮ ಎರಡನೇ ಇನ್ನಿಂಗ್ಸ್‌ನಲ್ಲಿ 'ಕುಮಾರ ಪರ್ವ'ದ ಛಾಪು ಮೂಡಿಸಬೇಕಿದೆ. ಜನರ ಅಭಿಮಾನ ಮತ್ತು ನಿರೀಕ್ಷೆಗೆಗಳಿಗೆ ಸ್ಪಂದಿಸುವ ಮೂಲಕ ಯಶಸ್ವಿಯಾಗುತ್ತಾರೆಂಬ ನಿರೀಕ್ಷೆಗೆ ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ವೇಳೆ ನೆರೆದಿದ್ದ ಜನಸಾಗರವೇ ಸಾಕ್ಷಿಯಾಗಿದೆ.



# ಮುಖ್ಯಮಂತ್ರಿ ಕುಮಾರಸ್ವಾಮಿಯವರ

# ಅಂತರಾಳದ ಅನಿಸಿಕೆ

**ಈ** ಲೋಕವೆಂಬ ದಿವ್ಯಕ್ಷೇತ್ರದಲ್ಲಿ ಯಾತ್ರಿಕರು ನಾವು. ಸತ್ಯ ಮತ್ತು ಪ್ರಾಮಾಣಿಕತೆ ಇದ್ದಲ್ಲಿ ಮಾತ್ರ ಇಲ್ಲಿನ ಪಯಣ ಸುಲಭ.

ಎರಡನೇ ಬಾರಿಗೆ ಕರ್ನಾಟಕವನ್ನು ಮುನ್ನಡೆಸುವ ಅವಕಾಶ ನನ್ನನ್ನು ಅರಸಿ ಬಂದಿದೆ. 2018 ರ ವಿಧಾನ ಸಭಾ ಚುನಾವಣೆಯಲ್ಲಿ ಯಾವುದೇ ರಾಜಕೀಯ ಪಕ್ಷಕ್ಕೂ ಬಹುಮತದ ಮುದ್ರೆಯನ್ನು ನೀಡದ ಮತದಾರರು ಮೈತ್ರಿ ಸರ್ಕಾರದ ರಚನೆಗೆ ಅವಕಾಶ ಕಲ್ಪಿಸಿದ್ದಾರೆ.

ರಾಷ್ಟ್ರದ ಹಿತದೃಷ್ಟಿಯಿಂದ ಸಮಾನ ಮನಸ್ಕರ, ಜಾತ್ಯಾತೀತ ಸಿದ್ಧಾಂತಗಳ ವೇದಿಕೆಯನ್ನು ಕಟ್ಟುವ ವಿಶಾಲ ಕನಸು ಮಾಜಿ ಪ್ರಧಾನಿ ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡ ಅವರದು. ಸ್ವಾತಂತ್ರ್ಯದ ನಂತರ ರಾಷ್ಟ್ರವನ್ನು ಶಕ್ತಿಶಾಲಿಯನ್ನಾಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಹಾಗೂ ಪ್ರಾದೇಶಿಕ ಪಕ್ಷವಾಗಿ ರಾಷ್ಟ್ರದ ಗಮನ ಸೆಳೆದ ಬಹುಜನ ಸಮಾಜವಾದಿ ಪಕ್ಷಗಳು ಒಟ್ಟಾಗಿ ಇಂದು ಕರ್ನಾಟಕವನ್ನು ಮುನ್ನಡೆಸುವ ಜವಾಬ್ದಾರಿಯನ್ನು ನನ್ನ ಹೆಗಲಿಗೇರಿಸಿವೆ.



**ಸಂದಿಗ್ಧ ರಾಜಕೀಯ ಪರಿಸ್ಥಿತಿಯಲ್ಲಿ ಅರಳಿದ ಸಾಂದರ್ಭಿಕ ಶಿಶು ನಾನು.**

ಇದಕ್ಕೆ ಕಾರಣಕರ್ತರಾದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನೇತಾರರಾದ ಶ್ರೀಮತಿ ಸೋನಿಯಾ ಗಾಂಧಿ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾದ ಶ್ರೀ ರಾಹುಲ್ ಗಾಂಧಿ, ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ, ಬಹುಜನ ಸಮಾಜದ ಪಕ್ಷದ ಅಧ್ಯಕ್ಷರಾದ ಶ್ರೀಮತಿ ಮಾಯಾವತಿ, ಕಾಂಗ್ರೆಸ್ ನಾಯಕರುಗಳಾದ ಶ್ರೀ ಗುಲಾಬ್‌ನಬಿ ಅಜಾದ್, ಶ್ರೀ ಕೆ.ಸಿ. ವೇಣುಗೋಪಾಲ್, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ, ಕರ್ನಾಟಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಹಾಗೂ ಇಂದು ನನ್ನೊಡನೆ ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಾ॥ ಜಿ. ಪರಮೇಶ್ವರ್, ಕಾಂಗ್ರೆಸ್ ಪಕ್ಷದ ಪ್ರಚಾರ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ.ಕೆ. ಶಿವಕುಮಾರ್ ಹಾಗೂ ನಮ್ಮ ಪಕ್ಷದ ನೇತಾರರು, ನನ್ನ ಮಾರ್ಗದರ್ಶಿಗಳು ಆದ ಶ್ರೀ ಹೆಚ್.ಡಿ. ದೇವೇಗೌಡರವರಿಗೆ ನಾನು ಚಿರಋಣಿ.

ಇಂದು ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ನಡೆದ ಪ್ರಮಾಣ ವಚನ ಸಮಾರಂಭ ನಾನು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದ ಸಮಾರಂಭವಲ್ಲ. ಜನರದೇ ಆದ ಆಡಳಿತ – ಅಸ್ತಿತ್ವಕ್ಕೆ ಬರುತ್ತಿರುವುದಕ್ಕೆ ಸಾಕ್ಷ್ಯ ನೀಡುವ ಸಮಾರಂಭ.

ಅಮೆರಿಕಾದ ಜನಪ್ರಿಯ ಅಧ್ಯಕ್ಷರಾಗಿದ್ದ ಶ್ರೀ ಅಬ್ರಹಾಂ ಲಿಂಕನ್ ಅವರು ಬಹಳ ಹಿಂದೆಯೇ ಪ್ರಜಾಪ್ರಭುತ್ವಕ್ಕೆ ಒಂದು ಪ್ರಚಲಿತ ವೇದವಾಕ್ಯ ನೀಡಿದ್ದಾರೆ. **Democracy is of the people, by the people, for the people – ಜನರಿಂದ, ಜನರಿಗಾಗಿ, ಜನರಿಗೋಸ್ಕರ ರಚಿಸಲ್ಪಟ್ಟ ಸರ್ಕಾರವೇ ಪ್ರಜಾಪ್ರಭುತ್ವ**. ಇದನ್ನು ಅಕ್ಷರಶ: ಪಾಲಿಸಿದವನು ನಾನು. ಇಂದು ರಚಿತವಾಗಿರುವ ಸರ್ಕಾರ ಯಾವುದೇ ಪಕ್ಷಕ್ಕೆ ಸೀಮಿತವಾದುದಲ್ಲ. ಇದು ಜನರಿಗೋಸ್ಕರ, ಜನರೇ ರಚಿಸಿಕೊಂಡ ಮೈತ್ರಿ ಸರ್ಕಾರ. ನಾನು ಈ ಸರ್ಕಾರದಲ್ಲಿ ಸಮಸ್ತ ಕನ್ನಡಿಗರ ಪ್ರತಿನಿಧಿ ಮಾತ್ರ.

ಸರ್ಕಾರದ ರಚನೆಯ ಸಂದರ್ಭದಲ್ಲಿ, ಇಂದು ರಾಷ್ಟ್ರದ ಬಹುತೇಕ ನಾಯಕರು ಉಪಸ್ಥಿತರಿದ್ದು, ಇಡೀ ರಾಷ್ಟ್ರಕ್ಕೆ ಜಾತ್ಯಾತೀತ ಸರ್ಕಾರದ ರಚನೆಯ ಅಗತ್ಯತೆಯನ್ನು ಪ್ರತಿಪಾದಿಸಿದ್ದಾರೆ. ನಾಡಿನ ಹಿರಿಯ ರಾಜಕಾರಣಿಗಳಾದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳಾದ ಶ್ರೀಮತಿ ಮಮತಾ ಬ್ಯಾನರ್ಜಿ, ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ಚಂದ್ರಬಾಬು ನಾಯ್ಡು, ತೆಲಂಗಾಣ ಮುಖ್ಯಮಂತ್ರಿಗಳಾದ ಶ್ರೀ ಚಂದ್ರಶೇಖರರಾವ್, ಪಾಂಡಿಚೇರಿ ಮುಖ್ಯಮಂತ್ರಿಗಳಾದ ಶ್ರೀ ನಾರಾಯಣಸ್ವಾಮಿ, ಕೇರಳ ಮುಖ್ಯಮಂತ್ರಿಗಳಾದ ಶ್ರೀ ಪಿನರಾಯಿ ವಿಜಯನ್, ಪಂಜಾಬ್ ಮುಖ್ಯಮಂತ್ರಿಗಳಾದ ಶ್ರೀ ಅಮರಿಂದರ್ ಸಿಂಗ್, ದೆಹಲಿಯ ಮುಖ್ಯಮಂತ್ರಿಗಳಾದ ಶ್ರೀ ಅರವಿಂದ್ ಕೇಜ್ರಿವಾಲ್, ತಮಿಳುನಾಡಿನ ಡಿ.ಎಂ.ಕೆ. ಮುಖ್ಯಸ್ಥರಾದ ಶ್ರೀ ಎಂ.ಕೆ. ಸ್ಟಾಲಿನ್, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಅಖಿಲೇಶ್ ಯಾದವ್ ಹಾಗೂ ಇಲ್ಲಿ ಆಗಮಿಸಿದ ಎಲ್ಲರಿಗೂ ನಾನು ಕರ್ನಾಟಕದ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.

**"ಸತ್ಯವೇ ಅಂತಿಮ"** ಎಂದು ನುಡಿದ ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರ ನಾಣ್ನುಡಿ ಸದಾ ನನ್ನ ಕಣ್ಣ ಮುಂದೆ ನಿಂತಿದೆ. ಕಳೆದ ಹನ್ನೆರಡು ವರ್ಷಗಳಲ್ಲಿ ನಾನು ಹತ್ತು ಹಲವಾರು ಅಗ್ನಿ ಪರೀಕ್ಷೆಗಳನ್ನು ಎದುರಿಸಿದ್ದೇನೆ. ಚರ್ಚೆಗಳು, ಪ್ರಯತ್ನಗಳು, ನಿಷ್ಕರ್ಷೆಗಳು ಮೊದಲಾದ ಹತ್ತು ಹಲವಾರು ಮೂಸೆಗಳಲ್ಲಿ ಬೆಂದು ಬಂದಿದ್ದೇನೆ. ಅಂತಿಮವಾಗಿ ನನಗೆ ಅನಿಸುವುದು **"ಸತ್ಯ ಮೇವ ಜಯತೇ"**. ಇಂದಿನ ಮೈತ್ರಿ ಸರ್ಕಾರದ ಅಸ್ತಿತ್ವದಲ್ಲೂ ಸತ್ಯದ ಗೆಲುವನ್ನು ನಾನು ಪ್ರತಿಪಾದಿಸುತ್ತೇನೆ.

**ಆತ್ಮೀಯರೇ,**

ಈ ಹಿಂದೆ 20 ತಿಂಗಳ ಕಾಲ ಈ ರಾಜ್ಯವನ್ನು ಮುನ್ನಡೆಸುವ ಅವಕಾಶ ಸಿಕ್ಕಿದಾಗ ಹಲವಾರು ಕನಸುಗಳನ್ನು ಕಂಡು ಅವುಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಪಟ್ಟಿದ್ದೇನೆ. **ಭಾರತ, ಹಳ್ಳಿಗಳಲ್ಲಿ ಉಸಿರಾಡುತ್ತಿದೆ** ಎನ್ನುವ ಗಾಂಧೀಜಿಯವರ ಮಾತನ್ನು ನಿಜ ಮಾಡಲು ಪ್ರತಿ ಹಳ್ಳಿಯಲ್ಲಿಯೂ ಒಂದು ಶಾಲೆ, ಆರೋಗ್ಯ ಕೇಂದ್ರ, ಮೂಲಭೂತ ಸೌಲಭ್ಯ ಮುಂತಾದುವುಗಳನ್ನು ಒಳಗೊಂಡ **"ಸುವರ್ಣಗ್ರಾಮ"** ಯೋಜನೆಯ ಕನಸು ಕಂಡು ಅದನ್ನು ಕೃತಿಗಿಳಿಸಲು ಯತ್ನಿಸಿದ್ದೇನೆ.

ಶಿಕ್ಷಣಕ್ಕೆ ಒತ್ತು ಕೊಟ್ಟು ಒಂದು ಸಾವಿರ ಪ್ರೌಢಶಾಲೆಗಳನ್ನು ತೆರೆದಿದ್ದೇನೆ. ನೂರಾರು ಕಾಲೇಜುಗಳು, ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸಿದ್ದೇನೆ. ನಮ್ಮ ಅದ್ಭುತ ಸಂಪನ್ಮೂಲಗಳಲ್ಲಿ ಒಂದಾದ ಯುವ ಶಕ್ತಿಗೆ ಹೊಸ ಆಯಾಮ ನೀಡಲು ಯತ್ನಿಸಿದ್ದೇನೆ. ನನ್ನ ಸಹೋದರಿಯರ ಬಾಳು ಹಸನು ಮಾಡಲು ಸಾಕಷ್ಟು ಕೆಲಸ ಮಾಡಿದ್ದೇನೆ. ನಮ್ಮೂರ ಆಡಳಿತ ದೂರದ ದಿಲ್ಲಿಯಿಂದಾಗದೇ ನಮ್ಮ ನಡುವಿನ ಹಳ್ಳಿಗಳಿಂದಲೇ ಆಗಬೇಕು ಎನ್ನುವ ನಿಟ್ಟಿನಲ್ಲಿ ಪ್ರಯತ್ನ ಪಟ್ಟಿದ್ದೇನೆ.

ನಾನು ನಡೆಸಿದ ಗ್ರಾಮ **ವಾಸ್ತವ್ಯ** ಮತ್ತು **ಜನತಾ ದರ್ಶನಕ್ಕೆ** ಮಾಧ್ಯಮ ಸ್ನೇಹಿತರು ಇನ್ನಿಲ್ಲದ ಪ್ರಚಾರ ಕೊಟ್ಟು ನನ್ನನ್ನು ಹುರಿದುಂಬಿಸಿದರು. ಗ್ರಾಮ ವಾಸ್ತವ್ಯ ಮತ್ತು ಜನತಾ ದರ್ಶನದ ಮೂಲಕ ಸಹಸ್ರಾರು ಅಸಂಘಟಿತ ವರ್ಗಗಳು



ಶಾಶ್ವತ ಪರಿಹಾರ ಪಡೆದಿದ್ದಾರೆ. ಹಲವು ಸಾಮಾಜಿಕ ಸಮಸ್ಯೆಗಳಿಗೆ ಈ ಯೋಜನೆಗಳು ತಿಲಾಂಜಲಿ ಹೇಳಿದವು. ದಂತ ಗೋಪುರದ ಸರ್ಕಾರವನ್ನು ಜನರ ನಡುವೆ ಕೊಂಡೊಯ್ಯುವ ಸಾಹಸವನ್ನೂ ಮಾಡಿದ್ದೇನೆ. ಈ ಯೋಜನೆಗಳನ್ನು ಮುಂದುವರೆಸುವ ಆಶಯ ನನ್ನದು.

ಹತ್ತು ವರ್ಷಗಳ ಹಿಂದೆ ಅಪೂರ್ಣಗೊಂಡ ಕನಸುಗಳನ್ನು ಸಾಕಾರಗೊಳಿಸಲು ಪೂರ್ಣ ಬಹುಮತ ನೀಡಿ ಎಂದು ಜನತೆಯ ಮುಂದೆ ಶಿರಬಾಗಿ ಬೇಡಿದೆ. ಬಹುಮತ ನೀಡಲಿಲ್ಲ. ಆದರೆ ಮೈತ್ರಿ ಸರ್ಕಾರದ ಮೂಲಕ ನಾಡಸೇವೆಗೆ ಅವಕಾಶವನ್ನಂತು ಕಲ್ಪಿಸಿದ್ದೀರಿ.

ಕಳೆದ ಆರು ತಿಂಗಳ ಕಾಲ ಇಡೀ ಕರ್ನಾಟಕವನ್ನು ಸುತ್ತಿದ ಸಂದರ್ಭದಲ್ಲಿ ಹಲವು ಭರವಸೆಗಳನ್ನು, ವಚನಗಳನ್ನು ನೀಡಿದ್ದೇನೆ. ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಅವುಗಳೆಲ್ಲವೂ ಪ್ರತಿಬಿಂಬಿಸಲ್ಪಟ್ಟಿವೆ. ಇವುಗಳೆಲ್ಲವನ್ನು ಸಮನ್ವಯಗೊಳಿಸಿ ಅನುಷ್ಠಾನಕ್ಕೆ ತರಬೇಕಾದ ಜವಾಬ್ದಾರಿ ನನ್ನ ಮೇಲಿದೆ.

ರೈತರ ಪಾಲಿನ ಬಹುದೊಡ್ಡ ಸಮಸ್ಯೆಯಾಗಿರುವ ಸಾಲವನ್ನು ಮನ್ನಾ ಮಾಡಬೇಕೆಂಬುದು ನನ್ನ ಭರವಸೆಗಳಲ್ಲಿ ಅತ್ಯಂತ ಪ್ರಮುಖವಾದದ್ದು. ಈ ವಚನವನ್ನು ಪಾಲಿಸಲು ನಾನು ಬದ್ಧನಾಗಿದ್ದೇನೆ. ಮೈತ್ರಿ ಪಕ್ಷಗಳೊಂದಿಗೆ ಚರ್ಚಿಸಿ ಅನುಷ್ಠಾನಗೊಳಿಸುತ್ತೇನೆ.

ಇಸ್ರೇಲ್‌ನ ಕೃಷಿ ಮಾದರಿಯನ್ನು ನಮ್ಮ ರೈತರು ಬಳಸಿಕೊಳ್ಳಬೇಕೆಂಬುದು ನನ್ನ ಅಚಲ ನಂಬಿಕೆ. ಸಾಂಪ್ರಾದಾಯಿಕ ಕೃಷಿ ಪದ್ಧತಿಯೊಂದಿಗೆ ಆಧುನಿಕ ತಂತ್ರಜ್ಞಾನ ಬಳಕೆಯತ್ತ ರೈತರು ದಾಪುಗಾಲು ಹಾಕಬೇಕು. ಈ ಹಿನ್ನೆಲೆಯಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ನಾನು ಕಾರ್ಯಪ್ರವೃತ್ತನಾಗುತ್ತೇನೆ.

ಸಾಲದ ಬಾಧೆಗೆ ಹೆದರಿ ಆತ್ಮಹತ್ಯೆಗೆ ಶರಣಾಗಬಾರದು ಎಂಬುದು ನಾನು ನನ್ನ ರೈತ ಬಂಧುಗಳಿಗೆ ಮಾಡುವ ಕಳಕಳಿಯ ಮನವಿ. ನನ್ನ ಪ್ರವಾಸದ ಅವಧಿಯಲ್ಲಿ ನಮ್ಮ ರೈತರು ಖಾಸಗಿ ಲೇವಾದೇವಿಗಾರರ ಸುಳಿಯಲ್ಲಿ ಸಿಲುಕಿ ಕಷ್ಟಪಡುವುದನ್ನು ನಾನು ಕಂಡಿದ್ದೇನೆ. ಖಾಸಗಿ ವ್ಯಕ್ತಿಗಳಿಂದ ರೈತರು ಸಾಲ ಮುಕ್ತರಾಗಬೇಕು ಎಂಬುದು ಕೂಡಾ ನನ್ನ ಹಂಬಲ. ಈ ನಿಟ್ಟಿನಲ್ಲೂ ಸಹ ನಾನು ಕಾರ್ಯಪ್ರವೃತ್ತನಾಗುತ್ತೇನೆ. ಮೈತ್ರಿ ಸರ್ಕಾರ ಸದಾ ನಿಮ್ಮೊಂದಿಗೆ ಇದ್ದೇ ಇರುತ್ತದೆ ಎನ್ನುವ ಅಚಲ ಭರವಸೆಯನ್ನು ನಾನು ನೀಡುತ್ತಿದ್ದೇನೆ.

ನಮ್ಮ ಯುವಶಕ್ತಿಗೊಂದು ಹೊಸ ಆಯಾಮ ನೀಡಲು ಎಲ್ಲಾ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ನಿರಂತರ ಉದ್ಯೋಗ ಸೃಷ್ಟಿ ಮತ್ತು ಸ್ವಾವಲಂಬಿ ಬದುಕನ್ನು ಅವರಿಗೆ ನೀಡುವಲ್ಲಿ ನಾನು ಅವಿರತವಾಗಿ ಶ್ರಮಿಸುತ್ತೇನೆ.

ಸಶಕ್ತ ಸ್ವಾವಲಂಬಿ, ಸ್ವಾಭಿಮಾನಿ ಮಹಿಳೆ ಯಾವುದೇ ಸಮಾಜದ ಆಸ್ತಿ. ನಮ್ಮ ಮಹಿಳೆಯರು ಸಶಕ್ತರಾಗುವ ಎಲ್ಲ ಮಾರ್ಗಗಳನ್ನು ತೆರೆದು ಅವರ ಬದುಕಿಗೆ ಆಧಾರ ಸ್ತಂಭವಾಗುತ್ತೇನೆ ಎಂಬ ವಚನ ನೀಡುತ್ತಿದ್ದೇನೆ.

**ಬೆಂಗಳೂರಿಗರಲ್ಲಿ ನನ್ನ ಮನವಿ :** ನಾಡಪ್ರಭು ಕೆಂಪೇಗೌಡರು ನಿರ್ಮಿಸಿದ ನಮ್ಮ ಬೆಂಗಳೂರು ವಿಶ್ವದ ಮುಕುಟ ಮಣಿ. ಭಾರತದ ಆರ್ಥಿಕತೆಯಲ್ಲಿ ಬೆಂಗಳೂರಿನ ಪಾತ್ರ ಬಹು ದೊಡ್ಡದು. ಇಂದು ಮನೆ ಮಾತಾಗಿರುವ ಮೆಟ್ರೋ ರೈಲು ಆರಂಭಕ್ಕೆ ಹಸಿರು ನಿಶಾನೆ ತೋರಿಸಲು ಹನ್ನೊಂದು ವರ್ಷಗಳ ಹಿಂದೆ ನವದೆಹಲಿಯಲ್ಲಿ ಮೆಟ್ರೋ ರೈಲಿನಲ್ಲಿ ಪಯಣಿಸಿದ್ದೆ. ಅಂದು ದೆಹಲಿ ಮೆಟ್ರೋ ಮುಖ್ಯಸ್ಥರಾಗಿದ್ದ ಶ್ರೀ ಶ್ರೀಧರನ್ ತಕ್ಷಣವೇ ಬೆಂಗಳೂರು ಮೆಟ್ರೋ ಕಾಮಗಾರಿಗೆ ಚಾಲನೆ ನೀಡಿ ಎಂದು ಸಲಹೆ ಮಾಡಿದ್ದರು.

ಅಂದು ಕೇಂದ್ರ ನಗರಾಭಿವೃದ್ಧಿ ಸಚಿವರಾಗಿದ್ದ ಶ್ರೀ ಜಯಪಾಲ ರೆಡ್ಡಿ ಅವರನ್ನು ಭೇಟಿ ಮಾಡಿ ಈ ಯೋಜನೆಗೆ ಚಾಲನೆ ನೀಡುವಂತೆ ಕೋರಿಕೆ ಸಲ್ಲಿಸಿದ್ದೆ. ಅಂದಿನ ಪ್ರಧಾನ ಮಂತ್ರಿ ಶ್ರೀ ಮನಮೋಹನ್ ಸಿಂಗ್ ಅವರು ನನ್ನ ಮನವಿಯನ್ನು ಮನ್ನಿಸಿ ಮೆಟ್ರೋ ರೈಲು ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಿದ್ದರು.

ಇಂದು ಲಕ್ಷಾಂತರ ಜನರ ಸ್ನೇಹಿತ ಮೆಟ್ರೋ ರೈಲು. ಮೆಟ್ರೋ ರೈಲ್ ಜಾಲವನ್ನು ವಿಸ್ತರಿಸಲು ಆದ್ಯತೆ ನೀಡುತ್ತೇನೆ.

ಬೆಂಗಳೂರು ನಗರ ಪಾಲಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನಾಗಿಸಿದ ಹೆಮ್ಮೆ ನನ್ನದು. ಇದರಿಂದ ಬೆಂಗಳೂರಿನ ಸುತ್ತಮುತ್ತಲಿನ ಹಲವು ಪಟ್ಟಣ ಪಂಚಾಯಿತಿ/ನಗರ ಸಭೆಗಳು ಹಾಗೂ 113 ಗ್ರಾಮಗಳು ಇಂದು ಬೆಂಗಳೂರಿನ ಭಾಗವಾಗಿ ಸರ್ವಾಂಗೀಣ ಅಭಿವೃದ್ಧಿ ಕಾಣುತ್ತಿದೆ. ಈ ಬೆಂಗಳೂರನ್ನು ಮತ್ತಷ್ಟು ಸುಂದರವಾಗಿಸಬೇಕು. ಮೂಲಸೌಲಭ್ಯಗಳನ್ನು ಮತ್ತಷ್ಟು ವಿಸ್ತರಿಸಬೇಕು ಎಂಬುದು ನನ್ನ ಹೆಬ್ಬಯಕೆ. ಈ ನಿಟ್ಟಿನಲ್ಲಿ ಬೆಂಗಳೂರಿನ ಸರ್ವಾಂಗೀಣ ಅಭಿವೃದ್ಧಿಗೆ ನೀಲಿ ನಕ್ಷೆಯನ್ನು ಸಿದ್ಧಪಡಿಸಲಿಚ್ಛಿಸುತ್ತೇನೆ. ಬೆಂಗಳೂರಿನ ಸೌಂದರ್ಯ ಕಾಪಾಡುವುದು ಪ್ರತಿಯೊಬ್ಬ ಬೆಂಗಳೂರಿಗನ ಕರ್ತವ್ಯ. ಈ ನಿಟ್ಟಿನಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ನಿಯಮಗಳಿಗೆ ಸ್ಪಂದಿಸಿ ಕಸ ವಿಲೇವಾರಿ ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಿ.

ಬೆಂಗಳೂರಿನಂತೆಯೇ ಇತರ ಎಲ್ಲಾ ಜಿಲ್ಲಾ ಕೇಂದ್ರಗಳನ್ನು ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಸಬೇಕು ಎನ್ನುವುದು ನನ್ನ ಸಂಕಲ್ಪ. ಈ ಗುರುತರ ಹೊಣೆಗಾರಿಕೆಯನ್ನು ನಾನು ಆಯಾ ಜಿಲ್ಲೆಗಳ ಉಸ್ತುವಾರಿ ಸಚಿವರಿಗೆ ನೀಡಿ ಅವರ ಕಾರ್ಯವೈಖರಿಯನ್ನು ನಿಯಮಿತವಾಗಿ ಗಮನಿಸುತ್ತೇನೆ.

**"ಅಧಿಕಾರದಲ್ಲಿರುವ ನಾವೆಲ್ಲರು ಸರ್ಕಾರಿ ವ್ಯವಸ್ಥೆಯಲ್ಲಿ ಕೇವಲ ಧರ್ಮದರ್ಶಿಗಳು – trustees "** ಎಂಬುದು ಭಾರತದ ಮೊದಲ ಪ್ರಧಾನಿ ಶ್ರೀ **ಪಂಡಿತ್ ಜವಾಹರಲಾಲ್ ನೆಹರು** ಅವರು ಹೇಳಿದ ಮಾತು. ಭಾರತದ ಸರ್ವಾಂಗೀಣ ಅಭಿವೃದ್ಧಿಗೆ ನೀಲಿ ನಕಾಶೆ ಕೊಟ್ಟವರು ಅವರು. ಅಭಿವೃದ್ಧಿಯ ಮಾರ್ಗ ತೋರಿಸಿದವರು ಅವರು. ನಮ್ಮ ಸರ್ಕಾರದ ಆಶಯವೂ ಇದೇ ಆಗಿರುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಕಾಂಗ್ರೆಸ್ ನೇತೃತ್ವದ ಸರ್ಕಾರ ಕರ್ನಾಟಕವನ್ನು ಹಸಿವು ಮುಕ್ತ ರಾಜ್ಯ ಮಾಡುವ ದಿಸೆಯಲ್ಲಿ ಅನ್ನಭಾಗ್ಯ, ಇಂದಿರಾ ಕ್ಯಾಂಟಿನ್, ಮತ್ತಿತರ ಉತ್ತಮ ಕಾರ್ಯಕ್ರಮಗಳನ್ನು ನೀಡಿದೆ. ಇಂತಹ ಉತ್ತಮ ಕಾರ್ಯಕ್ರಮಗಳನ್ನು ಶಕ್ತಿಯುತಗೊಳಿಸಿ ಮೈತ್ರಿ ಸರ್ಕಾರ ಮುಂದುವರೆಸುವುದು.





***Poverty is not an accident. It is man made. It can be removed***

***- Nelson Mandela***



ಚುನಾವಣಾ ಪ್ರಚಾರದ ಸಂದರ್ಭದಲ್ಲಿ ನನ್ನ ಅಭಿಮಾನಿಗಳು ನನ್ನ ಯಾತ್ರೆಗೆ ಇಟ್ಟ ಹೆಸರು ವಿಕಾಸ ಯಾತ್ರೆ. ಇದನ್ನು ಕೆಲವರು ವಿಕಾಸ ಪರ್ವ ಎಂದರು. ಜನನಾಯಕ ಶ್ರೀ **ಜಯಪ್ರಕಾಶ್ ನಾರಾಯಣ್** ಹೇಳಿದಂತೆ ಒಂದು **total revolution** ತರಬೇಕೆನ್ನುವುದು ನನ್ನ ಬಯಕೆ. ಇನ್ನು ಮುಂದೆ ಕರ್ನಾಟಕದ ವಿಕಾಸವೇ ನನ್ನ ಗುರಿ. ಸರಳ ಮಾತಿನಲ್ಲಿ **ಬಸವಣ್ಣ** ಅವರು ಹೇಳಿದಂತೆ **ಕಾಯಕವೇ ಕೈಲಾಸ.**

ಈ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬರುವ ಮುನ್ನ ಕಳೆದ ಒಂದು ವಾರ ನಡೆದ ರಾಜಕೀಯ ವಿದ್ಯಮಾನಗಳು ಇಡೀ ರಾಷ್ಟ್ರದ ಗಮನ ಸೆಳೆದಿವೆ. ಶಾಸಕಾಂಗ ಹಾಗೂ ನ್ಯಾಯಾಂಗ ನಡುವೆ ನಡೆದ ವಿಚಾರ ವಿನಿಮಯದಲ್ಲಿ ಗೆದ್ದದ್ದು ಪ್ರಜಾಪ್ರಭುತ್ವ ಮತ್ತು ಸತ್ಯ. ಸಂವಿಧಾನ ಶಿಲ್ಪಿ ಡಾ॥ ಬಿ.ಆರ್. ಅಂಬೇಡ್ಕರ್ ಅವರು ನಮ್ಮ ದೇಶಕ್ಕೆ ಸರ್ವಧರ್ಮವನ್ನು ಪಾಲಿಸುವ ಸಂವಿಧಾನವನ್ನು ಕಲ್ಪಿಸಿ ಕೊಟ್ಟಿದ್ದಾರೆ. ಈ ಸಂವಿಧಾನದ ಆಶಯಗಳಿಗೆ ಕಿಂಚಿತ್ತು ಕಳಂಕ ಬರದ ರೀತಿಯಲ್ಲಿ ಸರ್ಕಾರವನ್ನು ಮುನ್ನಡೆಸುವ ವಚನವನ್ನು ರಾಷ್ಟ್ರದ ಜನತೆಗೆ ನೀಡಲು ಇಚ್ಛಿಸುತ್ತೇನೆ.

ಭಾರತ ಒಕ್ಕೂಟ ವ್ಯವಸ್ಥೆಯ ರಾಷ್ಟ್ರ. ಈ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಬೇಕಾದದ್ದು ಪ್ರತಿಯೊಂದು ರಾಜ್ಯ ಸರ್ಕಾರದ ಕರ್ತವ್ಯ. ಕೇಂದ್ರ ಸರ್ಕಾರದೊಂದಿಗೆ ಯಾವುದೇ ಸಂಘರ್ಷಕ್ಕೆ ಅವಕಾಶವಿಲ್ಲದೆ ಮೈತ್ರಿ ಸರ್ಕಾರ ಕರ್ತವ್ಯ ನಿರ್ವಹಿಸುತ್ತದೆ ಎಂದು ನಾನು ರಾಜ್ಯದ ಜನತೆಗೆ ವಚನ ನೀಡುತ್ತೇನೆ. ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಸಹಕಾರವನ್ನು ಕೋರುತ್ತೇನೆ.

**ನನ್ನ ಮಾಧ್ಯಮ ಮಿತ್ರರೇ :** ಕಳೆದ ದಿನಗಳಲ್ಲಿ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ಕೂಲಂಕಷವಾಗಿ ವಿಶ್ಲೇಷಿಸಿ ಭವಿಷ್ಯದ ಚಿತ್ರವನ್ನು ನಿಖರವಾಗಿ ಕಟ್ಟಿಕೊಟ್ಟವರು ನೀವು. ಮೈತ್ರಿ ಸರ್ಕಾರದ ಕಲ್ಪನೆ ಕೂಡಾ ನಿಮ್ಮಿಂದಲೇ ಮೂಡಿ ಬಂದದ್ದು. ಈ ಸರ್ಕಾರದ ಕುರಿತು ನಿಮಗಿರಬಹುದಾದ ಯಾವುದೇ ರೀತಿಯ ಪ್ರಶ್ನೆಗಳು ಮತ್ತು ಸಮಸ್ಯೆಗಳಿಗೆ ಉತ್ತರವನ್ನು ನೀಡಲು ನನ್ನ ಕಾರ್ಯಾಲಯ ಸದಾ ಸನ್ನದ್ಧವಾಗಿರುತ್ತದೆ. ಆಧಾರರಹಿತ ಸುದ್ದಿಗೆ ಮಹತ್ವ ನೀಡಬೇಡಿ ಎಂಬುದು ನನ್ನ ಕಳಕಳಿಯ ಮನವಿ. ಪ್ರಜಾಪ್ರಭುತ್ವ ವ್ಯವಸ್ಥೆಯ ನಾಲ್ಕನೇ ಅಂಗವಾದ ನಿಮ್ಮೊಂದಿಗೆ ಸದಾ ಕಾಲ ನೇರ ಸಂವಹನದಲ್ಲಿರಬೇಕೆನ್ನುವುದು ನನ್ನ ಹಂಬಲ.

ರಾಷ್ಟ್ರ ಕವಿ ಕುವೆಂಪು ಅವರು ಕರ್ನಾಟಕವನ್ನು **"ಸರ್ವ ಜನಾಂಗದ ಶಾಂತಿಯ ತೋಟ"** ಎಂದು ಬಣ್ಣಿಸಿದ್ದಾರೆ. ಈ ಶಾಂತಿಯ ತೋಟದ ಶಾಂತಿ ಕದಡಲು ಯಾವ ಶಕ್ತಿಗೂ ಅವಕಾಶ ನೀಡುವುದಿಲ್ಲ. ಈ ಶಾಂತಿಯ ತೋಟದ ಸೊಬಗಿಗೆ ಕಳಂಕ ಬಾರದ ರೀತಿಯಲ್ಲಿ ವರ್ತಿಸುವುದು ಪ್ರತಿಯೊಂದು ರಾಜಕೀಯ ಪಕ್ಷದ ಸಂವಿಧಾನಾತ್ಮಕ ಜವಾಬ್ದಾರಿ ಎಂದು ನಾನು ನಂಬಿದ್ದೇನೆ.

ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ಮತ್ತು ಮಾನವತಾವಾದಿ ಶ್ರೀ ನೆಲ್ಸನ್ ಮಂಡೇಲಾ ಅವರ ಮಾತುಗಳು ನೆನಪಿಗೆ ಬರುತ್ತವೆ. ಅವರೆನ್ನುತ್ತಾರೆ, **Poverty is not an accident. It is man made. It can be removed** ಇದೇ ನಮ್ಮ ಮಾರ್ಗದರ್ಶಿ ಸೂತ್ರ. ಅಂತೆಯೇ ಅವರು ಆಶಿಸುವಂತೆ,

**Let there be justice for all,**

**Let there be peace for all,**

**Let there be food, work & shelter for all,**

ಇದು ನಮ್ಮ ಧ್ಯೇಯ ಕೂಡಾ.

# ಡಾ|| ಜಿ. ಪರಮೇಶ್ವರ್

## ರಾಜ್ಯದ ೯ನೇ ಉಪಮುಖ್ಯಮಂತ್ರಿ



ಉಮೇಶ್ ಕೂಲಿಗೆರೆ

**ಅ**ದೊಂದು ಕುಗ್ರಾಮ... ತಂದೆ ಶಿಕ್ಷಕರು... ಸರ್ಕಾರಿ ಶಾಲೆಯಲ್ಲಿ ಕಲಿತು ಬೆಳೆದ ಹುಡುಗ... ಆಸ್ಟ್ರೇಲಿಯಾದ ಪ್ರತಿಷ್ಠಿತ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದ, ಕೃಷಿ ವಿಜ್ಞಾನಿಯಾಗಬೇಕಿತ್ತು... ಆಕಸ್ಮಿಕವಾಗಿ ರಾಜಕಾರಣಕ್ಕೆ ಬಂದಾಯಿತು. ರಾಜಕಾರಣದ ಹಾದಿ ಸುಗಮವಾಗಿರಲಿಲ್ಲ. ಕಲ್ಲುಮುಳ್ಳಿನ ಹಾದಿಯಲ್ಲೇ ನಡೆದರೂ ತಾಳ್ಮೆ ಕಳೆದುಕೊಳ್ಳಲಿಲ್ಲ... ಸೋಲುಗಳಿಗೆ, ಅವಮಾನಗಳಿಗೆ ಕುಗ್ಗಲಿಲ್ಲ... ಸನ್ಮಾನಗಳಿಗೆ ಹಿಗ್ಗಲಿಲ್ಲ. ತನ್ನ ಸೈದ್ಧಾಂತಿಕ ವಿಚಾರಗಳೊಂದಿಗೆ ಎಂದೂ ರಾಜಿ ಮಾಡಿಕೊಳ್ಳಲಿಲ್ಲ. ಸತತ ಪರಿಶ್ರಮ, ಸಹನೆಯ ಗುಣಗಳು ಇಂದು ಆ ಹಳ್ಳಿ ಹುಡುಗನನ್ನು ಉಪಮುಖ್ಯಮಂತ್ರಿ ಹುದ್ದೆಗೇರಿಸಿದೆ. ಹೌದು ಆ ಹಳ್ಳಿ ಹುಡುಗನೇ ಡಾ.ಜಿ.ಪರಮೇಶ್ವರ್. ರಾಜಕಾರಣದಲ್ಲಿ ಡಾಕ್ಟರ್ ಎಂದೇ ಪರಿಚಿತರು. ಕೆಪಿಸಿಸಿ ಅಧ್ಯಕ್ಷರಾದ ಮೇಲೆ ಅಧ್ಯಕ್ಷರೇ ಎಂದು ಹಿರಿಯರು-ಕಿರಿಯರಿಂದ ಕರೆಸಿಕೊಳ್ಳುತ್ತಿದ್ದರು. ಇನ್ನು ಮುಂದೆ ಡಿಸಿಎಂ ಎಂದು ಕರೆಸಿಕೊಳ್ಳುತ್ತಾರೆ.

ರಾಜಕಾರಣದಲ್ಲಿ ಸುಸಂಸ್ಕೃತ, ಸಜ್ಜನ, ಸ್ವಚ್ಛ ಆಡಳಿತಗಾರ ಎಂದು ಹೆಸರು ಪಡೆದ ಪರಮೇಶ್ವರ್ ಕಾಂಗ್ರೆಸ್ ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದಾರೆ. ಕರ್ನಾಟಕ ಕಾಂಗ್ರೆಸ್ ಪಕ್ಷದಲ್ಲಿ ಅತಿ ಹೆಚ್ಚು ಕಾಲ ರಾಜ್ಯಾಧ್ಯಕ್ಷರಾಗಿ ಕೆಲಸ ಮಾಡಿದ ಕೀರ್ತಿ ಪರಮೇಶ್ವರ್ ಅವರದು. ಎರಡು ವರ್ಷ ಪಕ್ಷದ ಅಧ್ಯಕ್ಷರಾಗಿ ಕೆಲಸ ಮಾಡುವುದು ಸಾಧನೆಯೇ ಸರಿ, ಅಂತಹದರಲ್ಲಿ ಪರಮೇಶ್ವರ್ ಸುದೀರ್ಘ ಕಾಲ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ ಎಂದರೆ ಅದಕ್ಕೆ ಅವರಲ್ಲಿರುವ ಸಂಘಟನೆಯ ಚತುರತೆ ಹಾಗೂ ಎಲ್ಲರನ್ನು ಒಟ್ಟಿಗೆ ಕರೆದೊಯ್ಯುವ ಗುಣ.

ಸಾಮಾನ್ಯವಾಗಿ ಪಕ್ಷದ ಅಧ್ಯಕ್ಷ ಸ್ಥಾನ ಹಾಗೂ ಸಚಿವ ಸ್ಥಾನ ಎಂಬ ಆಯ್ಕೆಗಳು ಬಂದಾಗ ಬಹಳಷ್ಟು ಮಂದಿ ಪ್ರಭಾವ ಇರುವ ಸಚಿವ ಸ್ಥಾನವನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಆದರೆ ಪರಮೇಶ್ವರ್ ಅವರು ಪಕ್ಷ ಸಂಘಟನೆ ಎಂಬುದು ಪವಿತ್ರವಾದ ಕೆಲಸ ಎಂದು ನಂಬಿದವರು. 2017ರ ಜೂನ್ 24ರಂದು ಗೃಹ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಿ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರೆಯಲು ಬಯಸಿದರು. ಅದಕ್ಕೂ ಮೊದಲು 2015ರ ಅಕ್ಟೋಬರ್ 30ರಿಂದ ಒಂದು ವರ್ಷ ಎಂಟು ತಿಂಗಳ ಕಾಲ ಪಕ್ಷದ ಅಧ್ಯಕ್ಷ ಹುದ್ದೆ ಮತ್ತು ಸಚಿವ ಸ್ಥಾನ ಎರಡನ್ನು ಒಟ್ಟೊಟ್ಟಿಗೆ ನಿಭಾಯಿಸಿದರು. ಕಾಂಗ್ರೆಸ್ ಈ ರೀತಿಯ ಅವಕಾಶಗಳನ್ನು ನೀಡುವುದು ಅಪರೂಪ. ಆದರೆ ಪರಮೇಶ್ವರ್ ಅವರ ಸಾಮರ್ಥ್ಯವನ್ನು ಅರಿತಿದ್ದ ಕಾಂಗ್ರೆಸ್ ಹೈಕಮಾಂಡ್ ಎರಡು ಹುದ್ದೆಗಳನ್ನು ಒಟ್ಟಿಗೆ ನಿಭಾಯಿಸಲು ಸಮ್ಮತಿಸಿತ್ತು.

2006 ರಿಂದ ಸುಮಾರು ಏಳೆಂಟು ವರ್ಷ ಕಾಲ ಕಾಂಗ್ರೆಸ್ ಪಕ್ಷ ಅಧಿಕಾರದಿಂದ ವಂಚಿತವಾಗಿತ್ತು. ಕಾಂಗ್ರೆಸ್‌ನಲ್ಲೇ ಮುಂದುವರೆದರೆ ರಾಜಕೀಯವಾಗಿ ಊರ್ಜಿತವಾಗುವುದಿಲ್ಲ ಎಂದು ಕಾರ್ಯಕರ್ತರು, ಮುಖಂಡರು ಅನ್ಯ ಪಕ್ಷಗಳತ್ತ ಮುಖ ಮಾಡುತ್ತಿದ್ದ ಕಾಲವದು. ಅಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಪರಮೇಶ್ವರ್ ಅಧ್ಯಕ್ಷರಾದರು.

ಮನೆ ಮನೆಗೆ ಕಾಂಗ್ರೆಸ್ ಎಂಬ ಕಾರ್ಯಕ್ರಮ ರೂಪಿಸಿ ಪಕ್ಷದ ಕಾರ್ಯಕರ್ತರನ್ನು ಕ್ರಿಯಾಶೀಲಗೊಳಿಸಿದರು. ಸಂಘಟನೆಗೆ ಹೊಸ ಹುಮ್ಮಸ್ಸು ತುಂಬಿದರು. ಕಾಂಗ್ರೆಸ್‌ನ ನಡಿಗೆ ಕೃಷ್ಣೆಯ ಕಡೆಗೆ, ಕಾಂಗ್ರೆಸ್ ನಡಿಗೆ ಸಾಮರಸ್ಯದ ಕಡೆಗೆ ಎಂದು ಮುಂಬೈ ಕರ್ನಾಟಕ ಹಾಗೂ ಕರಾವಳಿ ಭಾಗದಲ್ಲಿ ಪಾದಯಾತ್ರೆ ಮಾಡಿದರು. ರಾಜ್ಯಾದ್ಯಂತ ನಾಲ್ಕು ಕಂದಾಯ ವಿಭಾಗದಲ್ಲೂ ಬೇರೆ ಬೇರೆ ವಿಷಯ ಆಧಾರಿತವಾಗಿ ಪಾದ ಯಾತ್ರೆಗಳು ನಡೆದವು. ಅದು ಎಷ್ಟು ಪ್ರಭಾವ ಬೀರಿತ್ತೆಂದರೆ ಸೊರಗಿ ಹೋಗಿದ್ದ ಕಾಂಗ್ರೆಸ್ ಸಂಘಟನೆಗೆ ಹೊಸ ಚೈತನ್ಯ ತಂದುಕೊಟ್ಟಿತ್ತು. ಸದಸ್ಯತ್ವ ನೋಂದಣಿ ಅಭಿಯಾನ ಸೇರಿದಂತೆ ಹಲವಾರು ಕಾರ್ಯಕ್ರಮಗಳ ಮೂಲಕ ಪಕ್ಷದ ಸಂಘಟನೆಯನ್ನು ಕ್ರೀಯಾಶೀಲಗೊಳಿಸಿದರು. ಪರಿಣಾಮ 2013ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 121 ಸ್ಥಾನಗಳನ್ನು ಗಳಿಸಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂತು.

ಪಕ್ಷವನ್ನು ಅಧಿಕಾರಕ್ಕೆ ತರಲು ರಾಜ್ಯಾದ್ಯಂತ ಪ್ರವಾಸ ಮಾಡಿದ ಪರಮೇಶ್ವರ್ ಸ್ವಕ್ಷೇತ್ರ ಕೊರಟಗೆರೆಗೆ ಹೆಚ್ಚು ಸಮಯ ಕೊಡಲಾಗದಿದ್ದರಿಂದ ಸೋಲು ಕಂಡರು. ಆ ಸಂದರ್ಭದಲ್ಲಿ ಕೂದಲೆಳೆಯ ಅಂತರದಲ್ಲಿ ಮುಖ್ಯಮಂತ್ರಿ ಹುದ್ದೆಯನ್ನು ತಪ್ಪಿಸಿಕೊಂಡರು. ಆದರೂ ತಮ್ಮ ನೋವನ್ನು ಹೊರಗೆ ತೋರಿಸಿಕೊಳ್ಳದೆ ಪಕ್ಷ ಸಂಘಟನೆಯಲ್ಲಿ ಮುಂದುವರೆದರು. ಪಕ್ಷ ಮತ್ತು ಸರ್ಕಾರದ ನಡುವೆ ಕಂದಕ ನಿರ್ಮಾಣವಾಗಲು ಬಿಡದೆ ಸುಭದ್ರ ಸೇತುವೆಯಾಗಿದ್ದರು.

ಪರಮೇಶ್ವರ್ ಅವರ ಹಿನ್ನೆಲೆ:

ಪರಮೇಶ್ವರ್ 1951ರ ಆಗಸ್ಟ್ 6ರಂದು ತುಮಕೂರು ಸಮೀಪ ಗೊಲ್ಲಹಳ್ಳಿಯಲ್ಲಿ ಗಂಗಾಧರಯ್ಯ-ಗಂಗಮಾಳಮ್ಮ ದಂಪತಿಯ ನಾಲ್ಕನೇ ಮಗನಾಗಿ ಜನಿಸಿದರು. ಗೊಲ್ಲಹಳ್ಳಿಯಲ್ಲಿ (ಈಗ ಸಿದ್ಧಾರ್ಥನಗರ) ಪ್ರಾಥಮಿಕ ಶಿಕ್ಷಣ ಮುಗಿಸಿದರು. ನಂತರ ತುಮಕೂರಿನಲ್ಲಿ ಕಾಲೇಜುವರೆಗೆ ಶಿಕ್ಷಣ ಪಡೆದು, ಬೆಂಗಳೂರಿನ ಕೃಷಿ ವಿಜ್ಞಾನ ಕಾಲೇಜಿನಲ್ಲಿ (ಜಿಕೆವಿಕೆ) ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದರು. ಹೆಚ್ಚಿನ ಶಿಕ್ಷಣಕ್ಕಾಗಿ ಆಸ್ಟ್ರೇಲಿಯಾಕ್ಕೆ ತೆರಳಿ ಡಾಕ್ಟರೇಟ್ ಪಡೆದರು. ಆಸ್ಟ್ರೇಲಿಯಾದಲ್ಲಿ ಕೃಷಿ ವಿಜ್ಞಾನದಲ್ಲಿ ಪಿಎಚ್‌ಡಿ ಮುಗಿಸಿ ಸ್ವದೇಶಕ್ಕೆ ಮರಳಿದಾಗ ತಮ್ಮದೇ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಯಾಗಿ ವೃತ್ತಿ ಆರಂಭಿಸಿದರು.





ಸಿದ್ಧಾರ್ಥ ಮೆಡಿಕಲ್ ಕಾಲೇಜು ಉದ್ಘಾಟನೆಗೆ ಆಗಮಿಸಿದ ಆಗಿನ ಪ್ರಧಾನಿ ರಾಜೀವ್ ಗಾಂಧಿ ಅವರು ಪರಮೇಶ್ವರ್ ಅವರನ್ನು ಗುರುತಿಸಿ ರಾಜಕಾರಣಕ್ಕೆ ಬರುವಂತೆ ಸಲಹೆ ನೀಡಿದರು. ಆಹ್ವಾನದ ಮೇರೆಗೆ ದೆಹಲಿಗೆ ಹೋಗಿ ರಾಜೀವ್ ಗಾಂಧಿ ಅವರನ್ನು ಭೇಟಿ ಮಾಡಿ ವಾಪಸ್ ಬರುವ ವೇಳೆಗೆ ಅಚ್ಚರಿಯೆಂಬಂತೆ ಪರಮೇಶ್ವರ್ ಅವರನ್ನು ಕೆಪಿಸಿಸಿಯ ಜಂಟಿ ಕಾರ್ಯದರ್ಶಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿತ್ತು.

ಅಲ್ಲಿಂದ ಪರಮೇಶ್ವರ್ ಅವರ ರಾಜಕೀಯ ಜೀವನ ಆರಂಭವಾಯಿತು. ಈವರೆಗೂ ಐದು ಬಾರಿ ಶಾಸಕರಾಗಿ, ರೇಷ್ಮೆ, ವಾರ್ತಾ, ಉನ್ನತ ಶಿಕ್ಷಣ, ಗೃಹ ಸೇರಿದಂತೆ ಹಲವಾರು ಖಾತೆಗಳ ಸಚಿವರಾಗಿ ಯಶಸ್ವಿಯಾಗಿ ಕೆಲಸ ಮಾಡಿದ್ದಾರೆ. ಉನ್ನತ ಶಿಕ್ಷಣ ಸಚಿವರಾಗಿದ್ದಾಗ ತುಮಕೂರಿಗೆ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸಿದ್ದು ಪರಮೇಶ್ವರ್ ಅವರ ಹೆಗ್ಗಳಿಕೆ. ಗೃಹ ಸಚಿವರಾಗಿದ್ದಾಗ 11 ಸಾವಿರ ಕಾನ್ಸ್‌ಟೇಬಲ್‌ಗಳಿಗೆ ಹಲವಾರು ವರ್ಷಗಳಿಂದ ಬಾಕಿ ಇದ್ದ ಬಡ್ತಿಯನ್ನು ಕೊಡಿಸಿದರು, 2 ಸಾವಿರ ಹೆಚ್ಚುವರಿ ವೇತನ ದೊರೆಯುವಂತೆ ಮಾಡಿದರು. ಹಲವಾರು ಹೊಸ ಠಾಣೆಗಳನ್ನು ಸ್ಥಾಪಿಸಿದರು. ಪೊಲೀಸರಿಗೆ ವಸತಿಗೃಹಗಳನ್ನು ನಿರ್ಮಿಸಿಕೊಟ್ಟರು.

ದಕ್ಷ ಆಡಳಿತಗಾರರಾದ ಪರಮೇಶ್ವರ್ ಉತ್ತಮ ಕ್ರೀಡಾಪಟುವೂ ಹೌದು. ಕೃಷಿ ವಿಶ್ವವಿದ್ಯಾಲಯದ ಕ್ರೀಡಾಕೂಟದಲ್ಲಿ ಪರಮೇಶ್ವರ್ ಮಾಡಿರುವ ದಾಖಲೆಯನ್ನು ಈವರೆಗೂ ಯಾರು ಮುರಿದಿಲ್ಲ. ಹಲವಾರು ಕ್ರೀಡಾಸಂಸ್ಥೆಗಳಿಗೆ ಅಧ್ಯಕ್ಷರಾಗಿ, ಪೋಷಕರಾಗಿ ಈಗಲೂ ಅವರು ಕೆಲಸ ಮಾಡುತ್ತಿದ್ದಾರೆ.

**ರಾಜಕೀಯ ಏರಿಳಿತಗಳು:**

1989ರಲ್ಲಿ ಮೊದಲ ಬಾರಿಗೆ ಮಧುಗಿರಿ ಮೀಸಲು ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದರು. 1999ರಲ್ಲಿ ಅದೇ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಭಾರಿ ಅಂತರದಿಂದ ಆಯ್ಕೆಯಾಗಿ ದಾಖಲೆ ನಿರ್ಮಿಸಿದರು. ಮೊದಲ ಬಾರಿಗೆ 1993ರಲ್ಲಿ ವೀರಪ್ಪ ಮೊಯ್ಲಿ ಸರ್ಕಾರದಲ್ಲಿ ರೇಷ್ಮೆ ಸಚಿವರಾಗಿದ್ದರು, ನಂತರ 1999ರಿಂದ 2004ರವರೆಗೆ ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರದಲ್ಲಿ ವಿಜ್ಞಾನ–ತಂತ್ರಜ್ಞಾನ, ಉನ್ನತ ಶಿಕ್ಷಣ, ವಾರ್ತಾ, ವೈದ್ಯಕೀಯ ಶಿಕ್ಷಣ ಸಚಿವರಾಗಿ ಕೆಲಸ ಮಾಡಿದರು. 1989ರಿಂದ 1992ರವರೆಗೆ ಕೆಪಿಸಿಸಿ ಜಂಟಿ ಕಾರ್ಯದರ್ಶಿಯಾಗಿ, 1992 ರಿಂದ 1997ರವರೆಗೆ ಪ್ರಧಾನ ಕಾರ್ಯದರ್ಶಿಯಾಗಿ, 1997 ರಿಂದ 1999ರವರೆಗೆ ಉಪಾಧ್ಯಕ್ಷರಾಗಿ, 2010ರಿಂದ ಈವರೆಗೂ ಕೆಪಿಸಿಸಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

2004ರಲ್ಲಿ ಮತ್ತೆ ಮಧುಗಿರಿ ಕ್ಷೇತ್ರದಿಂದ ಮೂರನೆ ಬಾರಿಗೆ ಆಯ್ಕೆಯಾದರು. ಕ್ಷೇತ್ರ ವಿಂಗಡನೆಯಿಂದಾಗಿ ಮಧುಗಿರಿ ಸಾಮಾನ್ಯ ಕ್ಷೇತ್ರವಾಗಿ ಪರಿವರ್ತನೆಯಾದಾಗ, ಮೀಸಲು ಕ್ಷೇತ್ರ ಕೊರಟಗೆರೆಯಿಂದ ಸ್ಪರ್ಧಿಸಿ 2008ರಲ್ಲಿ ನಾಲ್ಕನೇ ಅವಧಿಗೆ ಶಾಸಕರಾಗಿ ಆಯ್ಕೆಯಾದರು. ಈ ನಡುವೆ 2014ರ ಜುಲೈ 1 ರಂದು ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಯಾದರು. ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ 2015ರ ಅಕ್ಟೋಬರ್ 30ರಂದು ಗೃಹ ಸಚಿವರಾಗಿ 2017ರ ಜೂನ್ 24ರವರೆಗೆ ಕೆಲಸ ಮಾಡಿದರು.

2013ರ ಚುನಾವಣೆಯಲ್ಲಿ ಸೋಲು ಕಂಡಿದ್ದರು. ಆದರೆ ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಮತ್ತೆ ಜಯಗಳಿಸಿದ ಅವರಿಗೆ ಉಪಮುಖ್ಯಮಂತ್ರಿ ಹುದ್ದೆ ಒಲಿದು ಬಂತು. ಹಾಗಾಗಿ ಅವರು ರಾಜ್ಯದ 9ನೇ ಉಪಮುಖ್ಯಮಂತ್ರಿಯಾಗಿ 2018ರ ಮೇ 23ರಂದು ಸಂಜೆ 4.30ಕ್ಕೆ ಪ್ರಮಾಣವಚನ ಸ್ವೀಕರಿಸಿದರು. ಪರಮೇಶ್ವರ್ ಅವರ ಕುರಿತು ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರೂ ಕೂಡ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ಪರಮೇಶ್ವರ್ ಉತ್ತಮ ಹೊಂದಾಣಿಕೆ ಇರುವ ರಾಜಕಾರಣಿ ಅವರ ಜೊತೆ ಮೈತ್ರಿ ಸರ್ಕಾರ ನಡೆಸುವುದು ಸುಲಭವಾಗಲಿದೆ ಎಂದಿದ್ದಾರೆ.



# ನಮ್ಮನ್ನು ಬಡಿದೆಬ್ಬಿಸುತ್ತಿದೆ ಪರಿಸರ ದಿನಾಚರಣೆ

ನವಿಕ

ಸಮಸ್ತ ಕನ್ನಡಿಗರಿಗೆ ವಿಶ್ವಪರಿಸರ ದಿನಾಚರಣೆಯ ಶುಭಾಶಯಗಳು. ಶುಭವನ್ನು ಕೋರುತ್ತೇಲೆ ನಿಮ್ಮ ಮೇಲೆ ಬಹಳಷ್ಟು ಜವಾಬ್ದಾರಿ ಇದೆ. ಮುಂದಿನ ಪೀಳಿಗೆಗೆ ನಿಮ್ಮ ಇವತ್ತಿನ ಕರ್ತವ್ಯ ಅಥವಾ ಸಂಕಲ್ಪ ಬಹಳ ಮುಖ್ಯ ಅಂತ ಹೇಳುವ ಮೂಲಕ ನಮ್ಮನ್ನು ಬಡಿದೆಬ್ಬಿಸುತ್ತಿದೆ ಪರಿಸರ ದಿನಾಚರಣೆ.

ವಾಸಿಸುವ ನೆಲ, ನಾವು ಉಸಿರಾಡುವ ಗಾಳಿ ಸ್ವಚ್ಚತೆಯಿಂದ ಕೂಡಿರಬೇಕು. ಇವುಗಳ ಉದ್ಧಾರಕ್ಕೆ ನಾವು ಏನು ಮಾಡದಿದ್ರೂ ಪರವಾಗಿಲ್ಲ. ಬದಲಿಗೆ ಮಲೀನ ಮಾಡಬೇಡ ಅನ್ನುವ ಮಾತುಗಳು ಪದೇ ಪದೇ ಕೇಳಿ ಬರುತ್ತಲೇ ಇವೆ. ಇಷ್ಟಾದ್ರು ಈ ಬಗ್ಗೆ ಜಾಗೃತಗೊಳ್ಳದ ಮನುಷ್ಯ ತನ್ನಿಷ್ಟದಂತೆ ಪರಿಸರವನ್ನು ಹಾಳು ಮಾಡುತ್ತಲೇ ಇದ್ದಾನೆ ಅನ್ನೋದು ಆತಂಕದ ಸಂಗತಿ. ಪ್ರಕೃತಿ ಮನುಷ್ಯನ ಬಾಳಿಗೆ ಏನೆಲ್ಲಾ ಕೊಟ್ಟಿಲ್ಲ ಹೇಳಿ. ಆದ್ರೆ ಸ್ವಾರ್ಥಕ್ಕಾಗಿ ಪರಿಸರದ ಮೇಲೆ ನಾನಾ ವಿಧವಾಗಿ ಮನುಷ್ಯ ನಿರಂತರವಾಗಿ ದಾಳಿ ನಡೆಸುತ್ತಲೇ ಇದ್ದಾನೆ. ಈ ಪ್ರವೃತ್ತಿ ಬದಲಾಗಬೇಕಿದೆ. ನಾನು ಮತ್ತು ನನ್ನ ಪರಿಸರ ಅನ್ನುವಂತಾಗಬೇಕಿದೆ. ಹಕ್ಕುಗಳನ್ನು ನಾವು ಹೇಗೆ ಕೇಳುತ್ತೇವೆಯೋ ಅದೇ ರೀತಿ ಇದು ನಮ್ಮ ಪ್ರಾಥಮಿಕ ಕರ್ತವ್ಯ ಅಂತ ತಿಳಿದು ಮನುಕುಲ ನಿಭಾಯಿಸಬೇಕಿದೆ.



**ಒಂದು ಪ್ರತಿಜ್ಞೆ..**

'........ ಆದ ನಾನು. ವಿಶ್ವ ಪರಿಸರ ದಿನಾಚರಣೆಯ ಜೂನ್ 5 ರಂದು ಕನಿಷ್ಠ ಒಂದು ಸಸಿಯನ್ನು ನೆಟ್ಟು ಅದನ್ನು ಸಂರಕ್ಷಣೆ ಮಾಡುತ್ತೇನೆ. ಈ ಕುರಿತು ಅಕ್ಕ–ಪಕ್ಕದವರು, ಗೆಳೆಯರಲ್ಲಿ ಕಾಳಜಿ ಹುಟ್ಟುವಂತೆ ಅವರನ್ನು ಪ್ರೇರೆಪಿಸುತ್ತೇನೆ. ಅನ್ನೋದು ಈ ಬಾರಿ ವಿಶ್ವಪರಿಸರ ದಿನಾಚರಣೆಯ ನಮ್ಮ ಪ್ರಮಾಣವಾಗಬೇಕು. ಇದನ್ನು ಒಮ್ಮೆ ಪರಿಪಾಠ ಮಾಡಿಕೊಂಡರೇ ಸಾಕು, ನೀವು ನೆಡುವ ಆ ಸಸಿ ನಿಮ್ಮ ಮುಂದೆಯೇ ಬೆಳೆದು, ನಿಮಗೇ ಒಳ್ಳೆಯ ಗಾಳಿ, ನೆರಳು, ಫಲ ಎಲ್ಲವನ್ನು ಕೊಡುತ್ತದೆ. ಅಲ್ಲದೆ ನೀವು ಅದರ ಮುಂದೆ ಹೋಗಿ ಬರುವಾಗೆಲ್ಲಾ ಜಾಗೃತಿಯ ಸಂಕೇತವಾಗಿ ನಿಮ್ಮನ್ನು ಆಕರ್ಷಿಸುತ್ತಲೇ ಇರುತ್ತದೆ. ಮುಂದಿನ ಆಲೋಚನೆಗೆ ಸ್ಫೂರ್ತಿ ಕೂಡ ಆ ಸಸಿ ತುಂಬುತ್ತದೆ. ಹಾಗಾಗಿ ಈ ಬಾರಿಗೆ ಇದುವೇ ನಮ್ಮ ಘೋಷವಾಕ್ಯವಾದ್ರೆ ವಿಶ್ವ ಪರಿಸರ ದಿನಾಚರಣೆಗೆ ನಾವು ಸಾರ್ಥಕತೆ ತಂದು ಕೊಟ್ಟಂತಾಗುತ್ತದೆ.

**ಭಾರತವೇ ಲೀಡರ್:**

ವಿಶ್ವ ಪರಿಸರ ದಿನಾಚರಣೆಗೆ ಜಾಗತಿಕ ವೇದಿಕೆ ಒದಗಿಸುವ ಹೊಣೆಯನ್ನು ಈ ಭಾರಿ ಭಾರತ ವಹಿಸಿಕೊಂಡಿದೆ. ಕೇಂದ್ರ ಸರ್ಕಾರ ಮತ್ತು ವಿಶ್ವಸಂಸ್ಥೆ ಜಂಟಿಯಾಗಿ ಈ ಘೋಷಣೆ ಮಾಡಿವೆ. ಪ್ಲಾಸ್ಟಿಕ್ ಮಾಲೀನ್ಯವನ್ನು ಹೊಡೆದೋಡಿಸಿ ಅನ್ನೊದು ಈ ಬಾರಿಯ ಪರಿಸರ ದಿನಾಚರಣೆಯ ಉದ್ದೇಶ. ಸರ್ಕಾರ, ಸಮುದಾಯಗಳು, ಸಾಮಾನ್ಯರು ಈ ಪ್ಲಾಸ್ಟಿಕ್ ನಿಂದ ಮುಕ್ತಿ ಹೊಂದುವತ್ತ ಯೋಚನೆ ಮಾಡಬೇಕಿದೆ. ಅದರಲ್ಲೂ ಒಮ್ಮೆ ಬಳಕೆ ಮಾಡುವ ಪ್ಲಾಸ್ಟಿಕ್‌ನಿಂದ ಇಡೀ ಪರಿಸರ ಹಾಳಾಗುತ್ತಿದ್ದು, ಮಾನವನ ಆರೋಗ್ಯಕ್ಕೆ ಪೆಟ್ಟು ಕೊಡುತ್ತಿದೆ. ಗ್ಲೋಬಲ್ ವಾರ್ಮಿಂಗ್ ತಡೆಯೋಕೆ ವಿಶ್ವ ಮಟ್ಟದಲ್ಲಿ ನಾನಾ ಚರ್ಚೆಗಳು ಆಗುತ್ತಿವೆ. ಅದರ ನಿಯಂತ್ರಣಕ್ಕೆ ಬೇಕಾದ ಸಿದ್ಧತೆಗಳೂ ನಡೆಯುತ್ತಿವೆ. ಇಂಥ ಹೊತ್ತಲ್ಲೇ ವಿಶ್ವಪರಿಸರ ದಿನಾಚರಣೆಗೆ ವಿಶ್ವಕ್ಕೆ ಭಾರತ ವೇದಿಕೆ ಒದಗಿಸುತ್ತಿರೋದು ಪರಿಸರ ಸಂರಕ್ಷಣೆಯ ಬಗ್ಗೆ ಇರುವ ನಮ್ಮ ಕಾಳಜಿ ತೋರಿಸುತ್ತದೆ.

ಇಷ್ಟಕ್ಕೂ ಪ್ಲಾಸ್ಟಿಕ್ ಹೊಡೆತ ಪರಿಸರ ಅಥವಾ ಮಾನವನ ಮೇಲೆ ಎಷ್ಟು ಹಾನಿ ಮಾಡಬಹುದು ಅಂಥ ಒಮ್ಮೆ ಸುಮ್ಮನೆ ನಿಂತು ಯೋಚನೆ ಮಾಡಿದ್ರು ಕೂಡ ಎದೆ ಝಲ್ ಎನ್ನಿಸುವಂತೆ ವಿಷಯಗಳು ಹೊರಗಡೆ ಬೀಳುತ್ತಿವೆ. ಒಂದು ಅಂದಾಜಿನ ಪ್ರಕಾರ ಪ್ರತಿವರ್ಷ ಇಡೀ ವಿಶ್ವ 500 ಬಿಲಿಯನ್ ಪ್ಲಾಸ್ಟಿಕ್ ಬ್ಯಾಗ್ ಬಳಕೆಯಾಗುತ್ತಿದೆಯಂತೆ. ಇದರಲ್ಲಿ 8 ಮಿಲಿಯನ್ ಟನ್‌ಗಳಷ್ಟು ಪ್ಲಾಸ್ಟಿಕ್ ಪ್ರತಿ ವರ್ಷ ಸಮುದ್ರ ಸೇರುತ್ತಿದೆ. ಕಳೆದ ದಶಕದಲ್ಲಿ ನಾವು ಉತ್ಪಾದನೆ ಮಾಡಿದ ಪ್ಲಾಸ್ಟಿಕ್ ಉತ್ಪನ್ನಗಳು, ಕಳೆದ ಶತಮಾನದಲ್ಲೇ ಮಾಡಿರದಷ್ಟು ಉತ್ಪಾದನೆಯಾಗಿದೆ. ಇಲ್ಲಿ ಮತ್ತೊಂದು ಇಂಟ್ರಸ್ಟಿಂಗ್ ಸಂಗತಿ ಅಂದ್ರೆ ಉತ್ಪಾದನೆಯಾದ ಪ್ಲಾಸ್ಟಿಕ್‌ನಲ್ಲಿ ಶೇ 50ರಷ್ಟು ಒಮ್ಮೆ ಬಳಕೆಗೆ ಅಂದರೆ ಸಿಂಗಲ್ ಯೂಸ್ ಆಗುತ್ತಿದೆ. ಇಷ್ಟರ ನಡುವೆ ಎಲ್ಲರೂ ನಿಬ್ಬೆರಾಗುವ ವಿಷ್ಯ ಅಂದ್ರೆ ಇಡೀ ವಿಶ್ವದಲ್ಲಿ ಪ್ರತಿ ನಿಮಿಷಕ್ಕೆ ಒಂದು ಮಿಲಿಯನ್ ಪ್ಲಾಸ್ಟಿಕ್ ಬಾಟಲ್‌ಗಳನ್ನು ಖರೀದಿಯಾಗುತ್ತಿವೆಯಂತೆ. ಇನ್ನು ನಿತ್ಯ ಉತ್ಪಾದನೆಯಾಗುವ ತ್ಯಾಜ್ಯದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವೇ ಶೇ 10 ರಷ್ಟು ಅನ್ನೋದು ಆತಂಕದ ಸುದ್ದಿ.

**ಸಿಂಪಲ್ ಲೆಕ್ಕಾಚಾರ**

ಪರಿಸರವನ್ನು ಉಳಿಸುವುದು ಒಂದು ಸಿಂಪಲ್ ಲೆಕ್ಕಾಚಾರ. ಜಾಗೃತಿಯ ಯಾತ್ರೆ ಮೊದಲು ನಮ್ಮ ಮನೆಯಿಂದ ಆರಂಭವಾದ್ರೆ ಸಾಕು ಉಳಿದ ಕೆಲಸ ಸಲೀಸಾಗಿ ಬಿಡುತ್ತದೆ.

**ಪ್ರಕೃತಿ ಮನುಷ್ಯನ ಬಾಳಿಗೆ ಏನೆಲ್ಲಾ ಕೊಟ್ಟಿಲ್ಲ ಹೇಳಿ. ಆದ್ರೆ ಸ್ವಾರ್ಥಕ್ಕಾಗಿ ಪರಿಸರದ ಮೇಲೆ ನಾನಾ ವಿಧವಾಗಿ ಮನುಷ್ಯ ನಿರಂತರವಾಗಿ ದಾಳಿ ನಡೆಸುತ್ತಲೇ ಇದ್ದಾನೆ. ಈ ಪ್ರವೃತ್ತಿ ಬದಲಾಗಬೇಕಿದೆ. ನಾನು ಮತ್ತು ನನ್ನ ಪರಿಸರ ಅನ್ನುವಂತಾಗಬೇಕಿದೆ.**





## ನಾವೇನು ಮಾಡಬೇಕು..

- ಪ್ರತಿಜ್ಞೆ ಮಾಡಿದಂತೆ ಒಂದು ಮನೆಗೆ ಒಂದು ಮರ ಎಂಬಂತೆ ಬೆಳಸಿ
- ನಿಮ್ಮ ಜನಪ್ರತಿನಿಧಿಗಳನ್ನು ಪರಿಸರ ಪ್ರೇಮಿಗಳಾಗಿಸಿ
- ಮದುವೆ-ಮುಂಜಿ, ಹುಟ್ಟುಹಬ್ಬಗಳಲ್ಲಿ ಸಸಿಗಳನ್ನು ಗಿಫ್ಟ್ ಆಗಿ ಕೊಡಿ
- ಗಿಫ್ಟ್ ಬಂದದ್ದು ಅಂಥ ಬಿಸಾಡಬೇಡಿ. ಆ ಸಿಸಿಗೆ ಜೀವ ಕೊಡಿ
- ಸ್ಥಳೀಯ ಯೋಜನೆಗಳ ಬಗ್ಗೆ ಜಾಗೃತರಾಗಿರಿ. ಪರಿಸರ ಸಂರಕ್ಷಣೆಗಾಗಿ ಅಗತ್ಯ ಬಿದ್ದರೇ ಹೋರಾಟ ಮಾಡಿ
- ಮರಗಳನ್ನು ಕಡಿಯಬೇಡಿ. ಅನಿವಾರ್ಯ ಅನ್ನಿಸಿದ್ರೆ ಸ್ಥಳಾಂತರ ಮಾಡಿ
- ಪರಿಸರಕ್ಕೆ ಪೂರಕವಾಗಿ ದುಡಿಯುವ ಸಂಘ-ಸಂಸ್ಥೆಗಳು, ವ್ಯಕ್ತಿಗಳಿಗೆ ಬೆಂಬಲ ಸೂಚಿಸಿ
- ಇಂಗು ಗುಂಡಿ, ಕೃಷಿ ಹೊಂಡಗಳನ್ನು ಸ್ಥಾಪಿಸಿ, ಸುತ್ತಮುತ್ತ ಹರಿದು ಪೋಲ್ ಆಗುವ ಅಥವಾ ಮಳೆಯ ನೀರನ್ನು ಇಂಗಿಸಿ
- ಸುತ್ತಮುತ್ತಲಿನ ಪರಿಸರವನ್ನು ಹಸಿರಾಗಿ ಇಟ್ಟುಕೊಳ್ಳಿ. ವನಮೋಹತ್ಸವಗಳನ್ನು ಮಾಡುವ ಮೂಲಕ ಸ್ಥಳೀಯರಲ್ಲಿ ಜಾಗೃತಿ ಮೂಡಿಸಿ

ಮೊದಲು "ನಾನು ಪರಿಸರ ಪ್ರೇಮಿ" ಅನ್ನೋ ತೀರ್ಮಾನಕ್ಕೆ ಬಂದ್ರೆ ಸಾಕು ಅರ್ಧ ಪರಿಸರ ಉಳಿಸಬಹುದು. ಇನ್ನು ಪ್ರತಿಯೊಬ್ಬರು ತಮ್ಮ ಅರಿವಿಗೆ ಬರುವಂತೆ ನಿತ್ಯದ ಕೆಲಸಗಳನ್ನು ಮಾಡಿದ್ರೂ ಸಾಕು ಮತ್ತಷ್ಟು ಪರಿಸರನ್ನು ಉಳಿಸಬಹುದು. ಪರಿಸರ ಸ್ನೇಹಿ ಜೀವನ ಕ್ರಮ ಅಳವಡಿಸಿಕೊಂಡ್ರೆ ಸಾಕು ನಮ್ಮ ಸುತ್ತಮುತ್ತಲಿನ ಪರಿಸರ ಉಳಿಸಬಹುದು. ಇನ್ನು ಬಳಸುವ ಪ್ರತಿ ವಸ್ತುವನ್ನು ಕೂಡ ಪರಿಸರಕ್ಕೆ ಹಾನಿಯಾಗದಂತೆ ನೋಡಿಕೊಳ್ಳಿ. ಪರಿಸರ ಸ್ನೇಹಿ ಬಟ್ಟೆ ತೊಡಿ. ಜೊತೆಗೆ ಪ್ಲಾಸ್ಟಿಕ್ ಬಳಕೆ ತುಂಬ ಕಡಿಮೆ ಮಾಡಿ. ಒಂದೊಮ್ಮೆ ಬಳಸಿದ್ರು ಕೂಡ ಎಲ್ಲೆಂದರಲ್ಲಿ ಬೀಸಾಕಬೇಡಿ. ಕಡಿಮೆ ನೀರು ಬಳಕೆ, ನಿಯಮಿತ ಕಸ ಉತ್ಪತ್ತಿ, ಮರುಬಳಕೆಯಾಗುವ ವಸ್ತುಗಳನ್ನು ಹೆಚ್ಚಾಗಿ ಬಳಕೆ ಮಾಡುವುದು ರೂಢಿಸಿಕೊಳ್ಳಿ. ಇವೆಲ್ಲಾ ಒಮ್ಮಲೇ ಜಾರಿಗೆ ತರೋದು ಕಷ್ಟವಾದ್ರು ಹಂತ ಹಂತವಾಗಿ ಮನೆಯಲ್ಲಿ ನಿಮ್ಮಿಂದ್ಲೆ ಶುರು ಮಾಡಿದ್ರೆ ಇಡೀ ಕುಟುಂಬದ ಸದಸ್ಯರು ಪಾಲಿಸುತ್ತಾರೆ. ಮುಂದೊಂದು ದಿನ ಇಡೀ ಊರಿಗೆ ನಿಮ್ಮದ್ದು ಮಾದರಿಯ ಕುಟುಂಬವಾದ್ರು ಆಶ್ಚರ್ಯ ಇಲ್ಲ.

**ನಮಗೆ ನಾವೇ ಲೀಡರ್:**

1972ರಲ್ಲಿ ವಿಶ್ವಮಟ್ಟದಲ್ಲಿ ಪರಿಸರ ಸಂರಕ್ಷಣೆ ಕಲ್ಪನೆಗೆ ಒತ್ತು ಕೊಡೋದು ಪ್ರಾರಂಭವಾಯ್ತು. ವಿಶ್ವಸಂಸ್ಥೆ ಇದಕ್ಕೆ ಟೊಂಕ ಕಟ್ಟಿ ನಿಂತು, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಅನ್ನೋದನ್ನು ಹೇಳಲು ಶುರುಮಾಡ್ತು. ಹಂತಹಂತವಾಗಿ ದಾಟುತ್ತಾ ಪರಿಸರ ರಕ್ಷಣೆಯ ಬಗ್ಗೆ ನಮ್ಮಲ್ಲಿ ಇದೀಗ ದೊಡ್ಡಮಟ್ಟದಲ್ಲಿ ಕಲ್ಪನೆಗಳು ಮೂಡುತ್ತಿವೆ. ಅಲ್ಲಲ್ಲಿ ಕಂಡು ಬರುವ ಸಾಲು ಮರದ ತಿಮ್ಮಕ್ಕ, ಸುರೇಶ್ ಹೆಬ್ಳೀಕರ್ ಅಂಥವರೆಲ್ಲಾ ಪರಿಸರ ರಕ್ಷಣೆಯ ಹೀರೋಗಳಾಗಿ ನಮಗೆ ಸ್ಫರ್ತಿಯ ಸೆಲೆಯಾಗುತ್ತಿದ್ದಾರೆ. ಪರಿಸರ ರಕ್ಷಣೆಗೆ ನಾಯಕರು ಬೇಕಿಲ್ಲ.. ಬದಲಿಗೆ ನಾವೇ ಟೊಂಕ ಕಟ್ಟಿ ನಿಲ್ಲಬೇಕು. ಪರಿಸರ ರಕ್ಷಣೆಯ ಮುಂದಾಳತ್ವ ನಾವೇ ವಹಿಸಿದಾಗ ಮಾತ್ರ ಮುಂದಿನ ಪೀಳಿಗೆ ಮಾಲೀನ್ಯ ಮುಕ್ತ ಜಗತ್ತಿನಲ್ಲಿ ವಾಸಿಸೋಕೆ ಸಾಧ್ಯ.

**ಪ್ಲಾಸ್ಟಿಕ್ ತ್ಯಾಜ್ಯ ಮುಕ್ತ ಮಾಡಿ:**

ಪ್ಲಾಸ್ಟಿಕ್ ಬಳಕೆಯಿಂದ ಆರೋಗ್ಯ ಮತ್ತು ಪರಿಸರದ ಮೇಲೆ ಉಂಟಾಗುತ್ತಿರುವ ಪರಿಣಾಮವನ್ನು ಮನಗಂಡಿರುವ ಕೇಂದ್ರ ಪರಿಸರ ಸಚಿವಾಲಯವು ಪ್ರಸಕ್ತ ವರ್ಷದ ವಿಶ್ವ ಪರಿಸರ ದಿನಾಚರಣೆಯನ್ನು "ಪ್ಲಾಸ್ಟಿಕ್ ತ್ಯಾಜ್ಯ ಮುಕ್ತ ಮಾಡಿ" (ಬೀಟ್ ಪ್ಲಾಸ್ಟಿಕ್ ಪೊಲ್ಯೂಷನ್) ಎಂಬ ಘೋಷವಾಕ್ಯದೊಂದಿಗೆ ಆಚರಸುವಂತೆ ಸೂಚಿಸಿದೆ. ಈ ನಿಟ್ಟಿನಲ್ಲಿ ಪ್ಲಾಸ್ಟಿಕ್ ಬಳಕೆ ವಿರುದ್ಧ ಜಾಗೃತಿ ಮೂಡಿಸುವ ಸಲುವಾಗಿ ವಿವಿಧ ಇಲಾಖೆಗಳಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಆದ್ದರಿಂದ ನಮ್ಮ ಪರಿಸರವನ್ನು ಉಳಿಸಿಕೊಳ್ಳಲು ಇನ್ನು ಮುಂದಿ ಪ್ಲಾಸ್ಟಿಕ್ ಬಳಕೆಯನ್ನು ನಿಲ್ಲಿಸುವುದಾಗಿ ನಾವೆಲ್ಲರೂ ಪ್ರಮಾಣ ಮಾಡೋಣ, ಮತ್ತು ಪ್ರಮಾಣದಂತೆ ನಡೆದುಕೊಳ್ಳೋಣ.






# ದೇವದಾಸಿ ಪದ್ಧತಿ ನಿರ್ಮೂಲನೆಗೆ ಪಣತೊಟ್ಟಿರುವ ಸೀತವ್ವ ಜೋಡಟ್ಟಿ

ಮಹಾಂತೇಶ. ಮ. ಜಾಂಗಟಿ

**"ನಾನು ದೇವದಾಸಿ, ಆದರೆ ಇನ್ನೊಂದು ಹೆಣ್ಣಿಗೆ ಅಂತಹ ಕಪ್ಪುಚುಕ್ಕೆ ಅಂಟಬಾರದು"** 2017–18ನೇ ಸಾಲಿನ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿರುವ ಸೀತವ್ವ ಜೋಡಟ್ಟಿ ಅವರು ಗದ್ಗದಿತ ಧ್ವನಿಯಲ್ಲಿ ಈ ಮಾತನ್ನು ಹೇಳುತ್ತಾರೆ.

ಬೆಳಗಾವಿ ಜಿಲ್ಲೆಯ ಘಟಪ್ರಭಾದಲ್ಲಿರುವ ಮಹಿಳಾ ಅಭಿವೃದ್ಧಿ ಮತ್ತು ಸಂರಕ್ಷಣಾ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಕೆಲಸ ಮಾಡುತ್ತಿರುವ ಸೀತವ್ವ ಜೋಡಟ್ಟಿ ಅವರನ್ನು ಭಾರತ ಸರ್ಕಾರವು ಸಮಾಜ ಸೇವೆ ವಿಭಾಗದಲ್ಲಿ 2017–18ನೇ ಸಾಲಿನ ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಸೀತವ್ವ ಅವರಿಗೆ ಅಭಿಮಾನ, ಸನ್ಮಾನಗಳ ಮಹಾಪೂರವೇ ಹರಿದುಬರುತ್ತಿದೆ.

ಸೀತವ್ವ ಅವರ ಜೀವನ, ಕಾರ್ಯಗಳು ಹಾಗೂ ಸಾಧನೆ ಕುರಿತು ಅವರೊಂದಿಗೆ ಸಮಾಲೋಚಿಸಿದಾಗ ಅವರು ಅನೇಕ ವಿಷಯಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ.

**ಜವಾಬ್ದಾರಿ ಹೆಚ್ಚಿಸಿದೆ:** ದೇವದಾಸಿ ಪದ್ಧತಿ ನಿರ್ಮೂಲನೆ, ದೇವದಾಸಿಯರ ಪುನರ್ವಸತಿ, ದೇವದಾಸಿಯರ ಮಕ್ಕಳಿಗೆ ಆರೋಗ್ಯ ಮತ್ತು ಶಿಕ್ಷಣ ಒದಗಿಸುವುದು, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ, ಮಾನವ ಸಾಗಾಣಿಕೆ ತಡೆಗಟ್ಟುವ ನಿಟ್ಟಿನಲ್ಲಿ 1997 ರಿಂದಲೂ ಮಹಿಳಾ ಅಭಿವೃದ್ಧಿ ಮತ್ತು ಸಂರಕ್ಷಣಾ ಸಂಸ್ಥೆ (ಮಾಸ್) ಕೆಲಸ ಮಾಡುತ್ತಿದೆ. ಈ ನನ್ನ ಕೆಲಸವನ್ನು ಗುರುತಿಸಿ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆ ಮಾಡಿರುವುದರಿಂದ ಸಂಸ್ಥೆ ಹಾಗೂ ನನ್ನ ಜವಾಬ್ದಾರಿ ಹೆಚ್ಚಾಗಿದೆ ಎಂದು ಸೀತವ್ವ ಜೋಡಟ್ಟಿ ಅವರು ಸಂತಸ ವ್ಯಕ್ತಪಡಿಸಿದರು.

ಮಹಿಳಾ ಅಭಿವೃದ್ಧಿ ಮತ್ತು ಸಂರಕ್ಷಣಾ ಸಂಸ್ಥೆ (ಮಾಸ್)ಯಲ್ಲಿ 4800 ದೇವದಾಸಿ ಮಹಿಳೆಯರು ಸದಸ್ಯರಾಗಿದ್ದು, ಸಂಸ್ಥೆಯ ಸಿಬ್ಬಂದಿ ಕೂಡ ದೇವದಾಸಿ ಮಹಿಳೆಯರೇ ಆಗಿದ್ದಾರೆ. ನಾವೆಲ್ಲರೂ ಸೇರಿಕೊಂಡು ಈ ಅನಿಷ್ಟ ಪದ್ಧತಿ ವಿರುದ್ಧ ಧ್ವನಿ ಎತ್ತಿದ್ದೇವೆ. ಸಾರ್ವಜನಿಕರು, ಜನಪ್ರತಿನಿಧಿಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಸಾಕಷ್ಟು ಸಹಕಾರ ನೀಡಿದ್ದಾರೆ ಎಂದು ಸೀತವ್ವ ಸ್ಮರಿಸುತ್ತಾರೆ.

**ದೇವದಾಸಿ ಅನಿಷ್ಟ ಪದ್ಧತಿ ವಿರುದ್ಧ ಜಾಗೃತಿ:** ನನ್ನ ತಾಯಿ ದೇವದಾಸಿಯಾಗಿದ್ದರು, ನಂತರ ಈ ಅನಿಷ್ಟ ಪದ್ಧತಿಯನ್ನು ಮುಂದುವರೆಸಲು ನನ್ನನ್ನು ದೇವದಾಸಿಯನ್ನಾಗಿಸಲಾಯಿತು. ಇದು ನನಗೆ ಇಷ್ಟವಿಲ್ಲದಿದ್ದರೂ ಅನಿವಾರ್ಯವಾಗಿ ಮುಂದುವರೆಸಿಕೊಂಡು ಬರಬೇಕಾಯಿತು. ಆ ಸಂದರ್ಭದಲ್ಲಿಯೇ ನಾನು ನಿರ್ಧರಿಸಿದ್ದೆ 'ನಾನು ದೇವದಾಸಿಯಾಗಿರಬಹುದು ಆದರೆ ಬೇರೆ ಹೆಣ್ಣುಮಕ್ಕಳು ಈ ಅನಿಷ್ಟ ಪದ್ಧತಿಗೆ ಬಲಿಯಾಗಬಾರದು ಎಂದು'. ಮುಂದೆ ನಾನು 1991 ರಿಂದಲೇ ದೇವದಾಸಿ ಪದ್ಧತಿಯ ವಿರುದ್ಧ ಹೋರಾಟ ಪ್ರಾರಂಭಿಸಿದೆ ಎಂದು ಸೀತವ್ವ ಅವರು ತಮ್ಮ ಒಡಲಾಳದ ನೋವನ್ನು ಬಹಿರಂಗಗೊಳಿಸಿದರು.

ಇಂದು ಬೆಳಗಾವಿ ಜಿಲ್ಲೆಯಲ್ಲಿ ದೇವದಾಸಿ ಪದ್ಧತಿಯನ್ನು ಸಂಪೂರ್ಣವಾಗಿ ತೊಲಗಿಸಲು ನಾವು ನಮ್ಮ ಸಂಸ್ಥೆಯಿಂದ ಶ್ರಮಿಸಿದ್ದೇವೆ. ಜೊತೆಗೆ ಅನೇಕ ಬಾಲ್ಯವಿವಾಹಗಳನ್ನು ತಡೆಗಟ್ಟಿದ್ದೇವೆ. ಬಾಲಕಾರ್ಮಿಕ ಪದ್ಧತಿ, ಮಕ್ಕಳು ಮತ್ತು ಮಹಿಳೆಯರ ಮಾರಾಟವನ್ನು ತಡೆದು, ಪಾಲಕರಿಗೆ ಅರಿವು ಮೂಡಿಸಿದ್ದೇವೆ. ದೇವದಾಸಿ ಪದ್ಧತಿಯ ನಿರ್ಮೂಲನೆಯ ಜೊತೆಗೆ ದೇವದಾಸಿಯರ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಕೊಡಿಸುತ್ತಿದ್ದೇವೆ ಹಾಗೂ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸುತ್ತಿದ್ದೇವೆ ಎಂದು ಸೀತವ್ವ ಅವರು ತಿಳಿಸಿದರು.

ಯಾವ ಪ್ರಶಸ್ತಿ ಹಾಗೂ ಬಿರುದಿಗೂ ಆಸೆ ಪಡದೇ ಸಮಾಜದಲ್ಲಿ ಎಲೆಮರಿಕಾಯಿಯಂತೆ ನಿಸ್ವಾರ್ಥವಾಗಿ ಸೇವೆ ಸಲ್ಲಿಸುತ್ತಿರುವ ಸೀತವ್ವ ಜೋಡಟ್ಟಿ ಅವರಿಗೆ ದೇಶದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ ಪದ್ಮಶ್ರೀ ಪ್ರಶಸ್ತಿ ಒಲಿದು ಬಂದಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ.

ಸೀತವ್ವ ಜೋಡಟ್ಟಿ ಅವರು 1991–96 ರವರೆಗೆ ಕಬ್ಬೂರ ಗ್ರಾಮದಲ್ಲಿ ಸ್ವ–ಸಹಾಯಕ ಸಂಘದ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಾ ಸಂಘದ ಮುಖಾಂತರ ತಮ್ಮ ಗ್ರಾಮದ ದಲಿತ ಕಿಶೋರಿಯರು, ದೇವದಾಸಿ ಪದ್ಧತಿಗೆ ಬಲಿಯಾಗದಂತೆ ಸಮುದಾಯದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಇತರೆ ಸ್ವ–ಸಹಾಯ ಸಂಘದ ಸದಸ್ಯರಿಗೆ ತರಬೇತಿ ನೀಡಲು ಸಂಪನ್ಮೂಲ ವ್ಯಕ್ತಿಗಳಾಗಿಯೂ ಕಾರ್ಯನಿರ್ವಹಿಸಿದ್ದಾರೆ.

1996 ರಿಂದ 2000 ರವರೆಗೆ ಕರ್ನಾಟಕ ರಾಜ್ಯದ ಮಹಿಳಾ ಅಭಿವೃದ್ಧಿ ನಿಗಮದ ಸ್ವಯಂ ಸೇವಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಈ ಅವಧಿಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಜಾಗೃತಿ ಶಿಬಿರಗಳ ಮುಖಾಂತರ ದೇವದಾಸಿ ಪದ್ಧತಿ ನಿರ್ಮೂಲನೆಗೆ ಶ್ರಮಿಸಿದ್ದಾರೆ. ದೇವದಾಸಿ ಮತ್ತು ದಲಿತ ಹೆಣ್ಣು ಮಕ್ಕಳಿಗಾಗಿ ಸ್ವ–ಸಹಾಯ ಸಂಘದ ಸದಸ್ಯರಿಗೆ ಲೈಗಿಂಕ ಕಾಯಿಲೆ ಹರಡುವುದನ್ನು ತಡೆಗಟ್ಟುವ ಕುರಿತು ಜಾಗೃತಿ ಶಿಬಿರ ಏರ್ಪಡಿಸಿ, ಅರಿವು ಮೂಡಿಸಿದ್ದಾರೆ.




2000–2001ರಲ್ಲಿ ಮಹಿಳಾ ಅಭಿವೃದ್ಧಿ ಮತ್ತು ಸಂರಕ್ಷಣೆ ಸಂಸ್ಥೆಯ (MASS) ಸದಸ್ಯ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದಾರೆ.

2001–2004 ಹುಕ್ಕೇರಿ ಕ್ಷೇತ್ರಕ್ಕೆ ಪ್ರೇರಕರಾಗಿ ಕೆಲಸ. ಈ ಅವಧಿಯಲ್ಲಿ ದೇವದಾಸಿ ಪದ್ಧತಿ ನಿರ್ಮೂಲನೆ ಹಾಗೂ ಬಾಲ್ಯವಿವಾಹ ತಡೆಗಟ್ಟಲು ಶ್ರಮಿಸಿದ್ದಾರೆ.

2004–2008 ರಲ್ಲಿ ಚಿಕ್ಕೋಡಿ ಕ್ಷೇತ್ರಕ್ಕೆ ಪ್ರೇರಕರಾಗಿ ಕೆಲಸ (HIV Aids) ತಡೆಗಟ್ಟುವ ಕುರಿತು ಜಾಗೃತಿ ಶಿಬಿರಗಳನ್ನು ಹಮ್ಮಿಕೊಂಡಿದ್ದರು.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು ಇಲ್ಲಿ ದೇವದಾಸಿ ಪದ್ದತಿ ನಿರ್ಮೂಲನೆ ಕುರಿತು ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳಿಗಾಗಿ ಏರ್ಪಡಿಸಿದ ತರಬೇತಿ ಪಡೆದು, ಬಾಗಲಕೋಟೆ, ವಿಜಯಪುರ, ರಾಯಚೂರ, ಕೊಪ್ಪಳ ಜಿಲ್ಲೆಗಳಲ್ಲಿ ದೇವದಾಸಿ ಮಹಿಳೆಯರಿಗೆ ಜಾಗೃತಿ ಶಿಬಿರಗಳನ್ನು ಏರ್ಪಡಿಸಿ, ದೇವದಾಸಿ ಪದ್ಧತಿ ನಿರ್ಮೂಲನೆಗೆ ಶ್ರಮಿಸಿದ್ದಾರೆ.

2006–2009ರ ರಾಯಬಾಗ ಕ್ಷೇತ್ರದಲ್ಲಿ ಸಮುದಾಯ ಸಂಘಟಕರಾಗಿ ದಲಿತ ಮಕ್ಕಳ ಶೈಕ್ಷಣಿಕ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಾ, ಈ ಅವಧಿಯಲ್ಲಿ ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಶ್ರಮಿಸಿದ್ದಾರೆ.

2010–2011 ರಾಯಬಾಗ ಕ್ಷೇತ್ರದಲ್ಲಿ ಮಾಡಿದ ಕೆಲಸವನ್ನು ಗುರುತಿಸಿ ಅಂತಾರಾಷ್ಟ್ರೀಯ ಸಂಸ್ಥೆಯ ನೆರವಿನೊಂದಿಗೆ ಬಾಗಲಕೋಟೆ ಜಿಲ್ಲೆಯಲ್ಲಿ ಕಿಶೋರಿಯರು ಮತ್ತು ಶಾಲೆ ಬಿಟ್ಟ ಮಕ್ಕಳ ಶೈಕ್ಷಣಿಕ ಪುನರ್ವಸತಿಗಾಗಿ ಶ್ರಮಿಸಿದ್ದಾರೆ.

ಸೀತವ್ವ ಅವರು 2012ರ ನಂತರ ಮಾಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೇಮಕಗೊಂಡು ಮಹಿಳಾ ಸಬಲೀಕರಣ, ದೇವದಾಸಿ ಪದ್ಧತಿ ನಿರ್ಮೂಲನೆ, ಪುನರ್ವಸತಿ, ಆರ್ಥಿಕ ಅಭಿವೃದ್ಧಿ ಇತ್ಯಾದಿ ಕಾರ್ಯಕ್ರಮಗಳನ್ನು ಮುಂದುವರೆಸಿರುತ್ತಾರೆ. ಇವರ ಸೇವೆಯನ್ನು ಗುರುತಿಸಿ ಭಾರತ ಸರ್ಕಾರವು ಸಮಾಜ ಸೇವೆ ವಿಭಾಗದಲ್ಲಿ 2017–18ನೇ ಸಾಲಿನ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿರುತ್ತದೆ. ರಾಜ್ಯದ ಮಹಿಳೆ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ.

ಲೈಂಗಿಕ ವೃತ್ತಿನಿರತ ಮಹಿಳೆಯರು, ದೇವದಾಸಿಯರು ಸಂಘಟನೆಗೊಂಡು ರೂಪಿಸಿಗೊಂಡಿರುವ ಒಕ್ಕೂಟಗಳ ಮೂಲಕ ಫಲಾನುಭವಿಗಳಿಗೆ ಸೂಕ್ತ ತರಬೇತಿ ನೀಡಲು ಹಾಗೂ ದೇವದಾಸಿ ಸಮುದಾಯದ ಅಭಿವೃದ್ಧಿಗೆ ಪೂರಕರವಾದ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಹಗಲಿರುಳು ಶ್ರಮಿಸುತ್ತಿರುವ ಸೀತವ್ವ ಜೋಡಟ್ಟಿ ಅವರಿಗೆ ನಮ್ಮದೊಂದು ಸಲಾಂ...ಎಲ್ಲ ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿ ಉತ್ತಮ ಆಡಳಿತ ನೀಡುವಂತಹ ಪ್ರತಿನಿಧಿಯನ್ನು ಆಯ್ಕೆ ಮಾಡುವ ಮೂಲಕ ನಮ್ಮ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವಂತೆ ಮಾಡಬೇಕಿದೆ. ಆದ್ದರಿಂದ ಎಲ್ಲಾ ಮತದಾರರು ಮತದಾನದಂದು ತಮ್ಮ ಕ್ಷೇತ್ರದಲ್ಲೇ ಇದ್ದು ಮತದಾನದ ಹಕ್ಕನ್ನು ಚಲಾಯಿಸಿ ಉತ್ತಮ ಸಮಾಜ ನಿರ್ಮಾಣಕ್ಕೆ ನಾಂದಿ ಹಾಕಬೇಕು. ■



# ಮುದ್ದು ಮಕ್ಕಳಿಗೆ ದುಡಿತ ತರವೇ

**ವೈ.ಕೆ. ಸಂಧ್ಯಾ ಶರ್ಮ**

ಎದುರುಗಡೆ ನಿರ್ಮಾಣ ಹಂತದಲ್ಲಿದ್ದ ಕಟ್ಟಡದಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಆ ಹೆಂಗಸು ಅವತ್ತು ಬೆಳಂಬೆಳಗ್ಗೆಯೇ ನಮ್ಮ ಮನೆಯ ಗೇಟಿನ ಬಳಿ ನಿಂತಿದ್ದಳು. ಅವಳ ಪಕ್ಕದಲ್ಲಿ ಕೆದರಿದ ತಲೆಯ, ನಿದ್ದೆಗಣ್ಣನ್ನು ಉಜ್ಜುತ್ತ ನಿಂತುಕೊಂಡಿದ್ದ ಸುಮಾರು ಹತ್ತು–ಹನ್ನೊಂದರ ಬಾಲೆ. 'ಅವ್ವಾ..... ಇಕಾ, ಇವಳು ನನ್ಮಗಳು..... ನಿಮ್ಮ ಮನೆಕೆಲಸಾನ ನಿಯತ್ತಾಗಿ ಮಾಡಿಕೊಡ್ತಾಳವ್ವ, ಸೇರಿಸ್ಕಳ್ಳಿ, ನಮಗೂ ಸ್ವಲ್ಪ ಇದರಿಂದ ಸಹಾಯ ಆಗ್ತದೆ' ಎಂದು ದೈನ್ಯವಾಗಿ ಗೋಗರೆಯಲಾರಂಭಿಸಿದಳು. ತಾಯಿ ಏನು ಹೇಳುತ್ತಿದ್ದಾಳೆಂಬ ಅರಿವಿಲ್ಲದೆ ಆ ಮುಗ್ಧಮುಖದ ಎಳೆಬಾಲೆ ಕಣ್ಣುಜ್ಜಿಕೊಂಡು ತೂಕಡಿಸುತ್ತ ನಿಂತಿದ್ದಳು. ನಾನು ಬೆಚ್ಚಿ ಬಿಟ್ಟೆ!..... 'ಏನು ಹೇಳ್ತಿದ್ದೀಯಮ್ಮ..... ಓದಿಕೊಂಡು ನೆರಳಲ್ಲಿ ಆಟವಾಡಿಕೊಂಡಿರಬೇಕಾದ ಮಗೂನ ಮುಸುರೆ ಉಜ್ಜಲು ಕಳಿಸ್ತೀಯಾ? ನಿನಗೆ ಮನಸ್ಸಾದರೂ ಹೇಗೆ ಬರುತ್ತಮ್ಮ?' ಎಂದು ಗದರಿದೆ.

ಮನೆಗೆಲಸದ ಹೆಂಗಸು ಪದೇ ಪದೇ ಬಿಟ್ಟು ಹೋಗುತ್ತಿದ್ದ ಕಾರಣ ತುಂಬ ವಿಚಲಿತಳಾಗಿದ್ದೆ. ಮನೆಯ ಒಳಗೂ ಹೊರಗೂ ದುಡಿದು ಹೈರಾಣಾಗಿದ್ದೆ. ಈ ಬವಣೆಯಿಂದ ಪಾರಾಗುವುದು ಹೇಗೆಂದು ಒಂದೇ ಸಮನೆ ಯೋಚಿಸಿ ತಲೆ ಗೊಬ್ಬರವಾಗಿತ್ತು. ನಿಜ..... ನನಗಂತೂ ಕೆಲಸದವಳೊಬ್ಬಳ ಅವಶ್ಯಕತೆ ಅತ್ಯಂತವಾಗಿ ಬಾಧಿಸುತ್ತಿತ್ತು.

ಹೇಳಿ ಕಳಿಸಿದಂತೆ ಸಹಾಯಕಿಯೊಬ್ಬಳು ಅನಾಯಾಸವಾಗಿ ಎದುರಿಗೆ ಬಂದು ನಿಂತಿದ್ದಳು. ಸಂತೋಷಿಸುವ ಬದಲು ಎದುರು ನಿಂತ ಮುಗ್ಧ ಮಗುವನ್ನು ಕಂಡು ನನ್ನ ಮನಸ್ಸು ಚುರ್ರೆಂದಿತು. ಛೇ..... ಮಗುವನ್ನು ಕೆಲಸಕ್ಕೆ ಹಚ್ಚುವುದೇ?..... ನನಗೇಕೆ ಆ ಪಾಪ..... ನಾನೇ ಕಷ್ಟಪಟ್ಟರೂ ಚಿಂತೆಯಿಲ್ಲ, ಮಕ್ಕಳನ್ನು ಮಾತ್ರ ದುಡಿಮೆಗೆ ಹಚ್ಚುವುದು ದೊಡ್ಡ ಅಪರಾಧವೆಂಬ ಪ್ರಜ್ಞೆ ಜಾಗೃತವಾಗಿ 'ಓದೋ ವಯಸ್ನಲ್ಲಿ ಕೆಲಸ ಮಾಡುವುದಾ..... ಮೊದ್ಲು ಇವಳನ್ನ ಯಾವುದಾದರೂ ಸ್ಕೂಲಿಗೆ ಸೇರಿಸು, ಫೀಸ್ ಬೇಕಾದ್ರೆ ನಾ ಕೊಡ್ತೀನಿ' ಎಂದು ಆಡಿದಂತೆ ಮರುದಿನವೇ ನಾನವಳನ್ನು ಹತ್ತಿರದ ಸರ್ಕಾರಿ ಶಾಲೆಗೆ ಸೇರಿಸಿದೆ. ಆಗ ಮನಸ್ಸಿಗೆ ದೊಡ್ಡ ಸಮಾಧಾನವಾಯಿತು.

**14 ವರ್ಷದೊಳಗಿನ ಮಕ್ಕಳನ್ನು ಯಾವುದೇ ಅಪಾಯಕಾರಿ ವೃತ್ತಿಗಳಲ್ಲಿ ಮನೆ, ಹೋಟೆಲ್, ಡಾಬಾ, ರೆಸ್ಟೋರೆಂಟ್, ಅಂಗಡಿ, ಮನರಂಜನಾ ಕೇಂದ್ರಗಳಲ್ಲಿ ಕೆಲಸಕ್ಕಿಟ್ಟುಕೊಳ್ಳುವುದು "ಬಾಲಕಾರ್ಮಿಕ ಪದ್ಧತಿ" ನಿಷೇಧ ಮತ್ತು ನಿಯಂತ್ರಣ ಕಾಯ್ದೆ 1986ರನ್ವಯ ಶಿಕ್ಷಾರ್ಹ ಅಪರಾಧ. ರಾಜ್ಯ ಸರ್ಕಾರವು 2001 ರಲ್ಲಿ ಬಾಲಕಾರ್ಮಿಕ ಕ್ರಿಯಾ ಯೋಜನೆಯನ್ನು ಜಾರಿಗೆ ತಂದಿದ್ದು, ಇದರ ಮೂಲಕ ಬಾಲಕಾರ್ಮಿಕರನ್ನು ಕೆಲಸದಿಂದ ಬಿಡುಗಡೆ ಮಾಡುವುದು ಹಾಗೂ ಸದರಿ ಬಿಡುಗಡೆ ಹೊಂದಿದ ಮಕ್ಕಳನ್ನು ಶಾಲೆಗೆ ಸೇರಿಸುವ ಕಾರ್ಯಕ್ರಮವನ್ನು ಮಾಡಲಾಗುತ್ತದೆ. ಪ್ರತಿವರ್ಷವೂ ಜೂನ್ 12 ರಂದು "ಬಾಲಕಾರ್ಮಿಕ ವಿರೋಧಿ ದಿನ"ವನ್ನು ರಾಜ್ಯಾದ್ಯಂತ ಆಚರಿಸಲಾಗುತ್ತದೆ.**



**ಕಳೆದು ಹೋಗುವ ಬಾಲ್ಯ:**

ನಿಜ. ಮಕ್ಕಳು ಮನೆಯ ದೀಪಗಳಂತೆ, ದೇಶದ ಭವಿಷ್ಯದ ಸಂಪತ್ತೂ ಹೌದು. ಅವರನ್ನು ಬಹು ಜೋಪಾನವಾಗಿ ಕಾಪಾಡಿ, ಉತ್ತಮ ಶಿಕ್ಷಣ ನೀಡಿ, ಸುಸಂಸ್ಕೃತ ಪ್ರಜೆಗಳನ್ನಾಗಿ ರೂಪಿಸುವುದು ಪ್ರತಿಯೊಬ್ಬರ ಕರ್ತವ್ಯ. ಆದರೆ ಭಾರತದಲ್ಲಿ ಇಂದು ಮಕ್ಕಳನ್ನು ಬಲವಂತವಾಗಿ ದುಡಿಸಿಕೊಳ್ಳಲಾಗುತ್ತಿದೆ. ಇದರ ಪರಿಣಾಮ ಅವರ ಅಮೂಲ್ಯವಾದ ಬಾಲ್ಯಾವಸ್ಥೆಯನ್ನು ಕಸಿದುಕೊಂಡಂತಾಗುತ್ತದೆ. ಇದರಿಂದಾಗಿ ಲಕ್ಷೋಪಲಕ್ಷ ಮಕ್ಕಳು ಶಿಕ್ಷಣದಿಂದ ವಂಚಿತರಾಗಿ, ಬಾಲ್ಯದ ಮುಗ್ಧತೆಯಿಂದ ದೂರಾಗಿ ನಿರಾಶಾದಾಯಕ ಭವಿಷ್ಯದಲ್ಲಿ ತೊಳಲಾಡುವ ಪರಿಸ್ಥಿತಿ ಎದುರಾಗುತ್ತದೆ.

**ದುಡಿಮೆಯ ಸಾಮಾನ್ಯ ದೃಶ್ಯ:**

ಮಕ್ಕಳನ್ನು ಹೀಗೆ ದುಡಿಮೆಗೆ ಹಚ್ಚಿರುವ ದೃಶ್ಯವನ್ನು ನಾವು, ದಿನನಿತ್ಯ ನಮ್ಮ ಸುತ್ತಮುತ್ತ ನೋಡಬಹುದು. ಯಾವುದೇ ಕಾರು ಗ್ಯಾರೇಜು, ಸ್ಕೂಟರ್ ವರ್ಕ್‌ಷಾಪ್‌ಗೆ ಹೋಗಿ ನೋಡಿ, ಸಾಮಾನ್ಯವಾಗಿ ಅಲ್ಲಿ ಸಣ್ಣ ಮಕ್ಕಳ ಕೈಯಲ್ಲಿ ಸ್ಪ್ಯಾನರ್ರು, ಸ್ಕ್ರೂ ಡ್ರೈವರ್ ಹಿಡಿದುಕೊಂಡು ಮೈ – ಕೈ, ಮುಖವನ್ನೆಲ್ಲ ಮಸಿ ಮಾಡಿಕೊಂಡು ತಲೆಬಗ್ಗಿಸಿಕೊಂಡು ಗಂಭೀರವಾಗಿ ರಿಪೇರಿ ಕೆಲಸ ಮಾಡುವುದರಲ್ಲಿ ತೊಡಗಿರುತ್ತಾರೆ ಅಥವಾ ಹೋಟೆಲುಗಳಿಗೆ ಹೋಗಿ ನೋಡಿ, ಅಲ್ಲೂ ಎಂಜಲು ತಟ್ಟೆ – ಬಟ್ಟಲುಗಳನ್ನೆತ್ತಿ, ತೊಳೆಯುವ ಕಾಯಕದಲ್ಲಿ ಮುಳುಗಿರುವ ಪುಟ್ಟಮಕ್ಕಳ ಮೈ ಕೈಗಳೆಲ್ಲ ಜಿಡ್ಡು, ಮುಸುರೆ, ಗಲೀಜು ಮೆತ್ತಿಕೊಂಡಿರುತ್ತದೆ. ಇಂಥ ಮಲೀನವಾದ ವಾತಾವರಣದಲ್ಲಿ ಬೆಳಗಿನಿಂದ ಸಂಜೆಯವರೆಗೆ ಒಂದೇ ಸಮನೆ ದುಡಿತ, ವಯಸ್ಸಿಗೆ ಮೀರಿದ, ದೇಹ ಭರಿಸಲಾಗದ ಶ್ರಮ! ವಿದ್ಯೆ ಕಲಿಯಬೇಕಾದ ಸಮಯದಲ್ಲಿ ಅವರದಲ್ಲದ ದುಡಿಮೆ, ಆಯಾಸ. ಆದರೂ ಸಂಪಾದಿಸುವ ಪುಡಿಗಾಸು ಹೆತ್ತವರ






ಕಷ್ಟಕ್ಕಾಗುತ್ತಿರುವ ಸಂತೃಪ್ತಿ. ಆದರೆ ಶಿಕ್ಷಣ, ಸರಿಯಾದ ಮಾರ್ಗದರ್ಶನವಿಲ್ಲದ ಅವರ ಭವಿಷ್ಯವೇನಾಗಬಹುದು ಎಂಬ ಕಲ್ಪನೆ ಅವರಿಗಂತೂ ಇರಲು ಸಾಧ್ಯವಿಲ್ಲ. ಮುಂದೆ ಅವರು ಸುಸಂಸ್ಕೃತ ಪ್ರಜೆಗಳಾಗುವ ಬದಲು ಸಮಾಜಘಾತುಕರಾಗಬಹುದು. ಈ ನಿಟ್ಟಿನಲ್ಲಿ ಚಿಂತಿಸಿದ ಸರ್ಕಾರ, ಮಕ್ಕಳನ್ನು ಇಂಥ ದುಸ್ಥಿತಿಯಿಂದ ರಕ್ಷಿಸಲು, ಅವರ ಏಳಿಗೆಗಾಗಿ ಕಟ್ಟುನಿಟ್ಟಿನ ಕಾನೂನುಗಳನ್ನು ಜಾರಿಗೆ ತಂದಿದೆ.

**ಬಾಲಕಾರ್ಮಿಕತೆಗೆ ಕಾರಣಗಳು:**

ಬಾಲಕಾರ್ಮಿಕ ಸಮಸ್ಯೆಗೆ ಪ್ರಮುಖ ಕಾರಣಗಳೆಂದರೆ ಬಡತನ, ಅನಕ್ಷರತೆ, ಅಜ್ಞಾನ, ಸಾರ್ವತ್ರಿಕ ಕಡ್ಡಾಯ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯಿಲ್ಲದಿರುವುದೇ ಆಗಿದೆ. ಬಾಲಕಾರ್ಮಿಕ ಪದ್ಧತಿ ವಾಸ್ತವವಾಗಿ ಎಲ್ಲಾ ಬಗೆಯ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಮಗುವಿನ ಸರ್ವಾಂಗೀಣ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಯಾವುದೇ ಕೆಲಸ ಅಥವಾ ದುಡಿಮೆ ಅಪಾಯಕಾರಿಯೇ. ಮಜೂರಿ ಉದ್ಯೋಗವಾಗಲಿ ಅಥವಾ ಮಜೂರಿಯೇತರ ಉದ್ಯೋಗವಾಗಲಿ ಅದು "ಬಾಲಕಾರ್ಮಿಕ ಪದ್ಧತಿ" ಎನಿಸಿಕೊಳ್ಳುತ್ತದೆ. ಶಾಲಾ ಶಿಕ್ಷಣದಿಂದ ವಂಚಿತರಾಗಿ ಹೊರಗುಳಿದ 14 ವರ್ಷದೊಳಗಿನ ಎಲ್ಲಾ ಮಕ್ಕಳು ಅಥವಾ 14 ವರ್ಷದೊಳಗಿನ ಯಾವುದೇ ಮಕ್ಕಳು ಶಾಲೆಯಿಂದ ಹೊರಗಿದ್ದು ದುಡಿಮೆ ಮಾಡದಿದ್ದರೂ 'ಬಾಲಕಾರ್ಮಿಕರು' ಎಂದೇ ಪರಿಗಣಿತರಾಗುತ್ತಾರೆ. ಬಾಲಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986ರಲ್ಲಿ ಈಗಾಗಲೇ 13 ವೃತ್ತಿಗಳಲ್ಲಿ ಮತ್ತು ಆ ಸಂಬಂಧ 51 ಪ್ರಕ್ರಿಯೆಗಳಲ್ಲಿ 14 ವರ್ಷದೊಳಗಿನ ಮಕ್ಕಳನ್ನು ತೊಡಗಿಸುವುದು ಅಥವಾ ನೇಮಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಈ ವೃತ್ತಿಗಳಲ್ಲದೆ ಮಕ್ಕಳನ್ನು ಗೃಹಕೃತ್ಯ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು, ಡಾಬಾ, ರೆಸ್ಟೋರೆಂಟ್, ಹೋಟೆಲ್, ಚಹಾ ಅಂಗಡಿಗಳು ಮತ್ತು ಮನರಂಜನಾ ಕೇಂದ್ರಗಳಲ್ಲಿ ದುಡಿಸಿಕೊಳ್ಳುವುದು ಕೂಡ ಶಿಕ್ಷಾರ್ಹ ಅಪರಾಧವಾಗುತ್ತದೆ.

**ಕಡಿಮೆ ಕೂಲಿ – ಕೆಲಸ ಹೆಚ್ಚು:**

- ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಂಡರೆ ಲಾಭ ಹೆಚ್ಚು. ಮುಗ್ಧ ಮಕ್ಕಳಿಂದ ಕಡಿಮೆ ಕೂಲಿಗೆ ಹೆಚ್ಚು ಕೆಲಸ ಮಾಡಿಸಬಹುದು. ಅವರು ಯಾವ ಪ್ರಶ್ನೆಗಳನ್ನೂ, ಬೋನಸ್ಸನ್ನೂ ಕೇಳದೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ. ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಳ್ಳಲು ಇದೊಂದು ಪ್ರಮುಖ ಕಾರಣ.
- ಜಗತ್ತಿನಲ್ಲಿ ಒಟ್ಟು 20 ಕೋಟಿಗೂ ಅಧಿಕ ಮಕ್ಕಳು ಬಾಲಕಾರ್ಮಿಕರಿದ್ದಾರೆ.
- ಭಾರತದ ಸಂವಿಧಾನದ ಪ್ರಕಾರ, ದೇಶದ ಎಲ್ಲ ಮಕ್ಕಳಿಗೂ ಉಚಿತ ಪ್ರಾಥಮಿಕ ಶಿಕ್ಷಣ ಕಡ್ಡಾಯ. ಹೆಣ್ಣು ಮಕ್ಕಳ ಶಿಕ್ಷಣ ಕಲಿಕೆಗೆ ವಿಶೇಷ ಒತ್ತು ನೀಡಲಾಗಿದೆ.
- ಬಾಲನ್ಯಾಯ (ಆರೋಗ್ಯ ಮತ್ತು ರಕ್ಷಣೆ) ಕಾಯ್ದೆ 2001ರನ್ವಯ ಮಕ್ಕಳಿಗೆ ಶಿಕ್ಷಣ, ಆರೈಕೆ ಮತ್ತು ರಕ್ಷಣೆ ಕೊಡಲೇಬೇಕು. ಮಕ್ಕಳು ಇದರಿಂದ ವಂಚಿತರಾದಲ್ಲಿ ಸಂಬಂಧಪಟ್ಟ ಇಲಾಖೆಗಳಿಂದ ಅಥವಾ ಮಕ್ಕಳ ಕಲ್ಯಾಣ ಸಮಿತಿಯ ಮೂಲಕ ಪರಿಹಾರ ಒದಗಿಸಲಾಗುವುದು.
- ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯು ಬಾಲಕಾರ್ಮಿಕರನ್ನು ಗುರುತಿಸಿ ಅಂಥವರಿಗೆ ಪುನರ್ವಸತಿ ಕಲ್ಪಿಸುವ ಗುರಿ ಹೊಂದಿದೆ. ಇದು ಭಾರತ ಸರ್ಕಾರದ ಕಾರ್ಮಿಕ ಸಚಿವಾಲಯದ ಒಂದು ಯೋಜನೆ. ಬಾಲಕಾರ್ಮಿಕರಿಗಾಗಿ ಎನ್.ಸಿ.ಎಲ್.ಪಿ. ವಿಶೇಷ ಶಾಲೆಗಳು / ವಸತಿ ಶಾಲೆಗಳನ್ನು ಹೊಂದಿದ್ದು ಈ ಶಾಲೆಗಳನ್ನು ಸ್ವಯಂಸೇವಾ ಸಂಸ್ಥೆಗಳು ನಿರ್ವಹಿಸುತ್ತಿವೆ.
- 14 ವರ್ಷದೊಳಗಿನ ಮಕ್ಕಳನ್ನು ಯಾವುದೇ ಅಪಾಯಕಾರಿ ವೃತ್ತಿಗಳಲ್ಲಿ ಮನೆ, ಹೋಟೆಲ್, ಡಾಬಾ, ರೆಸ್ಟೋರೆಂಟ್, ಅಂಗಡಿ, ಮನರಂಜನಾ ಕೇಂದ್ರಗಳಲ್ಲಿ ಕೆಲಸಕ್ಕಿಟ್ಟುಕೊಳ್ಳುವುದು "ಬಾಲಕಾರ್ಮಿಕ ಪದ್ಧತಿ" ನಿಷೇಧ ಮತ್ತು ನಿಯಂತ್ರಣ ಕಾಯ್ದೆ 1986ರನ್ವಯ ಶಿಕ್ಷಾರ್ಹ ಅಪರಾಧ. ರಾಜ್ಯ ಸರ್ಕಾರವು 2001 ರಲ್ಲಿ ಬಾಲಕಾರ್ಮಿಕ ಕ್ರಿಯಾ ಯೋಜನೆಯನ್ನು ಜಾರಿಗೆ ತಂದಿದ್ದು, ಇದರ ಮೂಲಕ ಬಾಲಕಾರ್ಮಿಕರನ್ನು ಕೆಲಸದಿಂದ ಬಿಡುಗಡೆ ಮಾಡುವುದು ಹಾಗೂ ಸದರಿ ಬಿಡುಗಡೆ ಹೊಂದಿದ ಮಕ್ಕಳನ್ನು ಶಾಲೆಗೆ ಸೇರಿಸುವ ಕಾರ್ಯಕ್ರಮವನ್ನು ಮಾಡಲಾಗುತ್ತದೆ. ಪ್ರತಿವರ್ಷವೂ ಜೂನ್ 12 ರಂದು "ಬಾಲಕಾರ್ಮಿಕ ವಿರೋಧಿ ದಿನ"ವನ್ನು ರಾಜ್ಯಾದ್ಯಂತ ಆಚರಿಸಲಾಗುತ್ತದೆ.



**ಜಾಗ್ರತೆ**

ನಿಮ್ಮ ಮನೆಯಲ್ಲಿ 14 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಳ್ಳಬೇಡಿ. ನೂತನ ಕಾಯ್ದೆಯನ್ನು ಉಲ್ಲಂಘಿಸುವವರಿಗೆ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲಾಗಿದೆ ಜಾಗ್ರತೆ. ಪ್ರಥಮಬಾರಿ ನಿಯಮ ಉಲ್ಲಂಘನೆಗೆ 6 ತಿಂಗಳಿಂದ 2 ವರ್ಷದವರೆಗೆ, 2ಕ್ಕಿಂತ ಹೆಚ್ಚು ಬಾರಿ ನಿಯಮ ಉಲ್ಲಂಘನೆ ಮಾಡಿದವರಿಗೆ 1–3 ವರ್ಷದವರೆಗೂ ಜೈಲುಶಿಕ್ಷೆ ವಿಧಿಸಲು ಹಾಗೂ ರೂ. 20,000 ರಿಂದ 50,000 ದವರೆಗೂ ದಂಡ ವಿಧಿಸಲು ಅವಕಾಶವಿರುತ್ತದೆ. ಹಿಂದಿನ ಕಾಯ್ದೆ ಪ್ರಕಾರ ಮಕ್ಕಳನ್ನು ದುಡಿಸಿಕೊಳ್ಳುವವರಿಗೆ ಅನ್ವಯವಾಗುವ ನಿಯಮಗಳು, ಮಕ್ಕಳ ಹೆತ್ತವರು, ಪಾಲಕರಿಗೂ ಅನ್ವಯವಾಗುತ್ತಿದ್ದವು. ಆದರೆ ಈ ನಿಯಮಕ್ಕೆ ಇದೀಗ ಬದಲಾವಣೆ ತರಲಾಗಿದ್ದು, ಹೆತ್ತವರು ಅಥವಾ ಪಾಲಕರಿಗೆ ಮೊದಲಬಾರಿ ಕಾಯಿದೆ ಉಲ್ಲಂಘನೆಗೆ ಶಿಕ್ಷೆಯಿಂದ ವಿನಾಯಿತಿ ನೀಡಲಾಗಿದೆ. ಆದರೆ ಒಂದಕ್ಕಿಂತ ಹೆಚ್ಚು ಬಾರಿ ಮಕ್ಕಳನ್ನು ದುಡಿಯಲು ಕಳಿಸಿದಾಗ ಅವರಿಗೆ 10,000 ರೂ.ವರೆಗೆ ದಂಡ ವಿಧಿಸಲು ಅವಕಾಶವಿರುತ್ತದೆ.

ಒಂದು ವೇಳೆ ನೀವು ಸರ್ಕಾರಿ ನೌಕರರಾಗಿದ್ದು, ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಂಡರೆ, ನಿಮ್ಮ ಕೆಲಸ ಕೂಡ ಶಾಶ್ವತವಾಗಿ ವಜಾಗೊಳ್ಳುವುದು. ಹಾಗೆಂದು ಕಾನೂನಿಗೆ ಹೆದರಿ ನಿಯಮಗಳನ್ನು ಪಾಲಿಸುವುದಲ್ಲ. ಇದು ಮಾನವತೆಗೆ ಸಂಬಂಧಿಸಿದ ಭಾವನಾತ್ಮಕ ವಿಚಾರ. ಬಡತನದಲ್ಲಿರುವ ಮಕ್ಕಳನ್ನು ದುಡಿಸಿಕೊಳ್ಳುವುದು ಬೇಡ. ಅಂಥವರಿಗೆ ಮಾರ್ಗದರ್ಶನ ಮಾಡಿ ಶಾಲೆಗೆ ಸೇರಿಸಲು ನೆರವಾಗುವುದೊಳಿತು. ತಿಳುವಳಿಕೆ ಇಲ್ಲದ ಅವರ ತಂದೆ–ತಾಯಿಗಳಿಗೆ ಅರಿವು ಮೂಡಿಸಿ, ಮಾನವೀಯತೆಯಿಂದ ವರ್ತಿಸೋಣ, ಬಾಲಕಾರ್ಮಿಕತೆಯನ್ನು ನಿಲ್ಲಿಸಲು ಪ್ರತಿಜ್ಞೆ ಮಾಡೋಣ. ಶಿಕ್ಷಣ ಕೊಡಿಸುವ ಮೂಲಕ ಅವರಿಗೆ ಸಂತೋಷದ ಬಾಲ್ಯಜೀವನವನ್ನು ಮರಳಿಸೋಣ.





# 24ನೇ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ

ಹೆಚ್. ಶಿವಣ್ಣ

**ಬೂ**ಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ ಅವರು ಗುರುವಾರ ಮೇ 17 ರಂದು ಬೆಳಿಗ್ಗೆ 9 ಗಂಟೆಗೆ ಗೌರವಾನ್ವಿತ ರಾಜ್ಯಪಾಲರಾದ ವಜುಭಾಯಿ ವಾಲ ಅವರಿಂದ ಪ್ರಮಾಣ ವಚನ ಸ್ವೀಕರಿಸುವ ಮುಖಾಂತರ ಹದಿನೈದನೇ ವಿಧನಾಸಭೆಗೆ 24 ನೇ ಮುಖ್ಯಮಂತ್ರಿಯಾದರು. ಈ ಮೂಲಕ ಮೂರನೇ ಬಾರಿ ರಾಜ್ಯದ ಮುಖ್ಯಮಂತ್ರಿಯಾದ ಕೀರ್ತಿ ಅವರದು. 104 ಸ್ಥಾನವನ್ನು ಹೊಂದಿರುವ ಅವರಿಗೆ 15 ದಿನದ ಒಳಗೆ ಬಹುಮತ ಸಬೀತು ಪಡಿಸುವಂತೆ ರಾಜ್ಯಪಾಲರು ಅವಕಾಶವನ್ನು ನೀಡಿದ್ದರು.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆಯ ಸಾಮಾನ್ಯ ರೈತ ಕುಟುಂಬದಲ್ಲಿ ಸಿದ್ದಲಿಂಗಪ್ಪ ಮತ್ತು ಪುಟ್ಟತಾಯಮ್ಮ ದಂಪತಿಗೆ 1943 ರ ಫೆಬ್ರವರಿ 27 ರಂದು ಜನಿಸಿದ ಯಡಿಯೂರಪ್ಪ ಅವರ ಬೆಳವಣಿಗೆ ಹುಬ್ಬೇರಿಸುವಂತದ್ದು.

ಬಾಲಕನಾಗಿದ್ದಾಗಲೇ ಆರ್.ಎಸ್.ಎಸ್ ಕಾರ್ಯಕರ್ತರಾಗಿದ್ದ ಬಿ.ಎಸ್.ವೈ ಅವರು 1972 ರಲ್ಲಿ ಜನಸಂಘದ ಶಿಕಾರಿಪುರ ಘಟಕದ ಮುಖ್ಯಸ್ಥರಾಗಿ ಆಯ್ಕೆಯಾಗುವ ಮೂಲಕ ಜನಸೇವೆಯಲ್ಲಿ ತೊಡಗಿಸಿಕೊಂಡರು. ಆನಂತರ 1975 ರಲ್ಲಿ ಶಿಕಾರಿಪುರ ಪುರಸಭೆಯ ಅಧ್ಯಕ್ಷಗಾದಿ ಹಿಡಿದು ಯಶಸ್ಸಿನ ದಾಪುಗಾಲು ಹಾಕಿದರು. ಅಲ್ಲಿಂದ ಸತತವಾಗಿ 4 ದಶಕಗಳ ಕಾಲ ರಾಜಕೀಯದಲ್ಲಿ ಹೋರಾಟದ ಬದುಕನ್ನೇ ನಡೆಸಿದರು. ಹಿಡಿದದ್ದನ್ನು ಸಾಧಿಸುವ ಛಲ, ಹಗಲಿರುಳು ಶ್ರಮದ ಮೂಲಕ ಹಂತ ಹಂತವಾಗಿ ಮೇಲೇರಿದ ಬಿ.ಎಸ್.ವೈ ರಾಜಕಾರಣದಲ್ಲಿ ತಮ್ಮದೇ ವರ್ಚಸ್ಸು ಗಳಿಸಿಕೊಂಡರು. ಅಪಾರ ಅಭಿಮಾನಿಗಳನ್ನು ಗಳಿಸುವ ಮೂಲಕ ಭಾರತೀಯ ಜನತಾ ಪಕ್ಷದ ಅಜಾನುಬಾಹು ನಾಯಕನಾಗಿ ಬೆಳೆಯುವುದರ ಮೂಲಕ 1983 ರಲ್ಲಿ ಮೊಟ್ಟಮೊದಲ ಬಾರಿಗೆ ಕರ್ನಾಟಕ ವಿಧಾನ ಸಭೆಗೆ ಹೆಜ್ಜೆ ಇಡುವ ಮುಖಾಂತರ ಶಾಸಕರಾದರು.

ಬಿ.ಎಸ್. ಯಡಿಯೂರಪ್ಪ ಅವರಿಗೆ 2007 ರಲ್ಲಿ ಮೊದಲ ಬಾರಿಗೆ ಜೆಡಿಎಸ್ ಜೊತೆಗಿನ ಹೊಂದಾಣಿಕೆ ಮೂಲಕ ಮುಖ್ಯಮಂತ್ರಿ ಸ್ಥಾನವನ್ನು ತಂದುಕೊಟ್ಟಿತು. ಆದರೆ ರಾಜಕೀಯ ಜಂಜಾಟಗಳಿಂದಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ 2008 ಮೇ ನಲ್ಲಿ ನಡೆದ ಚುನಾವಣೆಯಲ್ಲಿ ಸರಳ ಬಹುಮತದೊಂದಿಗೆ ಬಿಜೆಪಿಯನ್ನು ಅಧಿಕಾರಕ್ಕೆ ತರುವ ಮೂಲಕ ಆರು ಜನ ಪಕ್ಷೇತರರ ಬೆಂಬಲದೊಂದಿಗೆ ಎರಡನೇ ಬಾರಿಗೆ ಮುಖ್ಯಮಂತ್ರಿಯಾದರು.

ತಮ್ಮದೇ ಪಕ್ಷದ ಆಂತರಿಕ ಸಮಸ್ಯೆಗಳಿಂದ ಅಧಿಕಾರ ಕಳೆದುಕೊಂಡು, 2013 ರಲ್ಲಿ ಕೆಜೆಪಿ ಪಕ್ಷವನ್ನು ಕಟ್ಟಿ ಸೆಡ್ಡು ಹೊಡೆದರು. ಆದರೆ ಯಶಸ್ಸು ಕಾಣದ ಬಿಎಸ್ ವೈ ಅವರಿಗೆ ಮತ್ತೆ ಬಿಜೆಪಿ ಬಾಗಿಲು ತೆರೆಯಿತು. ಹಿಂದೆ–ಮುಂದೆ ನೋಡದೆ ಮತ್ತೆ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡರು. 2013 ರ ಲೋಕಸಭೆಗೆ ಆಯ್ಕೆಯಾಗುವ ಮೂಲಕ ತಮ್ಮ ರಾಜಕೀಯ ಯಶಸ್ಸನ್ನು ಕಂಡರು. ಮಹತ್ವದ 2018 ರ ಈ ಚುನಾವಣೆಯಲ್ಲಿ ಹಗಲಿರುಳು ಪಕ್ಷ ಕಟ್ಟಿ ತಮ್ಮ ನಾಯಕತ್ವದಲ್ಲಿ ಮತ್ತೆ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರುವ ಮೂಲಕ ಮೂರನೇ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ದೇವರು ಹಾಗೂ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಆದರೆ ಬಹುಮತ ಸಾಬೀತಿಗೆ ರಾಜ್ಯಪಾಲರಿಂದ 15 ದಿನಗಳ ಕಾಲಾವಕಾಶ ಪಡೆದುಕೊಂಡಿದ್ದ ಬಿ.ಎಸ್. ಯಡಿಯೂರಪ್ಪ ಅವರಿಗೆ ಸುಪ್ರೀಂಕೋರ್ಟ್ ಮೇ 19 ರಂದು ಸಂಜೆ 4 ಗಂಟೆಗೆ ಬಹುಮತ ಸಾಬೀತು ಪಡಿಸುವಂತೆ ಸೂಚಿಸಿತು. ಈ ಹಿನ್ನೆಲೆಯಲ್ಲಿ ಅಂದಿನ ವಿಧಾನಸಭಾ ಕಲಾಪದಲ್ಲಿ ವಿಶ್ವಾಸ ಮತಯಾಚನೆ ಮಾಡದ ಅವರು ತಮ್ಮ ಪಕ್ಷವನ್ನು ಬೆಂಬಲಿಸಿದ ಮತದಾರರಿಗೆ ಮತ್ತು ಕಾರ್ಯಕರ್ತರಿಗೆ ಧನ್ಯವಾದಗಳನ್ನು ತಿಳಿಸಿ ರಾಜ್ಯಪಾಲರಿಗೆ ರಾಜೀನಾಮೆಯನ್ನು ಸಲ್ಲಿಸುವ ಮೂಲಕ ವಿಪಕ್ಷ ನಾಯಕರ ಸ್ಥಾನವನ್ನು ಅಲಂಕರಿಸಿದರು.



| ವಿಧಾನಸಭಾ ಚುನಾವಣೆಗಳಲ್ಲಿ ನಡೆದಿರುವ ಮತದಾನದ ಶೇಕಡಾವಾರು | |
|---|---|
| ವರ್ಷ | ಶೇಕಡಾವಾರು |
| 1952 | 50.38 |
| 1957 | 51.30 |
| 1962 | 59.00 |
| 1967 | 63.10 |
| 1972 | 61.57 |
| 1978 | 71.90 |
| 1983 | 65.67 |
| 1985 | 67.25 |
| 1989 | 67.57 |
| 1994 | 68.54 |
| 1994 | 67.65 |
| 2004 | 65.17 |
| 2008 | 64.68 |
| 2013 | 71.45 |
| 2018 | 72.36 |

# ದಾಖಲೆ ಮತದಾನ ದಾಖಲಿಸಿದ 15ನೇ ವಿಧಾನಸಭಾ ಚುನಾವಣೆ

ಕರ್ನಾಟಕದ 15 ನೇ ವಿಧಾನಸಭೆಗೆ ಮೇ 12, 2018 ರಂದು ನಡೆದ ಚುನಾವಣೆಯಲ್ಲಿ ಶೇ.72.36ರಷ್ಟು ಮತದಾನವಾಗುವ ಮೂಲಕ ಹೊಸ ದಾಖಲೆಯನ್ನು ದಾಖಲಿಸಿದೆ.

ಇದು ಇದುವರೆಗಿನ ಚುನಾವಣೆಗಳಲ್ಲೇ ದಾಖಲೆ ಎನಿಸಿದ ಪ್ರಮಾಣದ ಮತದಾನವಾಗಿದೆ. 1978 ರ ಚುನಾವಣೆಯಲ್ಲಿ ಶೇ.71.90 ರಷ್ಟು ಮತದಾನವಾಗಿದ್ದುದು ಇದುವರೆಗಿನ ದಾಖಲೆ ಎನಿಸಿತ್ತು. ಈಗ 2018ರ ವಿಧಾನ ಸಭಾ ಚುನಾವಣೆಯಲ್ಲಿ ಈ ಪ್ರಮಾಣ ಅಂಚೆ ಮತಪತ್ರ ಸೇರಿ ಶೇ.72.36 ಕ್ಕೆ ಏರಿಕೆಯಾಗಿದೆ. ಅಂಚೆ ಮತಪತ್ರಗಳನ್ನು ಹೊರತುಪಡಿಸಿ ಶೇ. 71.91 ರಷ್ಟು ಮತದಾನವಾಗಿದೆ.

ಚುನಾವಣಾ ಆಯೋಗವು 2009ನೇ ಸಾಲಿನಿಂದ ಸಮಗ್ರ ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಪಾಲ್ಗೊಳ್ಳುವಿಕೆ ಆಂದೋಲನ (SVEEP) ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಮತದಾರರು ಭಾಗವಹಿಸುವುದನ್ನು ಉತ್ತೇಜಿಸಲು ಅನೇಕ ಕ್ರಮಗಳನ್ನು ಕೈಗೊಂಡಿತ್ತು.

"ಒಳಗೊಳ್ಳುವ ಸುಗಮ ಮತ್ತು ನೈತಿಕ ಚುನಾವಣೆ" ಈ ಬಾರಿಯ ಚುನಾವಣೆಯ ಉದ್ದೇಶವಾಗಿತ್ತು. ದಿವ್ಯಚೇತನರು, ಯುವ ಮತದಾರರು, ಲಿಂಗತ್ವ ಅಲ್ಪಸಂಖ್ಯಾತರು, ಅಲೆಮಾರಿಗಳು, ದೇವದಾಸಿ ಹಾಗೂ ಮತ್ತಿತರರನ್ನು ಮತದಾರರನ್ನಾಗಿ ನೋಂದಣೆ ಮಾಡಿಸಲು ಸ್ವೀಪ್ ಎಲ್ಲ ಪ್ರಯತ್ನವನ್ನು ಮಾಡಿತ್ತು. ಈ ಕಾರಣದಿಂದ 2018 ವಿಧಾನಸಭಾ ಚುನಾವಣೆಯಲ್ಲಿ ದಾಖಲೆ ಮತದಾನವಾಗಿದೆ ಎಂದರೆ ತಪ್ಪಾಗಲಾರದು.

**5 ಕೋಟಿ ಜನರನ್ನು ತಲುಪಿದ ಸ್ವೀಪ್ :-**

ಸಮಗ್ರ ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಪಾಲ್ಗೊಳ್ಳುವಿಕೆ ಆಂದೋಲನ (SVEEP) ವು ರಾಜ್ಯದಾದ್ಯಂತ ಕೈಗೊಂಡಿರುವ ವಿವಿಧ ಚಟುವಟಿಕೆಗಳ ಮುಖಾಂತರ ಒಟ್ಟು 5,00,13,172 ಜನರನ್ನು ತಲುಪಿದೆ.

ಮತದಾನದ ಪ್ರಕ್ರಿಯೆಯಲ್ಲಿ ಜಾಗೃತಿ ಮತ್ತು ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಬಹು ಮಾಧ್ಯಮ ಮಧ್ಯಸ್ಥಿಕೆಗಳ ಮೂಲಕ ಜನರನ್ನು ತಲುಪುವ ಕಾರ್ಯಕ್ರಮವೇ ಸಮಗ್ರ ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಪಾಲ್ಗೊಳ್ಳುವಿಕೆ ಆಂದೋಲನ (SVEEP). ರಾಜ್ಯದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಜನಸಂಖ್ಯಾ ಆಧಾರದ ಮೇಲೆ ಹಾಗೂ ಹಿಂದಿನ ಚುನಾವಣೆಗಳಲ್ಲಿ ಮತದಾರರ ಭಾಗವಹಿಸುವಿಕೆಯ ಇತಿಹಾಸದ ಆಧಾರದ ಮೇಲೆ ವಿನ್ಯಾಸಗೊಳಿಸಲಾಗಿದೆ.

ಭಾರತದ ಚುನಾವಣಾ ಆಯೋಗವು ಮತದಾರರ ಅರಿವು, ಮನೋಭಾವ ಮತ್ತು ಅಭ್ಯಾಸಗಳ ಕುರಿತು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ ಬೆಂಗಳೂರು, ಇವರಿಗೆ ಸಮೀಕ್ಷೆ ನಡೆಸಲು ಸೂಚಿಸಿತು. ಈ ಸಮೀಕ್ಷೆಯಲ್ಲಿ ಕಂಡು ಬಂದ ಕೊರತೆಗಳನ್ನು ನಿವಾರಿಸಲು ಆ ಅಂಶಗಳ ಆಧಾರದ ಮೇಲೆ ಸ್ವೀಪ್ ಕ್ರಿಯಾ ಯೋಜನೆಯನ್ನು ಹಾಗೂ ಸಲಹೆಗಳನ್ನು ರೂಪಿಸಲಾಯಿತು.

ರಾಜ್ಯಾದ್ಯಂತ ಚುನಾವಣಾ ಪ್ರಕ್ರಿಯೆಗಳ ಜಾಗೃತಿ ಮೂಡಿಸಲು ಒಟ್ಟಾರೆ 5849 ಚಟುವಟಿಕೆಗಳನ್ನು ಕೈಗೊಳ್ಳಲಾಗಿತ್ತು. ಮುದ್ರಣ ಮಾಧ್ಯಮದ ಮುಖಾಂತರ 2.50 ಕೋಟಿ ಜನರನ್ನು ತಲುಪಲಾಗಿದೆ. ವಿವಿಧ ದಿನಪತ್ರಿಕೆಗಳಲ್ಲಿ ಸುಮಾರು 1566 ಜಾಹಿರಾತುಗಳನ್ನು, ವಿವಿಧ ವಾಹಿನಿಗಳಲ್ಲಿ 8,00,044 (ಸೆಕೆಂಡ್‌ಗಳು) ಸ್ಪಾಟ್ಸ್‌ಗಳನ್ನು ಹಾಗೂ ರೇಡಿಯೋ ಜಿಂಗಲ್ಸ್‌ಗಳನ್ನು ಬಿಡುಗಡೆ ಮಾಡಲಾಗಿತ್ತು. 2530 ಹೆದ್ದಾರಿ ಫಲಕಗಳನ್ನು ಅಳವಡಿಸಲಾಗಿದ್ದು, 51,87,067 ಭಿತ್ತಿ ಪತ್ರ ಮತ್ತು ಕರಪತ್ರಗಳನ್ನು ವಿತರಿಸಲಾಗಿತ್ತು.

ಇದಲ್ಲದೇ, ಚುನಾವಣಾ ಪ್ರಕ್ರಿಯೆಗಳ ಬಗ್ಗೆ ಮತದಾರರಿಗೆ ಮತದಾನದ ಬಗ್ಗೆ ಅರಿವು ಮೂಡಿಸಲು 1658 ಬೀದಿ ನಾಟಕಗಳು ಮತ್ತು ಇತರೆ ಜಾನಪದ ಕಲೆಗಳ ಮೂಲಕ ಪ್ರಾತ್ಯಕ್ಷಿಕೆ ನಡೆಸುವುದರ ಜೊತೆಗೆ 1549 ರ್‍ಯಾಲಿ ಮತ್ತು ಮ್ಯಾರಥಾನ್ ಓಟಗಳನ್ನು ಹಾಗೂ ಜಿಲ್ಲಾ ವಕಾಥಾನ್‌ಗಳೊಂದಿಗೆ 277 ವಿಶೇಷ ಕಾರ್ಯಕ್ರಮಗಳನ್ನು ನಡೆಸಿಕೊಡಲಾಗಿತ್ತು. 7369 ವಿಶೇಷ ಶಿಬಿರಗಳು, 17,166 ಸಮುದಾಯ ಕಾರ್ಯಕ್ರಮಗಳು ಮತ್ತು 3156 ಇತರೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

**ಜನಸ್ನೇಹಿ ಮತಗಟ್ಟೆಗಳ ವ್ಯವಸ್ಥೆ:-**

ಇದೇ ಮೊದಲ ಬಾರಿಗೆ ಮಹಿಳಾ ಮತದಾರರನ್ನು ಮತದಾನ ಮಾಡುವಂತೆ ಪ್ರೋತ್ಸಾಹಿಸುವ ಸಲುವಾಗಿ 600 ಪಿಂಕ್(ಸಖಿ) ಮತಗಟ್ಟೆಗಳನ್ನು ತೆರೆಯಲಾಗಿತ್ತು. 26 ಸಂಪೂರ್ಣ ದಿವ್ಯಚೇನತರಿಂದ ನಿರ್ವಹಿಸಲಾದ ಮತಗಟ್ಟೆಗಳು ಮತ್ತು 28 ಸಾಂಪ್ರದಾಯಿಕ ಮತಗಟ್ಟೆಗಳನ್ನು ಮಾದರಿ ಮತಗಟ್ಟೆಗಳನ್ನಾಗಿ ನಿರ್ಮಿಸಲಾಗಿತ್ತು. ಎಲ್ಲ ಮತಗಟ್ಟೆಗಳಲ್ಲಿ ಸದೃಢ ಇಳಿಜಾರಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ,

**"ಒಳಗೊಳ್ಳುವ ಸುಗಮ ಮತ್ತು ನೈತಿಕ ಚುನಾವಣೆ" ಈ ಬಾರಿಯ ಚುನಾವಣೆಯ ಉದ್ದೇಶವಾಗಿತ್ತು. ದಿವ್ಯಚೇತನರು, ಯುವ ಮತದಾರರು, ಲಿಂಗತ್ವ ಅಲ್ಪಸಂಖ್ಯಾತರು, ಅಲೆಮಾರಿಗಳು, ದೇವದಾಸಿ ಹಾಗೂ ಮತ್ತಿತರರನ್ನು ಮತದಾರರನ್ನಾಗಿ ನೋಂದಣೆ ಮಾಡಿಸಲು ಸ್ವೀಪ್ ಎಲ್ಲ ಪ್ರಯತ್ನವನ್ನು ಮಾಡಿತ್ತು.**

ಆರೋಗ್ಯ ರಕ್ಷಣೆಯ ವ್ಯವಸ್ಥೆ, ಮಕ್ಕಳಿಗೆ ಆಟವಾಡಲು ಪ್ರತ್ಯೇಕ ಸ್ಥಳದ ವ್ಯವಸ್ಥೆ, ದಿವ್ಯಚೇತನರಿಗೆ ಗಾಲಿಕುರ್ಚಿ, ಭೂತಗನ್ನಡಿ ಸೌಲಭ್ಯಗಳು ಮತ್ತು ಸ್ವಯಂಸೇವಕರ ನೆರವು, ಶೌಚಾಲಯದ ವ್ಯವಸ್ಥೆ, ಚಿಹ್ನೆಗಳುಳ್ಳ ಫಲಕಗಳು, ಸಾಲಿನಲ್ಲಿ ನಿಲ್ಲುವವರಿಗೆ ನೆರಳಿನ ವ್ಯವಸ್ಥೆ ಮಾಡಲಾಗಿತ್ತು.

ಭಾರತರತ್ನ ಪ್ರೊ॥ ಸಿ.ಎನ್.ಆರ್. ರಾವ್, ರಾಹುಲ್‌ದ್ರಾವಿಡ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ: ಚಂದ್ರಶೇಖರ ಕಂಬಾರ್ ಮತ್ತು ಮತ್ತಿತರ ಗಣ್ಯವ್ಯಕ್ತಿಗಳು ಚುನಾವಣಾ ಪ್ರಚಾರದ ಹೆಮ್ಮೆಯ ಐಕಾನ್‌ಗಳಾಗಿದ್ದಾರೆ. ಐಕಾನ್‌ಗಳನ್ನು ಬಳಸಿಕೊಂಡು ಸಿದ್ಧಪಡಿಸಲಾದ ಸಾಕ್ಷ್ಯಚಿತ್ರಗಳು, ಭಿತ್ತಿಪತ್ರ, ಬ್ಯಾನರ್, ಮುಂತಾದವುಗಳನ್ನು ಚಿತ್ರಮಂದಿರ, ಮಾಲ್, ಮುದ್ರಣ, ವಿದ್ಯುನ್ಮಾನ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಪರಿಣಾಮಕಾರಿಯಾಗಿ ಬಳಸಲಾಗಿತ್ತು. ■



# ಬಯಲು ನಾಡಲ್ಲೂ ಕಂಗೊಳಿಸುತ್ತಿರುವ ಅಡಿಕೆ ತೋಟ

ಗಣಪತಿ ಹಾಸ್ಪುರ

ನಾಲ್ಕಾರು ಕೃಷಿ ಮಿತ್ರರೊಂದಿಗೆ ಬಯಲು ಸೀಮೆ ನಾಡಿನಲ್ಲಿ ಓಡಾಡುತ್ತಿದ್ದೆ. ಬಹುದೂರದಲ್ಲಿ ಹಸಿರಿನಿಂದ ಕಂಗೊಳಿಸುವ ಅಡಿಕೆ ತೋಟವನ್ನು ಕಂಡಾಗ ಸಹಜವಾಗಿಯೇ ಆಶ್ಚರ್ಯವಾಗಿತ್ತು. ಏಕೆಂದರೆ ಕಳೆದ ಎರಡು– ಮೂರು ವರ್ಷಗಳಿಂದ ಸರಿಯಾಗಿ ಮಳೆ ಸುರಿಯದ ಕಾರಣ ನಮ್ಮ ಮಲೆನಾಡಿನ ಪ್ರದೇಶದಲ್ಲಿಯೇ "ಅಡಿಕೆ ತೋಟ" ವ್ಯವಸ್ಥಿತವಾಗಿ ಇಟ್ಟುಕೊಳ್ಳುವುದೇ ಕಷ್ಟವೆನಿಸುವ ಸ್ಥಿತಿ ನಿರ್ಮಾಣವಾಗಿದೆ. ಅದೆಷ್ಟೋ ಕೃಷಿಕರ ಅಡಿಕೆ ಮರದ ಚಂಡೆ ಉದುರಿ ಹೋಗಿ, ತೋಟವೇ ಬರಿದಾಗುತ್ತಿದೆ. ವಾಸ್ತವಿಕತೆ ಹೀಗಿರುವಾಗ ಬಯಲು ಸೀಮೆಯಲ್ಲಿ ಹಸಿರಿನ ತೋಟ ಕಂಡಾಕ್ಷಣ ಸಹಜವಾಗಿಯೇ ಪರಮಾಶ್ಚರ್ಯವಾಗಿತ್ತು!! ಆ ತೋಟವನ್ನು ಕಣ್ಣಾರೆ ನೋಡಬೇಕು, ಅಲ್ಲಿನ ವಿಶೇಷತೆಯೇನು ತಿಳಿಯಬೇಕು ಎನ್ನುವ ಕುತೂಹಲ ಉಂಟಾಗಿತ್ತು. ಮನದ ಬಯಕೆಯನ್ನು ಈಡೇರಿಸಿಕೊಳ್ಳುವ ಸದುದ್ದೇಶದಿಂದ ಆ ತೋಟದತ್ತ ಹೆಜ್ಜೆ ಹಾಕಿದ್ದೆ.

ಆ ತೋಟವಿದ್ದಿದ್ದು ಚಿತ್ರದುರ್ಗದಲ್ಲಿ. ಅಂದರೆ ಹಾವೇರಿ– ಚಿತ್ರದುರ್ಗದ ಹೆದ್ದಾರಿಯಲ್ಲಿ ಸಿಗುವ (ಚಿತ್ರದುರ್ಗದಿಂದ 10 ಕಿ. ಮೀ. ಹಿಂದೆಯೇ....) ಆಯನಹಳ್ಳಿ ಕಾವಲು ಎಂಬ ಪುಟ್ಟ ಹಳ್ಳಿ ಸಿಗುತ್ತೆ. ಮುಖ್ಯ ರಸ್ತೆಯಿಂದ ಸುಮಾರು ಎರಡು ಕಿ. ಮೀ. ಒಳಗಡೆ ಹೋದರೆ ಈ ಸಂಮೃದ್ಧ ಅಡಿಕೆ ತೋಟವಿದೆ. ಪ್ರೊ. ಕೊಟ್ರಪ್ಪಾ ಸಿ. ವಿ. ಅವರೇ ಈ ತೋಟದ ಮಾಲೀಕರು.

ಇವರು ಸ್ಥಳೀಯ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕಳೆದ 32 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಅತ್ತ ಕಡೆಗೆ ಬೋಧನೆ ಮಾಡುತ್ತಲೇ.... ಇತ್ತ ಕಡೆಗೆ ಪಿತ್ರಾರ್ಜಿತವಾಗಿ ಲಭಿಸಿದ ಕೃಷಿ ಭೂಮಿಯನ್ನು ವ್ಯವಸ್ಥಿತವಾಗಿ ಸಾಗುವಳಿ ಮಾಡುತ್ತಿರುವುದು ವಿಶೇಷ. ಅಕ್ಕಪಕ್ಕದಲ್ಲಿ ಅಡಿಕೆ ತೋಟ, ತೆಂಗಿನ ತೋಟ ಬಣಬಣ ಎನ್ನುತ್ತಿರುವ ಪ್ರದೇಶದಲ್ಲಿಯೂ ಬಹಳ ಆಸಕ್ತಿ, ಶ್ರದ್ಧೆಯಿಂದ ಅಡಿಕೆ ತೋಟವನ್ನು ನಿರ್ವಹಣೆ ಮಾಡಿ, ಹಸಿರಿನಿಂದ ಕಂಗೊಳಿಸುವಂತೆ ಮಾಡಿರುವುದು ಈ ಕೃಷಿ ಅಧ್ಯಾಪಕರ ಸಾಧನೆ ಗಮನಾರ್ಹವಾಗಿದೆ.

**ಹೀಗುಂಟು ಅವರ ತೋಟ....**

ಪ್ರೊಫೇಸರ್ ಕೊಟ್ರೇಶಿ ಅವರಿಗೆ 19 ಎಕರೆ ಕೃಷಿ ಭೂಮಿಯಿದೆ. ಈ ಫಲವತ್ತಾದ ನೆಲದಲ್ಲಿ ಈರುಳ್ಳಿ, ಕಡ್ಲೆ, ಮೆಕ್ಕೆ ಜೋಳ.... ಹೀಗೆ ವಿಭಿನ್ನ ಅಲ್ಪಾವಧಿಯ ಬೆಳೆಗಳನ್ನು ಬೆಳೆಯುತ್ತಿದ್ದರು. ಆ ಭಾಗದಲ್ಲಿ ಈ ಬೆಳೆಗಳನ್ನೇ ಹೆಚ್ಚಿನ ಪ್ರಮಾಣದಲ್ಲಿ ಕೃಷಿಯನ್ನು ಮಾಡುತ್ತಿದ್ದರಿಂದ, ಈ ಕೃಷಿಕರು ಸಹಾ ಬೆಳೆಗಳನ್ನು ಉತ್ಸಾಹದಿಂದ ಬೆಳೆದು ಸಂತೃಪ್ತಿ ಪಡುತ್ತಿದ್ದರು. ಸುಮಾರು 200 ಕ್ವಿಂಟಲ್‌ನಷ್ಟು ಈರುಳ್ಳಿ, 300 ಕ್ವಿಂಟಲ್‌ನಷ್ಟು ಮೆಕ್ಕೆ ಜೋಳ ಸಿಗುತ್ತಿತ್ತು. ಆದರೆ ಇವರಿಗೆ ಇರುವ ಭೂಮಿಯಲ್ಲಿ ಬೇರೆ ಬೆಳೆಗಳನ್ನು ಬೆಳೆಯುವ ಮೂಲಕ ಆದಾಯವನ್ನು ಹೆಚ್ಚಿಗೆ ಪಡೆಯಬೇಕು ಎಂಬುದು ಇವರ ಕನಸಾಗಿತ್ತು. ಆದರೆ ಯಾವ ಕೃಷಿಯನ್ನು ಮಾಡಬೇಕು ಎಂಬುದು ಅರ್ಥವಾಗಿರಲಿಲ್ಲ.

ಅವರು ಒಮ್ಮೆ ತೀರ್ಥಹಳ್ಳಿ ಭಾಗದಲ್ಲಿ ಓಡಾಡುತ್ತಾ ಇರುವಾಗ ಮುಗಿಲೆತ್ತರಕ್ಕೆ ಬಲಿತ ಅಡಿಕೆ ತೋಟ ಇವರನ್ನು ಆಕರ್ಷಿಸಿತ್ತು. ಆ ಕೃಷಿಯ ಬಗ್ಗೆ ಸಾಕಷ್ಟು ಮಾಹಿತಿಯನ್ನು ಪಡೆದುಕೊಂಡ ಪ್ರೊ. ಕೋಟ್ರೇಶಿಯವರು, ನಮ್ಮ ನೆಲದಲ್ಲಿ ಅಡಿಕೆ ಕೃಷಿಯನ್ನು ಮಾಡುವುದೇ ಉತ್ತಮವೆಂದು ದೃಢವಾದ ನಿಲುವು ತಾಳಿದರು. ಅಂತೆಯೇ 1992–93 ರಲ್ಲಿ ಸುಮಾರು ಒಂಬತ್ತು ಎಕರೆ ಪ್ರದೇಶದಲ್ಲಿ 8ಫಿ3 ಅಂತರದಲ್ಲಿ ಅಡಿಕೆ ಸಸಿಗಳನ್ನು ಭೀಮ ಸಮುದ್ರದಿಂದ ತಂದು ನಾಟಿ ಮಾಡಿದರು. ವೆನಿಲ್ಲಾಗೆ ಉತ್ತಮ ದರ ಇರುವ ಸಮಯದಲ್ಲಿ ಆ ಕೃಷಿಯತ್ತ ಹೆಚ್ಚು ಆಕರ್ಷಿತರಾದ ಇವರು ದೊಡ್ಡ ಪ್ರಮಾಣದಲ್ಲಿ (ಮೂರುವರೆ ಎಕರೆ ಪ್ರದೇಶದಲ್ಲಿ) ಬಹಳ ವ್ಯವಸ್ಥಿತವಾಗಿ (ಅಂದರೇ 8ಫಿ6 ಅಂತರದಲ್ಲಿ ಕಲ್ಲುಕಂಬ ಹೂಳಿ, ಅದಕ್ಕೆ ಐಬೆಕ್ಸ್ ತಂತಿ ಶೆಡ್ ನೆಟ್‌ನ್ನು ಅಳವಡಿಸಿಕೊಂಡು) ವೆನಿಲ್ಲಾ ಕೃಷಿಯನ್ನು ಮಾಡಿದರು. ಅವರ ನಿರೀಕ್ಷೆಯಂತೆ ಈ ಕೃಷಿಯು ಚೆನ್ನಾಗಿ ಆಗಿತ್ತು. ಸುಮಾರು ಹತ್ತು ಟನ್‌ನಷ್ಟು ಇಳುವರಿಯೂ ಲಭಿಸಿತ್ತು. ಆದ್ರೆ ಅದನ್ನು ಮಾರುಕಟ್ಟೆಗೆ ಒಯ್ದಾಗ ಯೋಗ್ಯ ದರ ಸಿಗಲಿಲ್ಲ. ವೆನಿಲ್ಲಾ ಬೀನ್ಸ್‌ನ್ನು ಕೊಯ್ದ ಕೂಲಿ, ಅದನ್ನು ಮಾರ್ಕೆಟ್‌ಗೆ ಸಾಗಿಸಿದ ಬಾಡಿಗೆಯೂ ಸಹಾ ಅದರಿಂದ ಹುಟ್ಟಲಿಲ್ಲ. ಈ ಕಾರಣದಿಂದ ಕೊಟ್ರೇಶಿ ಅವರಿಗೆ ಬಹಳ ಬೇಸರವಾಯ್ತು. ಆ ಕೃಷಿಯ ಉಸಾಬರಿಯೇ ಬೇಡವೆಂದು ಆಕ್ಷಣವೇ ನಿರ್ಧರಿಸಿ, ಮೂರುವರೆ ಎಕರೆ ಪ್ರದೇಶದಲ್ಲಿ ಹುಲುಸಾಗಿ ಬೆಳೆದಿದ್ದ ವೆನಿಲ್ಲಾ ಬಳ್ಳಿಗಳನ್ನು ಸಿಟ್ಟಿನಿಂದಲೇ ಕಿತ್ತು ಬಿಸಾಕಿಬಿಟ್ಟರು.

ಆ ಜಾಗದಲ್ಲಿ ಅಡಿಕೆ ಸಸಿಗಳನ್ನು ಹೂಳಿದರು. ಜೊತೆಗೆ ಹಿರೇಕಾಯಿ, ಟೊಮೊಟೋ, ಇಂತಹ ತರಕಾರಿಗಳನ್ನು ಬೆಳೆದರು. ಅಡಿಕೆ ಗಿಡಗಳು ಎತ್ತರಕ್ಕೆ ಬೆಳೆದು ಫಲ ಬರುವವರೆಗೆ ತರಕಾರಿಗಳನ್ನೇ ಬೆಳೆದರು. ಐದಾರು ಲಕ್ಷ ಆದಾಯ ತರಕಾರಿ





ಬೆಳೆಯಿಂದಲೇ ಬಂತು. ವೆನಿಲ್ಲಾ ಕೃಷಿಯಿಂದ ಆಗಿರುವ ನಷ್ಟ, ತರಕಾರಿ ಕೃಷಿಯಿಂದ ಲಭಿಸಿತೆಂದು ಭಾವಿಸಿದೆ ಎಂದು ಕೊಟ್ರೇಶಿ ಹೇಳುತ್ತಾರೆ. ಆಮೇಲೆ ಉಳಿದ ಜಾಗವನ್ನು ಸಹಾ ಅಡಿಕೆ ತೋಟವಾಗಿ ಪರಿವರ್ತಿಸಿದ ಅವರು, ಬಹಳ ಶಿಸ್ತಿನಿಂದ ಜವಾಬ್ದಾರಿ ಮತ್ತು ಕಾಳಜಿಯಿಂದ ತೋಟದ ಅಭಿವೃದ್ಧಿ ಮಾಡಲು ಪಣ ತೊಟ್ಟರು.

**ನಿರ್ವಹಣೆ ಹೇಗೆ?**

ಈ ಉತ್ಸಾಹಿ ಅಧ್ಯಾಪಕ ಕೃಷಿಕರು ತಮ್ಮ ಅಡಿಕೆ ತೋಟವನ್ನು ಎಂದಿಗೂ ನಿರ್ಲಕ್ಷ್ಯ ಮಾಡಿದವರಲ್ಲಾ. ಅದೊಂದು ಪುಣ್ಯದ ಕೆಲಸವೆಂದು ತಿಳಿದೇ ತಮ್ಮ ಕೃಷಿ ಭೂಮಿಯನ್ನು ಚೆನ್ನಾಗಿಯೇ ಸಾಗುವಳಿ ಮಾಡುತ್ತಿದ್ದಾರೆ. ಇವರದ್ದು ಸಂಮಿಶ್ರ ಬೇಸಾಯ ಪದ್ಧತಿ. ಅಂದರೆ ಕೊಟ್ಟಿಗೆ ಗೊಬ್ಬರದ ಜೊತೆಗೆ  ರಾಸಾಯನಿಕ ಗೊಬ್ಬರವನ್ನು ಕೃಷಿಯಲ್ಲಿ ಬಳಕೆ ಮಾಡುತ್ತಾರೆ.

ಪ್ರೊ. ಕೊಟ್ರೇಶಿ ಅವರು ಶಿವಮೊಗ್ಗದ ಡಾ. ಲೋಕೇಶ ಅವರ ಮಾರ್ಗದರ್ಶನದಲ್ಲಿ, ಅನುಭವಿ ಕೃಷಿಕರ ಸಲಹೆ ಪಡೆದುಕೊಂಡು ತಮ್ಮ ತೋಟವನ್ನು ನಿರ್ವಹಣೆ ಮಾಡುತ್ತಿದ್ದಾರೆ. ಇವರು ಸುಮಾರು ಆರು ಲಕ್ಷ ಮೌಲ್ಯದ (ಟ್ರ್ಯಾಕ್ಟರ್‌ನಲ್ಲಿ 150 ಟ್ರಿಪ್) ಗೊಬ್ಬರವನ್ನು (ಇದು ಕೊಟ್ಟಿಗೆ, ಕುರಿ ಗೊಬ್ಬರ ಮಿಶ್ರಣವಾಗಿರುತ್ತದೆ) ತಂದು ಜೂನ್/ ಜುಲೈ ತಿಂಗಳಿನಲ್ಲಿ ಪ್ರತೀ ಅಡಿಕೆ ಮರಕ್ಕೆ ಎರಡು ಬುಟ್ಟಿಯಷ್ಟು ಪ್ರತೀ ವರ್ಷವೂ ನೀಡುತ್ತಾರೆ. ಇನ್ನು ತಜ್ಞರು ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರವನ್ನು (ಸುಮಾರು ಒಂದುವರೆ ಲಕ್ಷ ಮೌಲ್ಯದ) ಸೂಚಿಸಿದ ಪ್ರಮಾಣದಲ್ಲಿ ನೀರಾವರಿಗೆ ಅಳವಡಿಸಿದ ಪೈಪಿನ ಮೂಲಕವೇ ಏಕಕಾಲಕ್ಕೆ ಹಾಯಿಸುತ್ತಾರೆ. ಸಾಕಷ್ಟು ನೀರನ್ನು ಕೊಟ್ಟು ಅಡಿಕೆ ತೋಟವನ್ನು ಸಂರಕ್ಷಿಸಿ, ಪೋಷಣೆ ಮಾಡುತ್ತಾರೆ. ಹೀಗೆ ಬಹಳ ವ್ಯವಸ್ಥಿತವಾಗಿ, ಸಕಾಲದಲ್ಲಿ ನಿರ್ವಹಣೆ ಮಾಡಿರುವ ಪ್ರತಿಫಲವಾಗಿ ಅಡಿಕೆ ಮರಗಳು ಚೆನ್ನಾಗಿಯೇ ಬೆಳೆದು ನಿಂತು, ಯೋಗ್ಯ ಫಲವನ್ನು ನೀಡುತ್ತಿವೆ. ಅವರ ತೋಟದಲ್ಲಿ ಪ್ರತೀ ಎಕರೆಗೆ ಸರಾಸರಿ 12 ರಿಂದ 15 ಕ್ವಿಂಟಲ್‌ನಷ್ಟು ಇಳುವರಿ ಲಭಿಸುತ್ತಿದೆ. ಅಂದರೇ ಪ್ರತೀ ವರ್ಷ (ಕೆಲ ವರ್ಷ ಏರಿಳಿತ ಆಗುವುದು ಉಂಟು) ಏನಿಲ್ಲವೆಂದರೂ ಸುಮಾರು ನಲವತ್ತು ಲಕ್ಷದಷ್ಟು ಆದಾಯ ತೋಟದಿಂದ ಸಿಗುತ್ತಿದೆ. ಕೂಲಿ, ಗೊಬ್ಬರ, ಇನ್ನಿತರ ಎಲ್ಲಾ ವೆಚ್ಚ ಸರಾಸರಿ ಇಪ್ಪತ್ತು ಲಕ್ಷ ಖರ್ಚಾದರೂ ಇಪ್ಪತ್ತು ಲಕ್ಷ  ಉಳಿಯುತ್ತದೆ ಎಂದು ಕೊಟ್ರೇಶಿ ಲೆಕ್ಕಾಚಾರ ಸಮೇತ ವಿವರಿಸುತ್ತಾರೆ.

**ಮುಂದಿನ ಯೋಜನೆ....**


ಈ ಪ್ರಗತಿಪರ ಕೃಷಿಕರು ಸಧ್ಯ ಅಡಿಕೆ ಕೃಷಿಯನ್ನೇ ಪ್ರಧಾನವಾಗಿ ಮಾಡುತ್ತಾ ಅದರಲ್ಲಿಯೇ ನೆಮ್ಮದಿಯನ್ನು ಕಂಡುಕೊಂಡವರು. ಅದು ಲಾಭದಾಯಕ, ಸುಲಭವಾಗಿ ಮಾಡಬಹುದಾದ ಕೃಷಿ ಎನ್ನುವುದು ಇವರಿಗೆ ಮನವರಿಕೆಯಾಗಿದೆ. ಹೀಗಾಗಿಯೇ ಆ ಕೃಷಿಯತ್ತ ಹೆಚ್ಚಿನ ಕಾಳಜಿ ವಹಿಸಿ ಬಹಳ ಆಸಕ್ತಿ ಮತ್ತು ಛಲದಿಂದ ತೋಟವನ್ನು ನಿರ್ವಹಣೆ ಮಾಡುತ್ತಿದ್ದಾರೆ. ಆದಾಗ್ಯೂ, ಇವರ ಕೃಷಿ ಭೂಮಿ ಮಧ್ಯ ಭಾಗದಲ್ಲಿ (ಸುಮಾರು ಎರಡು ಎಕರೆ ಪ್ರದೇಶ) ಅಡಿಕೆ ಗಿಡಗಳು ಚೆನ್ನಾಗಿ ಆಗುತ್ತಿರಲಿಲ್ಲ. ಅದರ ಸಮಸ್ಯೆ ಏನು ಎಂಬುದು ಅರ್ಥವಾಗಲಿಲ್ಲ. ಅದನ್ನು ಸರಿಪಡಿಸಲು ಪ್ರಯತ್ನಿಸಿದರೂ ಯಾವುದೇ ಪರಿಣಾಮ ಕಾಣಲಿಲ್ಲ. ಹೀಗಾಗಿ ಆ ಜಾಗದಲ್ಲಿ ಪರ್ಯಾಯ ಬೆಳೆ ಬೆಳೆಯುವುದೇ ಸೂಕ್ತವೆಂದು ನಿರ್ಧರಿಸಿದರು. ಅನೇಕರ ಅಭಿಪ್ರಾಯ ಪಡೆದುಕೊಂಡರು. ಅದರಲ್ಲಿ ತಮಗೆ ಹಿಡಿಸಿದ ಕಾರ್ಯವನ್ನು ಕೈಗೆತ್ತಿಕೊಂಡು ಅನುಷ್ಠಾನ ಮಾಡಿದ್ದೇ 'ಕಾಳು ಮೆಣಸು' ಬೆಳೆಸುವ ಯೋಜನೆ.

ಈಗಾಗಲೇ ಕೊಟ್ರೇಶಿಯವರು ಅಡಿಕೆ ಕೃಷಿ ಆಗದ ಜಾಗದಲ್ಲಿರುವ ಎಲ್ಲಾ ಅಡಿಕೆ ಮರಗಳನ್ನು ಕಡಿದರು. 2016 ನವೆಂಬರ್‌ನಲ್ಲಿ ಸುಮಾರು ಒಂದು ಸಾವಿರ ಸಿಲ್ವರ್ ಓಕ್ ಗಿಡಗಳನ್ನು ಹೂಳಿದ್ದಾರೆ. ಅವನ್ನು ಸಹಾ ಚೆನ್ನಾಗಿಯೇ ಪೋಷಣೆ ಮಾಡುತ್ತಿರುವ ಈ ಕೃಷಿಕರು ಆ ಗಿಡಗಳಿಗೆ ಕಪ್ಪು ಬಂಗಾರದ ಕೃಷಿಯನ್ನು ಮಾಡುವ ಗುರಿಯನ್ನು ಇಟ್ಟುಕೊಂಡೇ ವ್ಯವಸ್ಥಿತವಾಗಿ ಸಂರಕ್ಷಿಸುತ್ತಿದ್ದಾರೆ.

ತಾನು ಯಾವುದನ್ನು ಮಾಡುವುದಾದರೂ, ಅಧ್ಯಯನ ಮಾಡಿಕೊಂಡೇ ಅದರ ಸಾಧಕ– ಬಾಧಕವನ್ನು ತಿಳಿಯುತ್ತೇನೆ. ಅನೇಕ ಕೃಷಿಕರ ತೋಟವನ್ನು ಸುತ್ತಾಡಿ ಮಾಹಿತಿಯನ್ನು ಸಂಗ್ರಹಿಸುತ್ತೇನೆ. ಆ ಕೃಷಿ ಹಿಡಿಸಿದರೆ, ಆ ಪದ್ಧತಿ ಅನುಕೂಲವಾದರೇ ಮಾತ್ರವೇ ನನ್ನ ಕೃಷಿ ಭೂಮಿಯಲ್ಲಿ ಅಳವಡಿಸಿಕೊಳ್ಳುತ್ತೇನೆ. ಕೃಷಿ ಭೂಮಿಯನ್ನು ಸಾಗುವಳಿ ಮಾಡಬೇಕೆಂದು ಕಾಟಾಚಾರಕ್ಕೆ ಏನನ್ನು ಮಾಡಲು ಹೋಗುವುದಿಲ್ಲ. ಮಾಡುವ ಕೃಷಿಯನ್ನು ವೈಜ್ಞಾನಿಕವಾಗಿಯೇ ಮಾಡುತ್ತೇನೆಂದು ಪ್ರೊ. ಕೊಟ್ರೇಶಿಯವರು ಮನದಾಳದ ಅಭಿಪ್ರಾಯವನ್ನು ಮುಕ್ತವಾಗಿ ತೆರೆದಿಡುತ್ತಾರೆ.

(ಆಸಕ್ತ ರೈತರು ಪ್ರೊ. ಕೊಟ್ರೇಶಿಯವರನ್ನು ದೂರವಾಣಿ 9880128228 ಮೂಲಕ ಸಂಪರ್ಕಿಸಬಹುದು)






# ರಕ್ತದಾನ ಜೀವದಾನ

ಡಾ. ಗುರಲಿಂಗಪ್ಪ ಅಂಕದ

ನೀವು ಮಾಡುವ ರಕ್ತದಾನಕ್ಕೆ "ಜೀವದಾನದ" ಶಕ್ತಿ ಇದೆ ಎಂಬುದನ್ನು ಮತ್ತೊಮ್ಮೆ ಮನವರಿಕೆ ಮಾಡುತ್ತದೆ "ರಕ್ತದಾನ ಜೀವದಾನ" ಎಂಬ ಈ ಧ್ಯೇಯ ವಾಕ್ಯ.  ಆಯುರ್ವೇದದಲ್ಲೂ ರಕ್ತದ ಮಹತ್ವವನ್ನು ವರ್ಣಿಸುವಾಗ "ರಕ್ತಂ ಜೀವ ಇತಿ ಸ್ಥಿತಿ" ಎಂದಿದ್ದಾರೆ. ಅಂದರೆ ರಕ್ತವನ್ನು 'ಜೀವ' ಎಂದು ಬೋಧಿಸಿದ್ದಾರೆ.

ಕೆಲ ದಿನಗಳ ಹಿಂದೆ ನನ್ನ ಸ್ನೇಹಿತನ ಸಂಬಂಧಿಕರೊಬ್ಬರ ಮಗುವಿಗೆ ತುರ್ತು ಶಸ್ತ್ರಚಿಕಿತ್ಸೆ ಮಾಡಿಸುವ ಸಂದರ್ಭದಲ್ಲಿ ಮಗುವಿಗೆ ಎ–ನೆಗೆಟಿವ್ ರಕ್ತ ಬೇಕಾಗಿತ್ತು. ರಕ್ತ ನಿಧಿಯಲ್ಲಿ ಆ ಗುಂಪಿನ ರಕ್ತ ಲಭ್ಯವಿತ್ತಾದರೂ ವೈದ್ಯರು ತಾಜಾ ರಕ್ತ ಬೇಕೆಂದರು. ಮಗುವಿನ ಸಂಬಂಧಿಕರೊಬ್ಬರದ್ದು ಎ–ನೆಗೆಟಿವ್ ರಕ್ತಗುಂಪು ಎಂದು ತಿಳಿದು ಎಲ್ಲರೂ ಸಂತೋಷದಿಂದಿದ್ದರು. ಆದರೆ ಆ ಮಹಾಪುರುಷ ರಕ್ತ ದಾನಕ್ಕೆ ಒಪ್ಪಲಿಲ್ಲ.

ಹೌದು, ರಕ್ತದಾನದ ಬಗ್ಗೆ ಬಹಳಷ್ಟು ಜನರಿಗೆ ಅನಗತ್ಯ ಭಯ, ತಪ್ಪು ತಿಳುವಳಿಕೆಗಳೇ ಹೆಚ್ಚು. ಜೂನ್ 14 ರಂದು "ವಿಶ್ವ ರಕ್ತದಾನಿಗಳ ದಿನ"ವನ್ನಾಗಿ ಆಚರಿಸಲಾಗುತ್ತದೆ. ವಿಶ್ವದಾದ್ಯಂತ ರಕ್ತದಾನದ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಮತ್ತು ಸಾವಿರಾರು ಜೀವಗಳನ್ನು ಉಳಿಸಲು ನೆರವಾದ ರಕ್ತದಾನಿಗಳನ್ನು ಗುರುತಿಸಿ, ಅಭಿನಂದಿಸಿ, ಸನ್ಮಾನಿಸುವುದು ಈ ದಿನಾಚರಣೆಯ ಮೂಲ ಉದ್ದೇಶವಾಗಿದೆ. ತುರ್ತುಸ್ಥಿತಿಯಲ್ಲಿ ರಕ್ತದಾನ ಮಾಡುವವರು ನಮ್ಮ ದೇಶದಲ್ಲಿ ಸಿಗುತ್ತಾರೆ. ಆದರೆ ಎಲ್ಲ ಆರೋಗ್ಯವಂತರನ್ನೂ ಸ್ವಯಂಪ್ರೇರಿತ ರಕ್ತದಾನಕ್ಕೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಆಚರಿಸುವ ದಿನವೇ " ವಿಶ್ವ ರಕ್ತದಾನಿಗಳ ದಿನ".

ರಕ್ತದಾನದಿಂದ ರಕ್ತದ ಅವಶ್ಯಕತೆಯಿರುವವರಿಗೆ ಮಾತ್ರ ಲಾಭವಾಗುವುದಿಲ್ಲ. ಜೊತೆಗೆ ರಕ್ತದಾನಿಗಳೂ ತಮ್ಮ ಆರೋಗ್ಯವನ್ನು ವೃದ್ಧಿಸಿಕೊಳ್ಳಬಹುದು. ಇದರಿಂದ ರಕ್ತದಾನ ಮಾಡಿದವರಲ್ಲಿ ಹೊಸ ರಕ್ತ ಕಣಗಳ ಉತ್ಪತ್ತಿಗೆ ಪ್ರಚೋದನೆ ಸಿಗುತ್ತದೆ, ಹೃದಯಾಘಾತದ ಸಂಭವ ಕಡಿಮೆಯಾಗುತ್ತದೆ, ರಕ್ತದಲ್ಲಿ ಕೊಲೆಸ್ಟ್ರಾಲ್ ಅಂಶ ಕಡಿಮೆಯಾಗುತ್ತದೆ, ಮತ್ತು ಆತ ಇನ್ನಷ್ಟು ಆರೋಗ್ಯವಂತನಾಗಿರಲು ಸಾಧ್ಯವಾಗುತ್ತದೆ. ಅದಕ್ಕಾಗಿ0ಯೇ ಆಯುರ್ವೇದದಲ್ಲಿ ನಿಯಮಿತವಾಗಿ ರಕ್ತದಾನ ಮಾಡುವುದರಿಂದ ರಕ್ತದಿಂದಾಗುವ ರೋಗಗಳನ್ನು ತಡೆಗಟ್ಟಬಹುದು ಎಂದಿದ್ದಾರೆ. ಮತ್ತು ರಕ್ತದುಷ್ಟಿಯಿಂದಾದ ರೋಗಗಳಲ್ಲಿ 'ರಕ್ತಮೋಕ್ಷಣ' ಎಂಬ ಪಂಚಕರ್ಮ ಚಿಕಿತ್ಸೆಯನ್ನು ಸುಶ್ರುತರು ವರ್ಣಿಸಿದ್ದಾರೆ. ರಕ್ತಮೋಕ್ಷಣ ಎಂದರೆ ರೋಗಿಯ ಶರೀರದಿಂದ ನಿರ್ದಿಷ್ಟ ಪ್ರಮಾಣದಲ್ಲಿ ದುಷ್ಟ ರಕ್ತವನ್ನು ಹೊರಹಾಕುವುದು ಎಂದರ್ಥ. ಒಟ್ಟಾರೆ ತಾತ್ಪರ್ಯವಿಷ್ಟೆ, ರಕ್ತದಾನದಿಂದ ರಕ್ತದಾನಿ ಮತ್ತು ರಕ್ತಪಡೆದವರು ಇಬ್ಬರಿಗೂ ಲಾಭಾವಾಗುವುದು ನಿಶ್ಚಿತ. ಹಾಗಂತ ಎಲ್ಲರೂ ರಕ್ತದಾನ ಮಾಡುವಂತಿಲ್ಲ.

ರಕ್ತವು ದೇಹದ ಅಮೂಲ್ಯವಾದ ವಸ್ತು. ಆಸ್ಪತ್ರೆಗಳಲ್ಲಿ ತುರ್ತು ಪರಿಸ್ಥಿತಿಗಳಲ್ಲಿ ರಕ್ತಕ್ಕೆ ಪರ್ಯಾಯವಾದ ವಸ್ತು ಮತ್ತೊಂದಿಲ್ಲ. ಅಲ್ಲದೇ ಒಬ್ಬ ದಾನಿಯಿಂದ ಪಡೆದ ರಕ್ತದಿಂದ ರಕ್ತ ಹಾಗು ರಕ್ತದ ಘಟಕಗಳನ್ನು ಅವಶ್ಯಕತೆಗನುಗುಣವಾಗಿ ಬಳಸಿ ಅನೇಕ ವ್ಯಕ್ತಿಗಳ ಪ್ರಾಣ ಉಳಿಸಬಹುದು. ಅಲ್ಲದೇ ಒಬ್ಬ ದಾನಿಯಿಂದ ಪಡೆದ ರಕ್ತವನ್ನು ಕೇವಲ 35 ದಿನಗಳು ಮಾತ್ರ ಉಪ0ಯೋಗಿಸಲು ಸಾಧ್ಯ. ಮತ್ತು ಅದನ್ನು ಅದೇ ರಕ್ತ ಗುಂಪಿನ ಮತ್ತೊಬ್ಬ ವ್ಯಕ್ತಿಗೆ ಮಾತ್ರ ಉಪ0ಯೋಗಿಸಬಹುದು. ದಾನ ಮಾಡಿದ ವ್ಯಕ್ತಿಯಲ್ಲಿ ಶುದ್ಧ ರಕ್ತ ಮತ್ತೆ 3 ತಿಂಗಳಲ್ಲಿ ಪುನ: ಉತ್ಪತ್ತಿಯಾಗುತ್ತದೆ. ಒಬ್ಬ ಆರೋಗ್ಯವಂತನ ದೇಹದಲ್ಲಿ ಸುಮಾರು 6 ಲೀಟರ್ ನಷ್ಟು ರಕ್ತವಿದ್ದು ರಕ್ತದಾನಕ್ಕೆ ಕೇವಲ 350 ಮಿ.ಲೀ. ರಕ್ತವನ್ನು ಮಾತ್ರವೇ ದಾನಿಯಿಂದ ಸ್ವೀಕರಿಸಲಾಗುತ್ತದೆ. ಇದರಿಂದ ದಾನಿಗೆ ಯಾವುದೇ ಅಪಾಯವಿಲ್ಲ. ಈ ಸೂಕ್ಷ್ಮ ಅಂಶಗಳ ಅರಿವು ಸಮಾಜದ ಕೆಲವು ವರ್ಗದ ಜನರಿಗಷ್ಟೇ ಇರುವುದು ದುರ್ದೈವ. ಈ ಕಾರಣದಿಂದಲೇ ಇಂದಿಗೂ ಹೆಚ್ಚಿನ ದೇಶಗಳಲ್ಲಿ ರಕ್ತದ ಬೇಡಿಕೆ ಮತ್ತು ಪೂರೈಕೆಯ ನಡುವೆ ದೊಡ್ಡ ಪ್ರಮಾಣದ ಅಸಮತೋಲನ ಎದ್ದು ಕಾಣುತ್ತಿದೆ.

ವಿಶ್ವದಾದ್ಯಂತ ಸಾಕಷ್ಟು ದೇಶಗಳಲ್ಲಿ ರಕ್ತದಾನದಿಂದ ಸಂಗ್ರಹಿಸಿದ ರಕ್ತದ ಕೊರತೆಯಿದೆ. ಇಂತಹ ಸಂದರ್ಭಗಳಲ್ಲಿ ರೋಗಿಯ ಕುಟುಂಬದ ಸದಸ್ಯರು ಅಥವಾ ವೃತ್ತಿಪರ ರಕ್ತದಾನಿಗಳಿಂದ ಪಡೆದ ರಕ್ತವನ್ನೇ ಅವಲಂಬಿಸಬೇಕಾಗಿದೆ. ಇದಕ್ಕೆ ಕಾರಣ ರಕ್ತನಿಧಿಗಳಲ್ಲಿ ರಕ್ತದ ಕೊರತೆ. ವರ್ಷವಿಡೀ ಶಸ್ತ್ರಚಿಕಿತ್ಸೆ, ಅಪಘಾತ, ರಕ್ತಹೀನತೆ ಮುಂತಾದ ಸಂದರ್ಭಗಳಲ್ಲಿ ರಕ್ತ ವರ್ಗಾವಣೆ ಅವಶ್ಯವಿರುತ್ತದೆ. ಆದರೆ ಈ ಬೇಡಿಕೆ



ಸಂಪೂರ್ಣವಾಗಿ ಪೂರೈಸಲು ರಕ್ತನಿಧಿಗಳಿಗೆ ಸಾಧ್ಯವಾಗುತ್ತಿಲ್ಲ. ಇಂತಹ ಪರಿಸ್ಥಿತಿ ಸಂಪೂರ್ಣವಾಗಿ ಇಲ್ಲದಂತಾಗಬೇಕು. ಆದರೆ ಇದಕ್ಕೆ ಮುಖ್ಯವಾಗಿ ಸಾರ್ವಜನಿಕರಲ್ಲಿ ರಕ್ತದಾನದ ಬಗ್ಗೆ ಇರುವ ಭಯ, ಆತಂಕ, ಅಪನಂಬಿಕೆಗಳು ದೂರವಾಗಿ ರಕ್ತದಾನದಿಂದ ಯಾವುದೇ ಅಪಾಯವಿಲ್ಲ ಎಂದು ಮನವರಿಕೆ0ಯಾಗಿ, ಎಲ್ಲ ಆರೋಗ್ಯವಂತರು ನಿರಂತರವಾಗಿ ರಕ್ತದಾನ ಮಾಡುವುದರಿಂದ ಮಾತ್ರ ಸಾಧ್ಯ. ಇದರ ದುರುಪಯೋಗವೂ ಆಗುವ ಸಂಭವವಿರುತ್ತದೆ, ವೃತ್ತಿಪರ ರಕ್ತದಾನಿಗಳು ಹಣದ ದುರಾಸೆಗಾಗಿ ಕೆಲವರು ನಿರಂತರವಾಗಿ ರಕ್ತದಾನ ಮಾಡುವವರೂ ಇದ್ದಾರೆ. ಇದು ಅಪರಾಧ.

ವಿಶ್ವ ಆರೋಗ್ಯ ಸಂಸ್ಥೆ, ಅಂತರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆ ಹಾಗೂ ಇನ್ನಿತರ ಸ್ವಯಂ ಸೇವಾ ಸಂಘ ಸಂಸ್ಥೆಗಳ ನಿರಂತರ ಪರಿಶ್ರಮದಿಂದಾಗಿ ಇಂದು ಜಗತ್ತಿನ ಸುಮಾರು 60 ದೇಶಗಳಲ್ಲಿ ಸ್ವಯಂಪ್ರೇರಿತ ರಕ್ತದಾನದಿಂದಲೇ ನೂರಕ್ಕೆ ನೂರರಷ್ಟು ರಕ್ತದ ಬೇಡಿಕೆಯನ್ನು ಪೂರೈಸಲಾಗುತ್ತಿದೆ. ಇದು ಒಂದು ಸಾಧನೆಯೇ ಸರಿ. ಈ ಹಿನ್ನೆಲೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು 2020 ರ ಒಳಗಾಗಿ ವಿಶ್ವದ ಎಲ್ಲಾ ರಾಷ್ಟ್ರಗಳಲ್ಲೂ ಸ್ವಯಂಪ್ರೇರಿತ ರಕ್ತದಾನದಿಂದಲೇ ರಕ್ತದ ಬೇಡಿಕೆಯನ್ನು ಪೂರೈಸುವಂತಾಗಬೇಕು ಎಂಬ ಧ್ಯೇಯವನ್ನು ಹೊಂದಿದೆ.

ತುರ್ತು ಸಂದರ್ಭಗಳಲ್ಲಿ ನಿರ್ದಿಷ್ಟ ಗುಂಪಿನ ರಕ್ತಕ್ಕಾಗಿ ರೋಗಿಗಳ ಸಂಬಂಧಿಕರು ರಕ್ತ ನಿಧಿಗಳಲ್ಲಿ ಪರದಾಡುವುದನ್ನು ತಪ್ಪಿಸಲು ಇದೀಗ ನಮ್ಮ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಏಡ್ಸ್ ತಡೆಗಟ್ಟುವಿಕೆಯ ಸಮಾಜವು ಹೊಸ ಆದೇಶವೊಂದನ್ನು ಹೊರಡಿಸಿದೆ. ಈ ಆದೇಶದಂತೆ ರಾಜ್ಯದ ಎಲ್ಲಾ ರಕ್ತನಿಧಿಗಳ ನಡುವೆ ಆಂತರಿಕ ಜಾಲಬಂಧದ ಸಂಪರ್ಕ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಲಾಗಿದೆ. ಇದರಿಂದ ರಾಜ್ಯದ ಎಲ್ಲಾ ರಕ್ತನಿಧಿಗಳಲ್ಲಿ ಇರಬಹುದಾದ ವಿವಿಧ ಗುಂಪಿನ ರಕ್ತದ ಘಟಕಗಳ ಸಂಗ್ರಹದ ಬಗ್ಗೆ ನಿಖರವಾದ ಮಾಹಿತಿ ಯಾವುದೇ ರಕ್ತನಿಧಿಯಲ್ಲಿಯೂ ಲಭಿಸುತ್ತದೆ. ತುರ್ತು ಪರಿಸ್ಥಿತಿಗಳಲ್ಲಿ ತಮ್ಮ ಸಮೀಪದ ರಕ್ತನಿಧಿಯಲ್ಲಿ ನಿರ್ದಿಷ್ಟ ಗುಂಪಿನ ರಕ್ತ ದೊರೆಯದೇ ಇದ್ದಾಗ ರೋಗಿಯ ಸಂಬಂಧಿಕರು ಅಲ್ಲಿಂದಲೇ ಅದು ದೊರೆಯಬಹುದಾದ ರಕ್ತನಿಧಿಯ ವಿಳಾಸವನ್ನು ಪಡೆಯಬಹುದು. ದೂರವಾಣಿಯ ಮೂಲಕ ತಮಗೆ ಅವಶ್ಯವಿರುವ ರಕ್ತದ ಘಟಕವನ್ನು ಕಾದಿರಿಸಿ ನಂತರ ಅದನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದು. ಈ ನಿಟ್ಟಿನಲ್ಲಿ ನೀವೂ ಸಹ ನಿಮ್ಮ ಮೊಬೈಲ್‌ನಲ್ಲಿ ಪರಿಚಯಸ್ಥರ ನಂಬರ್ ಸೇರಿಸುವಾಗ ಅದರೊಂದಿಗೆ ಅವರ ರಕ್ತದ ಗುಂಪನ್ನೂ ನಮೂದಿಸಿದರೆ ತುರ್ತು ಪರಿಸ್ಥಿತಿಗಳಲ್ಲಿ ಉಪಯುಕ್ತವಾದೀತು.

ರಕ್ತದಾನದಿಂದ ನಿಮಗೇನಾದರೂ ತೊಂದರೆಯಾಗುವಂತಹ ಸಂದರ್ಭಗಳಲ್ಲಿ ಖಂಡಿತ ನಿಮ್ಮಿಂದ ರಕ್ತ ಪಡೆಯುವುದಿಲ್ಲ. ಅದಕ್ಕಾಗಿ0ಯೇ ಪ್ರತಿ0ಯೊಬ್ಬ ರಕ್ತದಾನಿಯಿಂದ ರಕ್ತವನ್ನು ಪಡೆಯುವ ಮೊದಲು ವೈದ್ಯಾಧಿಕಾರಿಗಳು ವ್ಯಕ್ತಿಯ ವಯಸ್ಸು, ತೂಕ, ರಕ್ತದೊತ್ತಡ, ಹಿಮೋಗ್ಲೋಬಿನ್ ಪ್ರಮಾಣ, ಆರೋಗ್ಯ ಸ್ಥಿತಿ ಹೀಗೆ ಎಲ್ಲವನ್ನೂ ಪರೀಕ್ಷಿಸಿ ಎಲ್ಲವೂ ಸರಿಯಿದ್ದಲ್ಲಿ ಮಾತ್ರ ರಕ್ತ ಪಡೆಯುವ ಕ್ರಿಯೆಗೆ ಮುಂದಾಗುತ್ತಾರೆ. ಹಾಗಾಗಿ ಯಾವುದೇ ಆತಂಕವಿಲ್ಲದೇ ನಿರ್ಭೀತರಾಗಿ ಸ್ವಯಂಪ್ರೇರಿತ ರಕ್ತದಾನಕ್ಕೆ ಮುಂದಾಗಿ.

ರಕ್ತದಾನ ಜೀವದಾನ, ನಿಮ್ಮ ರಕ್ತ ಎಷ್ಟೋ ಜನರ ಜೀವ ಕಾಪಾಡುವುದರೊಂದಿಗೆ ನಿಮ್ಮ ಆರೋಗ್ಯವನ್ನೂ ವೃದ್ಧಿಸುವುದು. ಹಾಗಾಗಿ ನಿಮ್ಮ ಜೀವನದ ಮಹತ್ವದ ದಿನಗಳಂದು ರಕ್ತದಾನ ಮಾಡುವ ಮೂಲಕ ಆರೋಗ್ಯವಂತರಾಗಿರಿ.

**ರಕ್ತದಾನಕ್ಕೆ ಅರ್ಹರು–**

- 18–60 ವರ್ಷದೊಳಗಿನ ಎಲ್ಲ ಆರೋಗ್ಯವಂತ ವ್ಯಕ್ತಿಗಳು.
- ವ್ಯಕ್ತಿ0ಯ ತೂಕ 45 ಕಿ.ಗ್ರಾಂ. ಗಿಂತ ಹೆಚ್ಚಿರುವವರು.
- ರಕ್ತದಲ್ಲಿ ಹಿಮೋಗ್ಲೋಬಿನ್ ಅಂಶ 12.5 ಗ್ರಾಂ. ಗಿಂತ ಹೆಚ್ಚಿರುವವರು.
- ಆರೋಗ್ಯವಂತ ಪುರುಷರು 3 ತಿಂಗಳಿಗೊಮ್ಮೆ ಹಾಗೂ ಮಹಿಳೆ0ಯರು 4 ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು.

**ರಕ್ತದಾನಕ್ಕೆ ಅನರ್ಹರು–**

- 0ಯಕೃತ್, ಮೂತ್ರಪಿಂಡ, ಹೃದ0ಯ ಸಂಬಂಧಿ ಕಾಯಿಲೆ ಮತ್ತು ಕ್ಯಾನ್ಸರ್ ಇರುವವರು.
- ಗರ್ಭಿಣೀ ಸ್ತ್ರೀ, ಋತು ಸ್ರಾವದಲ್ಲಿರುವ ಸ್ತ್ರೀ, ಮಗುವಿಗೆ ಹಾಲುನಿಸುವ ತಾ0ಯಂದಿರು.
- ರಕ್ತಹೀನತೆ ಇರುವವರು.
- ರಕ್ತದಾನ ಮಾಡಿದವರು ಮುಂದಿನ 3 ತಿಂಗಳ ವರೆಗೆ ನೀಡುವಂತಿಲ್ಲ.
- ರಕ್ತ ವರ್ಗಾವಣೆ ಮಾಡಿಸಿಕೊಂಡವರು, ಮಲೇರಿ0ಯಾ, ಟೈಫಾ0ಯ್ಡ್, ಕಾಮಾಲೆ ಯಿಂದ ಬಳಲಿದವರು ಮುಂದಿನ 6 ತಿಂಗಳವರೆಗೆ ನೀಡುವಂತಿಲ್ಲ.
- ಶಸ್ತ್ರ ಚಿಕಿತ್ಸೆಗೊಳಗಾದವರು.
- ಯಾವುದೇ ಸೋಂಕಿನ ವಿರುದ್ಧ ಲಸಿಕೆ ಹಾಕಿಸಿಕೂಂಡವರು ಮುಂದಿನ 3 ತಿಂಗಳವರೆಗೂ ರಕ್ತದಾನಕ್ಕೆ ಅರ್ಹರಾಗಿರುವುದಿಲ್ಲ.



# ಅಪಘಾತ ನಿಯಂತ್ರಣಕ್ಕೆ ರಕ್ಷಣಾತ್ಮಕ ಚಾಲನೆ



ಡಾ.ಅನಿಲ್ ಕುಮಾರ್ ಪಿ.

ರಸ್ತೆಗಳಲ್ಲಿ ನಾವು ಸಂಚರಿಸುವಾಗ ಎದುರಾಗಬಹುದಾದ ಕ್ಲಿಷ್ಟ ಪರಿಸ್ಥಿತಿಗಳನ್ನು ಮುಂದಾಲೋಚನೆಯಿಂದ ನಿರೀಕ್ಷಿಸಿ ಅಪಘಾತಗಳನ್ನು ತಪ್ಪಿಸುವ ಕಲೆಯೇ "ರಕ್ಷಣಾತ್ಮಕ ಚಾಲನೆ". ಮುಖ್ಯರಸ್ತೆಗಳಲ್ಲಿ ಚಲಿಸುವಾಗ ಅಡ್ಡ ರಸ್ತೆಯಿಂದ ಯಾವುದೋ ವಾಹನವೋ ಪಾದಚಾರಿಯೋ, ಪ್ರಾಣಿಯೋ ಬರಬಹುದೆಂದು ಊಹಿಸಿ ವೇಗ ನಿಯಂತ್ರಿಸುವುದೇ ರಕ್ಷಣಾತ್ಮಕ ಚಾಲನೆ ಆಗಿರುತ್ತದೆ.

**ಶಿಸ್ತು ಪಥ ಚಾಲನೆ (Lane Discipline)**

ಬೆಂಗಳೂರು ನಗರದಲ್ಲಿನ ವಾಹನ ಸಂಚಾರವು ವೇಗವಾಗಿ ಚಲಿಸುವ ಬಸ್ಸುಗಳು, ಕಾರುಗಳು ಮತ್ತು ನಿಧಾನಗತಿಯಲ್ಲಿ ಚಲಿಸುವಂತಹ ಟ್ರಕ್ಕುಗಳು, ಆಟೋರಿಕ್ಷಾಗಳು, ಸೈಕಲ್‌ಗಳು ಮುಂತಾದವುಗಳ ವೈವಿಧ್ಯಮಯ ಮಿಶ್ರಣವಾಗಿದೆ. ಈ ಸಂಚಾರ ಮಿಶ್ರಣವು ಸಾರ್ವಜನಿಕರಿಗೆ ನಿರ್ಧಿಷ್ಟ ಮಟ್ಟದ ಸಂಚಾರ ಸೇವೆ ನೀಡುವಲ್ಲಿ ಹಲವು ಗಂಭೀರ ಸಮಸ್ಯೆಗಳನ್ನು ಹುಟ್ಟು ಹಾಕಿದೆ. ಶಿಸ್ತುಪಥ ಚಾಲನೆಯ ಉದ್ದೇಶವು ಮಿಶ್ರ ಸಂಚಾರವನ್ನು ವಾಹನಾಧಾರಿತ/ವೇಗ ಆಧಾರಿತ/ದಿಕ್ಕಿನ ಆಧಾರದಲ್ಲಿ ಬೇರ್ಪಡಿಸುವುದಾಗಿದೆ.




ವಾಹನಾಧಾರಿತ ಶಿಸ್ತುಪಥ ಚಾಲನೆಯು ಸಾಕಷ್ಟು ಅಗಲವಾಗಿರುವ ರಸ್ತೆಗಳಲ್ಲಿ ಮಾತ್ರ ಪರಿಣಾಮಕಾರಿಯಾಗಿರುತ್ತದೆ. ಆದರೆ ಬೆಂಗಳೂರಿನಂತ ಕಿರಿದಾದ ರಸ್ತೆಗಳನ್ನು ಒಳಗೊಂಡಿರುವಂತಹ ನಗರಗಳಲ್ಲಿ ವಾಹನಾಧಾರಿತ ಶಿಸ್ತು ಪಥ ಚಾಲನೆಯು ಪರಿಣಾಮಕಾರಿಯಾಗದೆ ಇದ್ದು ಬದಲಿಗೆ ವೇಗಾಧಾರಿತ/ದಿಕ್ಕು ಆಧಾರಿತ ಶಿಸ್ತುಪಥ ಚಾಲನೆಯು ಪರಿಣಾಮಕಾರಿ ಯಾಗಬಲ್ಲದು.

ಈ ದಿಸೆಯಲ್ಲಿ ಬೆಂಗಳೂರು ನಗರ ಸಂಚಾರ ಪೊಲೀಸರು ಬೆಂಗಳೂರು ನಗರದ ರಸ್ತೆಗಳಲ್ಲಿ ಶಿಸ್ತುಪಥ ಚಾಲನೆಯನ್ನು ಪರಿಚಯಿಸುತ್ತಿದ್ದಾರೆ.

ಶಿಸ್ತು ಪಥ ಚಾಲನೆಯು ಮುಖ್ಯವಾಗಿ ವೇಗಾಧಾರಿತ ಮತ್ತು ದಿಕ್ಕು ಆಧಾರಿತ ವಿಧಗಳಲ್ಲಿದ್ದು ಅನುಸರಿಸಲು ಬಹಳ ಸರಳವಾಗಿವೆ. ಇದರಿಂದ ಸಂಚಾರದ ಹರಿವಿನ ವೇಗವು ಹೆಚ್ಚುವುದಲ್ಲದೆ ಅಪಘಾತಗಳ ಸಂಖ್ಯೆಯಲ್ಲಿಯೂ ಸಹ ಗಣನೀಯವಾಗಿ ಇಳಿಮುಖವಾಗುವುದು.

**ವೇಗಾಧಾರಿತ ಶಿಸ್ತುಪಥ ಚಾಲನೆ:**

- ರಸ್ತೆ ಅಗಲವಾಗಿದ್ದು ಎರಡು ಅಥವಾ ಅದಕ್ಕಿಂತ ಹೆಚ್ಚು ಪಥಗಳಿದ್ದಾಗ ಹೆಚ್ಚಿನ ವೇಗದಲ್ಲಿ ಚಲಿಸುವ ವಾಹನಗಳು ಕಡ್ಡಾಯವಾಗಿ ಬಲ ಪಥದಲ್ಲಿ ಚಲಿಸಬೇಕು.

- ನಿಧಾನವಾಗಿ ಚಲಿಸುವ ವಾಹನಗಳು / ಸರಕು ಸಾಗಾಣಿಕಾ ವಾಹನಗಳು ಸಾಮಾನ್ಯವಾಗಿ ಎಡ ಪಥದಲ್ಲಿಯೇ ಚಲಿಸುವುದರಿಂದ ಬಲಪಥದಲ್ಲಿ ವೇಗವಾಗಿ ಹೋಗುವ ವಾಹನಗಳಿಗೆ ಅಡ್ಡ ಬರದೆ ಸಂಚಾರದ ಹರಿವು ಉತ್ತಮಗೊಳ್ಳುತ್ತದೆ.
- ನಿಧಾನವಾಗಿ ಚಲಿಸುವ ವಾಹನಗಳು ಬಲಪಥದಲ್ಲಿದ್ದರೆ ವೇಗವಾಗಿ ಚಲಿಸುವ ವಾಹನಗಳು ಪದೇ ಪದೇ ಹಾರ್ನ್ ಮಾಡುವುದು ಮತ್ತು ಎಡಬದಿಯಿಂದ ಓವರ್ ಟೇಕ್ ಮಾಡುವುದು ತಪ್ಪುತ್ತದೆ.
- ವಾಹನಗಳು ಬಲಪಥದಲ್ಲಿದ್ದರೆ ವೇಗವಾಗಿ ಚಲಿಸುವ ವಾಹನಗಳು ಪದೇ ಪದೇ ಹಾರ್ನ್ ಮಾಡುವುದು ಮತ್ತು ಎಡಬದಿಯಿಂದ ಓವರ್ ಟೇಕ್ ಮಾಡುವುದು ತಪ್ಪುತ್ತದೆ.

**ದಿಕ್ಕು ಆಧಾರಿತ ಶಿಸ್ತುಪಥ ಚಾಲನೆ:**

- ರಸ್ತೆ ಅಗಲವಾಗಿದ್ದು ಎರಡು ಅಥವಾ ಅದಕ್ಕಿಂತ ಹೆಚ್ಚು ಪಥಗಳಿದ್ದಾಗ ಜಂಕ್ಷನ್‌ನಲ್ಲಿ ಅಥವಾ ನಂತರ ಎಡ ದಿಕ್ಕಿಗೆ ಚಲಿಸಬೇಕಾದ ವಾಹನಗಳು ಸಾಧ್ಯವಾದಷ್ಟು ಎಡಭಾಗದಲ್ಲೇ ಸಾಗುವುದರಿಂದ ಸುಲಭವಾಗಿ ತಾವು ಹೋಗಬೇಕಾದ ದಿಕ್ಕಿಗೆ ಚಲಿಸಬಹುದಾಗಿದೆ.
- ಜಂಕ್ಷನ್‌ನಲ್ಲಿ ಅಥವಾ ನಂತರ ಬಲ ದಿಕ್ಕಿಗೆ ತಿರುವು ಪಡೆದು ಮುಂದೆ ಚಲಿಸಬೇಕಾದ ವಾಹನಗಳು ಸಾಧ್ಯವಾದಷ್ಟು ಬಲಭಾಗದಲ್ಲಿ ಸಾಗುವುದರಿಂದ ಸುಲಭವಾಗಿ ತಾವು ಹೋಗಬೇಕಾದ ದಿಕ್ಕಿಗೆ ಚಲಿಸಬಹುದಾಗಿದೆ.
- ನೇರವಾಗಿ ಮುಂದುವರೆಯುವ ವಾಹನಗಳು ಮಧ್ಯದ ಲೇನ್‌ನಲ್ಲಿ ಉಳಿದು ಮುಂದೆ ಚಲಿಸುವುದರಿಂದ ಸಂಚಾರದ ಹರಿವು ಸುಲಭವಾಗುತ್ತದೆ ಹಾಗೂ ಅಪಘಾತಗಳನ್ನು ನಿಯಂತ್ರಿಸಬಹುದಾಗಿದೆ.

ಶಿಸ್ತುಪಥ ಚಾಲನಾ ಅಭಿಯಾನದ ಗುರಿಯು ಸಂಚಾರದ ಹರಿವನ್ನು ಸುಲಭಗೊಳಿಸುವುದು, ಪ್ರಯಾಣದ ವೇಗವನ್ನು ಹೆಚ್ಚಿಸುವುದು ಮತ್ತು ಚಾಲಕರಿಗೆ ಸೌಖ್ಯವನ್ನು ಕಲ್ಪಿಸುವುದಾಗಿದೆ. ರಸ್ತೆಯ ಮೇಲೆ ಪಥವನ್ನು ನಿರಂತರವಾದ ಅಥವಾ ಛೇಧಿಸಲ್ಪಟ್ಟ ಬಿಳಿ ಪಟ್ಟಿಗಳಿಂದ ಗುರುತಿಸಲಾಗುತ್ತದೆ. ಶಿಸ್ತುಪಥದ ಉಲ್ಲಂಘನೆ ಎಂದರೆ ಚಾಲಕನು ತಾನು ಚಾಲನೆ ಮಾಡುತ್ತಿರುವ ರಸ್ತೆ ಪಥವನ್ನು ಬದಲಾಯಿಸಿ ತನ್ನದಲ್ಲದ ಬೇರೊಂದು ಪಥದಲ್ಲಿ ಚಾಲನೆ ಮಾಡುವುದಾಗಿದೆ. ಪಥ ಬದಲಾವಣೆಯನ್ನು ಉದ್ದೇಶಪೂರ್ವಕವಾಗಿ ಅಥವಾ ಉದ್ದೇಶವಿಲ್ಲದೆ ಮಾಡಿದರೂ ಸಹ ಆ ರೀತಿಯ ಪಥ ಬದಲಾವಣೆ ಸುರಕ್ಷಿತವಿಲ್ಲದಿದ್ದರೆ ಅದು ಅಪಾಯಕಾರಿ ಚಾಲನೆಯಾಗುತ್ತದೆ ಮತ್ತು ದಂಡಾರ್ಹ ಉಲ್ಲಂಘನೆಯಾಗಿರುತ್ತದೆ.

ಹಲವು ವೇಳೆ ಚಾಲಕನ ಮುಂದಾಲೋಚನೆ ಮತ್ತು ಉತ್ತಮ ಗಮನಹರಿಸುವಿಕೆಯ ಕೊರತೆಯಿಂದಾಗಿ ಶಿಸ್ತುಪಥ ಉಲ್ಲಂಘಿಸಿ ಚಾಲಕ ತಾನು ಎದುರಿಸಲು ಸಿದ್ಧನಿಲ್ಲದ ಪರಿಸ್ಥಿತಿಯನ್ನು ರಸ್ತೆಯ ಮೇಲೆ ಸೃಷ್ಟಿಸಿಕೊಂಡು ಬಿಡುತ್ತಾನೆ. ಸಾಮಾನ್ಯವಾಗಿ ತಾನು ಮಾಡುತ್ತಿರುವಂತಹ ಚಾಲನೆಯ ಬಗ್ಗೆ ಸಂಪೂರ್ಣ ಏಕಾಗ್ರತೆಯ ಕೊರತೆಯಿಂದ ಈ ಪರಿಸ್ಥಿತಿ ಉಂಟಾಗುತ್ತದೆ. ಬಹಳಷ್ಟು ರಸ್ತೆ ಅಪಘಾತಗಳು ಕೆಟ್ಟ ಶಿಸ್ತುಪಥ ಚಾಲನೆಯಿಂದ ಉಂಟಾಗುತ್ತವೆ.

**ಜಂಕ್ಷನ್‌ಗಳಲ್ಲಿ/ವೃತ್ತಗಳಲ್ಲಿ ಶಿಸ್ತುಪಥ ಚಾಲನೆ**

ಜಂಕ್ಷನ್‌ಗಳಲ್ಲಿ ಶಿಸ್ತುಪಥ ಚಾಲನೆಯು ಯಶಸ್ವಿಯಾಗಲು ಚಾಲಕನು ಜಂಕ್ಷನ್ ಕಡೆಗೆ ಹೋಗುತ್ತಿರುವ ವೇಗವನ್ನು ಕಾಯ್ದುಕೊಂಡು ಉತ್ತಮ ನಿರೀಕ್ಷಣೆ ಮಾಡುವುದು ಹಾಗು ಪರಿಣಾಮಕಾರಿ ನಿರೀಕ್ಷಣೆಗಾಗಿ ಸಾಕಷ್ಟು ಸಮಯ ತೆಗೆದುಕೊಳ್ಳುವುದು ಅಗತ್ಯವಾಗಿದೆ. ಚಾಲನಾ ಪರೀಕ್ಷೆ ಹಂತದಲ್ಲಿ ಚಾಲಕನು ಜಂಕ್ಷನ್‌ನಲ್ಲಿ ತಪ್ಪು ಪಥದಲ್ಲಿ ಸಿಕ್ಕಿಕೊಂಡರೆ ಅದು ಶಿಸ್ತು ಪಥದ ಗಂಭೀರ ಉಲ್ಲಂಘನೆಯಲ್ಲ. ಬದಲಿಗೆ ಅದು ರಸ್ತೆಯ ಮೇಲೆ ತನ್ನ ಇರುವಿಕೆಯನ್ನು ನಿಗಧಿಪಡಿಸುವಲ್ಲಿ ಆದ ಸಣ್ಣ ತಪ್ಪು ಅಷ್ಟೆ, ಮತ್ತು ಆತನಿಂದ ಚಾಲನ ಪರೀಕ್ಷೆಯ ಫಲಿತಾಂಶದ ಮೇಲೆ ಪರಿಣಾಮವಾಗದು. ಜಂಕ್ಷನ್‌ಗಳಿಗಿಂತಲು ಸಂಕೀರ್ಣವಾದ 5, 6 ಅಥವಾ ಅದಕ್ಕಿಂತ ಹೆಚ್ಚಿನ ರಸ್ತೆಗಳು ಕೂಡುವ ರೌಂಡ್ ಎಬೌಟ್‌ಗಳಲ್ಲಿ ತಪ್ಪು ಪಥದಲ್ಲಿ ಇದ್ದಲ್ಲಿ ವಾಹನದ ಕನ್ನಡಿಗಳ ಸಮರ್ಪಕ ಬಳಕೆ ಮಾಡಿಕೊಂಡು ಮತ್ತು ಕಾಣದ ತಿರುವುಗಳ ಬಗ್ಗೆ ಎಚ್ಚರಿಕೆವಹಿಸಿ ಸೂಚನೆ ನೀಡಿ ಸುರಕ್ಷಿತವಾದಲ್ಲಿ ಮತ್ತು ಸರಿಯಾದ ಪಥಕ್ಕೆ ಸೇರಬಹುದು.

**ಚಾಲನಾ ವೇಳೆ ಪಥ ಬದಲಾವಣೆ**

ಚಾಲಕನಿಗೆ ರಸ್ತೆಯಲ್ಲಿ ಪಥದ ಬದಲಾವಣೆ ಮಾಡುವುದು ಹಲವು ಬಾರಿ ಸಂದಿಗ್ಧ ಪರಿಸ್ಥಿತಿಯನ್ನುಂಟು ಮಾಡುತ್ತದೆ. ಕೆಲವು ವೇಳೆ ಚಾಲಕನು ತಾನು ಸರಿಯಲ್ಲದ ರಸ್ತೆ ಪಥದಲ್ಲಿದ್ದು ಪಥ ಬದಲಾವಣೆ ಮಾಡಬೇಕಾಗಬಹುದು. ವಾಸ್ತವದಲ್ಲಿ ರಸ್ತೆಯಲ್ಲಿ ಚಾಲನೆ ವೇಳೆ ಪಥ ಬದಲಾವಣೆ ಒಂದು ಸರಳವಾದ ಕೆಲಸವಾಗಿದೆ. ಆದರೆ ಪಥ ಬದಲಾವಣೆ ಬಗ್ಗೆ ಕ್ಷಿಪ್ರವಾದ/ನಿಖರವಾದ ನಿರ್ಧಾರ ಕೈಗೊಂಡು ಸುರಕ್ಷಿತವಾಗಿ ಪಥ ಬದಲಾಯಿಸುವುದು ಕಷ್ಟಕರವಾಗಬಲ್ಲದು.




**ಪಥ ಬದಲಾವಣೆ ಯಾವಾಗ?**

ಈ ಕೆಳಗಿನ ಸಂದರ್ಭಗಳಲ್ಲಿ ಪಥ ಬದಲಾವಣೆ ಮಾಡಬೇಕಾಗುತ್ತದೆ.

- ವಾಹನಗಳನ್ನು ಹಿಂದೆ ಹಾಕಿ ಮುನ್ನುಗ್ಗುವಾಗ ದ್ವಿಮುಖ ಸಂಚಾರ ಒಳಗೊಂಡ ರಸ್ತೆಗಳಲ್ಲಿ ಪಥ ಬದಲಾವಣೆ ಮಾಡಬೇಕಾಗುತ್ತದೆ.
- ಜಂಕ್ಷನ್‌ಗಳಲ್ಲಿ ಸೇರುವಾಗ ಅಥವಾ ರೌಂಡ್ ಎಬೌಟ್‌ಗಳಲ್ಲಿ ಟಿ ಜಂಕ್ಷನ್‌ಗಳಲ್ಲಿ ಹಾಗೂ ಅಡ್ಡರಸ್ತೆಗಳಲ್ಲಿ, ದ್ವಿಮುಖ ಸಂಚಾರವಿರುವ ರಸ್ತೆಗಳಲ್ಲಿ ಮತ್ತು ಎ ರಸ್ತೆಗಳಲ್ಲಿ ಒಂದು ನಿರ್ಧಿಷ್ಟ ಮಾರ್ಗ ಅನುಸರಿಸಲು ಪಥ ಬದಲಾವಣೆ ಮಾಡಬೇಕಾಗುತ್ತದೆ.
- ತಪ್ಪು ಪಥದಲ್ಲಿದ್ದಾಗ – ಸಾಮಾನ್ಯವಾಗಿ ಚಾಲನಾ ವೇಳೆ ತಪ್ಪು ಪಥದಲ್ಲಿದ್ದರೆ ನಂತರ ಸರಿಯಾದ ಪಥಕ್ಕೆ ಬರಲು ಪಥಬದಲಾವಣೆ ಮಾಡಬೇಕಾಗುತ್ತದೆ.

**ಪಥ ಬದಲಾವಣೆ ಮಾಡುವಾಗ ಅನುಸರಿಸಬೇಕಾದ ಪ್ರಕ್ರಿಯೆ**

ರಸ್ತೆಯ ಮೇಲೆ ಚಾಲನಾ ಸಮಯದಲ್ಲಿ ಎಡ ಅಥವಾ ಬಲಕ್ಕೆ ಪಥ ಬದಲಾವಣೆ ಮಾಡುವ ಮತ್ತು ವಾಹನದ ಕನ್ನಡಿಗಳ ಬಳಕೆಯಿಂದ ಸುತ್ತಮುತ್ತಲಿನ ವಾಹನಗಳ ಬಗ್ಗೆ ಸಾಕಷ್ಟು ಎಚ್ಚರಿಕೆ ವಹಿಸಿ ಸೂಕ್ತ ಸೂಚನೆ ನೀಡಿ ಕಾಣದ ಜಾಗ (BLIND SPOT) ಗಳ ಬಗ್ಗೆ ಪರಿಶೀಲಿಸಿ ಪಥ ಬದಲಾಯಿಸುವುದು.

**ತಪ್ಪು ಪಥದಲ್ಲಿ ಚಾಲನೆ**

ಚಾಲಕರು ತಪ್ಪು ಪಥದಲ್ಲಿ ಚಾಲನೆ ಮಾಡುವುದು ಸಾಮಾನ್ಯವಾದದ್ದು. ಆ ಸಂದರ್ಭಗಳಲ್ಲಿ ಗಾಬರಿಯಾಗದೆ ಒಮ್ಮೆಲೇ ಸರಿ ಪಥಕ್ಕೆ ಬರುವುದು ಅತಿ ಅಪಾಯಕಾರಿಯಾದುದು. ಪಥ ಬದಲಾವಣೆ ಪ್ರಕ್ರಿಯೆ ಅನುಸರಿಸಿಯೇ ಪಥ ಬದಲಾಯಿಸುವುದು ಸೂಕ್ತ. ಇಲ್ಲವಾದಲ್ಲಿ ಯಾವುದೇ ಸೂಚನೆ ನೀಡದೆ ಇರುವ ಪಥದಲ್ಲಿಯೇ ಮುಂದುವರಿಯಬೇಕು. ತಪ್ಪು ಪಥದಲ್ಲಿರುವನೆಂಬ ಕಾರಣಕ್ಕೆ ರಸ್ತೆಯಲ್ಲಿ ವೇಗವನ್ನು ಕಡಿಮೆಗೊಳಿಸುವುದು, ಅಥವಾ ವಾಹನವನ್ನು ಹಠಾತ್ ನಿಲ್ಲಿಸುವುದು ಹಿಂದಿನಿಂದ ಬರುವ ವಾಹನಗಳಿಗೆ ಅಪಾಯಕಾರಿಯಾದುದು.

**ವಾಹನ ಚಾಲನೆ ಮಾಡುವಾಗ ಅನುಸರಿಸಬೇಕಾದ ಕ್ರಮಗಳು:**

- ತಿರುವುಗಳಲ್ಲಿ ರಸ್ತೆ ಖಾಲಿಯದ್ದರೂ ಮುಂದೆ ಹೋಗುವ ವಾಹನವನ್ನು ಓವರ್ ಟೇಕ್ ಮಾಡಬೇಡಿ.




- ಏರು ಜಾಗದಲ್ಲಿ, ಇಳಿಜಾರಿನಲ್ಲಿ ಓವರ್ ಟೇಕ್ ಮಾಡಬೇಡಿ. ಏರುವ ವಾಹನಗಳಿಗೆ ಆದ್ಯತೆ ನೀಡಿ.
- ಆಟೋರಿಕ್ಷಾ, ಲಾರಿಗಳ ಹಿಂದೆ ಸಾಧ್ಯವಾದಷ್ಟು ಜಾಗರೂಕತೆಯಿಂದ ಚಲಿಸಬೇಕು, ಆಟೋಗಳಲ್ಲಿ ಕುಳಿತಿರುವ ಪ್ರಯಾಣಿಕರ ನಿರ್ದೇಶನದ ಮೇರೆಗೆ ಆಟೋ ಚಾಲಕನು ತನ್ನ ವಾಹನವನ್ನು ಹಠಾತ್ತಾಗಿ ಬಲಕ್ಕೋ, ಎಡಕ್ಕೋ ತಿರುಗಿಸಬಹುದು ಇಲ್ಲವೇ ನಿಲ್ಲಿಸಿ ಬಿಡಬಹುದು.
- ನಿಮ್ಮ ಮುಂದೆ ಎಡಭಾಗದಲ್ಲಿ ಪಾರ್ಕ್ ಮಾಡಲಾಗಿರುವ ಕಾರ್‌ನ ಬಲಭಾಗದ ಬಾಗಿಲನ್ನು ಒಳಗೆ ಕುಳಿತಿರುವ ಚಾಲಕ ಯಾವಾಗ ಬೇಕಾದರೂ ತೆಗೆಯಬಹುದು ಎಚ್ಚರ.
- ಪಾರ್ಕ್‌ನಲ್ಲಿ ಆಟವಾಡುತ್ತಿರುವ ಮಕ್ಕಳು ತಮ್ಮದೇ ಲೋಕದಲ್ಲಿ ವಿಹರಿಸುತ್ತಾ ಚೆಂಡನ್ನು ಹಿಡಿಯಲು ಓಡಿ ಬರಬಹುದು.
- ನಿಂತಿರುವ ಬಸ್ಸನ್ನು ಬಲಭಾಗದಿಂದ ದಾಟಿ ಮುಂದೆ ಹೋಗುವಾಗ ಪ್ರಯಾಣಿಕರು ಬಸ್ಸನ್ನು ಇಳಿದು ರಸ್ತೆಯನ್ನು ದಾಟ ಬಹುದು.

**ನಿಮ್ಮ ವಾಹನದ ಟೈರುಗಳು**

ನಿಮ್ಮ ವಾಹನದ ಟೈರುಗಳ ಸತತ ಪರಿಶೀಲನೆ ಮತ್ತು ಅವುಗಳನ್ನು ನಿರ್ವಹಿಸುವ ರೀತಿ ನಿಮ್ಮ ರಕ್ಷಣೆಯಲ್ಲಿ ಮತ್ತು ಅಪಘಾತ ತಪ್ಪಿಸುವಲ್ಲಿ ಅತೀ ಪ್ರಾಮುಖ್ಯತೆಯನ್ನು ಪಡೆಯುತ್ತವೆ.

- ಹಿಂದಿನ ಟೈರುಗಳು ಮುಂದಿನ ಟೈರುಗಳಿಗೆ ಒಂದೇ ರೇಖೆಯಲ್ಲಿರುತ್ತವೆ.
- ಚಕ್ರದ ಅಲೈನ್‌ಮೆಂಟ್ ವ್ಯತ್ಯಾಸವಾದರೆ ಅಪಘಾತಕ್ಕೆ ಆಹ್ವಾನ ಕೊಟ್ಟಂತೆ.
- ಅತಿಯಾಗಿ ಗಾಳಿ ತುಂಬುವುದು ಅಥವಾ ಕಡಿಮೆ ಗಾಳಿ ತುಂಬುವುದು ಅಪಾಯಕರ.
- ಯಾವುದೇ ಟೈರು 2.5 ಸೆಂ.ಮೀ ಗಿಂತ ಅಥವಾ 10% ಗಿಂತ ಅಗಲವಾಗಿ ಹರಿದಿದ್ದಲ್ಲಿ ಬದಲಾಯಿಸಿ ಹೊಸದನ್ನು ಹಾಕುವುದು ಸುರಕ್ಷಿತ.
- ನಿಮ್ಮ ವಾಹನದಲ್ಲಿ ಟೈರಿನಲ್ಲಿ ಗಾಳಿ ಕಡಿಮೆ ಇದ್ದರೆ ವಾಹನ ನಿಮ್ಮ ಹಿಡಿತದಲ್ಲಿರುವುದಿಲ್ಲ. ಟೈರಿನ ಒಳಗೆ ಶಾಖ ಉತ್ಪತ್ತಿಯಾಗಿ ಟೈರು ಹಾಳಾಗುತ್ತದೆ.
- ಹೆಚ್ಚು ಗಾಳಿಯನ್ನು ತುಂಬುವುದೂ ಸಹ ಅಪಾಯಕಾರಿ ಎಕೆಂದರೆ ಗಾಳಿಯು ಅಗತ್ಯಕ್ಕಿಂತ ಜಾಸ್ತಿ ಇದ್ದರೆ ಟೈರಿನ ಸವೆದ ಭಾಗದಲ್ಲಿ ಯಾವ ಒಂದು ರಸ್ತೆಯ ಜೊತೆಯ ಸಂಪರ್ಕವನ್ನು ಕಳೆದುಕೊಂಡು ಅಪಘಾತವಾಗುವ ಅವಕಾಶಗಳು ಹೆಚ್ಚುತ್ತವೆ.

ಮಾನವನ ಜೀವಕ್ಕೆ ಬೆಲೆ ಕಟ್ಟಲಾಗದು. ಅಂತಹ ಜೀವವನ್ನು ರಕ್ಷಿಸಿಕೊಳ್ಳಬೇಕಾದುದು ನಮ್ಮನಿಮ್ಮೆಲ್ಲರ ಜವಾಬ್ದಾರಿ. ಇಂತಹ ಜೀವವನ್ನು ಅಷ್ಟು ನಿರ್ಧಾಕ್ಷಿಣ್ಯವಾಗಿ ಕಳೆದುಕೊಳ್ಳಬಾರದು. ಈ ಹಿನ್ನೆಲೆಯಲ್ಲಿ ಸುರಕ್ಷಿತ ಚಾಲನೆಯಿಂದ ನಮ್ಮ ಜೀವವನ್ನು ಮಾತ್ರವಲ್ಲ ಮತ್ತೊಬ್ಬರ ಜೀವವನ್ನು ಉಳಿಸಬಹುದು.



ಚಂದ್ರು

# ಹೀಗೊಂದು ಮಾದರಿ ಸರಕಾರಿ ಶಾಲೆ

ಇಂದಿಗೂ ಸರಕಾರಿ ಶಾಲೆಗಳೆಂದರೆ ಪ್ರತಿಯೊಬ್ಬರು ಅಲ್ಲಿನ ಸಮಸ್ಯೆಗಳ ಪಟ್ಟಿಯನ್ನೇ ನಮ್ಮ ಮುಂದಿಡುತ್ತಾರೆ. ಸರಕಾರ ಶಾಲೆಗಳನ್ನು ಜನಸ್ನೇಹಿಯಾಗಿಸುವ ನಿಟ್ಟಿನಲ್ಲಿ ಹತ್ತಾರು ಯೋಜನೆಗಳನ್ನು ಆಗಾಗ ಕಾರ್ಯರೂಪಕ್ಕೆ ತರುತ್ತಿದೆ. ಪ್ರತಿಯೊಂದು ಸೌಲಭ್ಯಗಳಿಗೂ ಸರಕಾರವನ್ನೇ ಅವಲಂಬಿಸುವ ಬದಲು ಆ ಶಾಲೆಯ ಶಿಕ್ಷಕರು, ಮಕ್ಕಳು, ಪಾಲಕರು, ಗ್ರಾಮಸ್ಥರು ಮನಸ್ಸು ಮಾಡಿದರೆ ಒಂದು ಶಾಲೆಯನ್ನು ಹೇಗೆ ಕಟ್ಟಿ ಬೆಳೆಸಬಹುದು ಎಂಬ ಮಾತಿಗೆ ಈ ಯಶೋಗಾಥೆ ಉದಾಹರಣೆ.

ಮುಂಡರಗಿ ತಾಲೂಕಿನ ಯಕಲಾಸಪೂರ ಸುಮಾರು ಎಂಟುನೂರು ಮನೆಗಳಿರುವ ಒಂದು ಗ್ರಾಮ. ಇಲ್ಲೊಂದು ಶ್ರೀಮತಿ ಪಾರ್ವತೆವ್ವ ಕೊಂ. ಹಿರೆಬಸಪ್ಪ ಹಳೆಮನಿ ಸರಕಾರಿ ಪ್ರೌಢ ಶಾಲೆ ಯಕಲಾಸಪೂರ ಎಂಬ ಹೆಸರಿನ ಪ್ರೌಢಶಾಲೆಯೊಂದು ಇದೆ. 2011–2012ರಲ್ಲಿ 16 ಮಕ್ಕಳಿಂದ ಆರಂಭವಾದ ಈ ಶಾಲೆಯಲ್ಲಿ ಎಂಟು, ಒಂಬತ್ತು ಮತ್ತು ಹತ್ತನೆ ತರಗತಿಯಲ್ಲಿ 107 ಮಂದಿ ವಿದ್ಯಾರ್ಥಿಗಳಿದ್ದಾರೆ. ವರ್ಷದಿಂದ ವರ್ಷಕ್ಕೆ ಇಲ್ಲಿಗೆ ಬರುವ ಮಕ್ಕಳ ಸಂಖ್ಯೆ ಇಮ್ಮಡಿಗೊಳ್ಳುತ್ತಿದೆ.



ಇತ್ತೀಚೆಗೆ ಈ ಗ್ರಾಮಕ್ಕೆ ತಾಗಿಕೊಂಡಿರುವ ವೆಂಕಟಪುರ, ಐತಾಪುರ ಗ್ರಾಮಗಳಿಂದಲೂ ಮಕ್ಕಳು ಇಲ್ಲಿಗೆ ಬರುತ್ತಾರೆ. ಪ್ರತಿವರ್ಷ ಸೀಟಿಗಾಗಿ ಪೈಪೋಟಿಯೆ ನಡೆಯುತ್ತದೆ. ಈ ಶಾಲೆಯ ಪರಿಣಾಮವಾಗಿ ಈ ಊರಿನಲ್ಲಿ ಶಿಕ್ಷಿತರ ಪ್ರಮಾಣ ಶೇ.90ರಷ್ಟು ಹೆಚ್ಚಾಗಿದೆ. ಪ್ರತಿಯೊಬ್ಬರು ತಮ್ಮ ಮಕ್ಕಳನ್ನು ಇದೀಗ ಶಾಲೆಗೆ ಕಳುಹಿಸುತ್ತಾರೆ. ಶಾಲೆಗೆ ಕಳುಹಿಸದಿರುವುದು ಗೊತ್ತಾದಲ್ಲಿ ಆ ಮನೆಗೆ ಶಾಲೆಯಿಂದ ಶಿಕ್ಷಕರ ದಂಡೆ ಬಂದು ಶಿಕ್ಷಣದ ಮಹತ್ವವನ್ನು ಹೇಳುತ್ತಾರೆ. ಏಳನೇ ತರಗತಿಯಲ್ಲಿ ಕಡಿಮೆ ಅಂಕ ಪಡೆದು ಉತ್ತೀರ್ಣನಾದವನು ಎಸ್.ಎಸ್.ಎಲ್.ಸಿಯಲ್ಲಿ ಶೇ. 80ಕ್ಕಿಂತ ಹೆಚ್ಚಿನ ಅಂಕವನ್ನು ಪಡೆದುಕೊಂಡಿದ್ದಾನೆ.

ಈ ಶಾಲೆಯಲ್ಲಿ ಬೆಳಿಗ್ಗೆ ಎಂಟರಿಂದ ರಾತ್ರಿ ಒಂಬತ್ತು ಗಂಟೆಯವರೆಗೂ ಪ್ರಾಧ್ಯಾಪಕರು, ಮಕ್ಕಳು ಕಾಣಸಿಗುತ್ತಾರೆ. ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನದೆ ಆದ ಜವಾಬ್ದಾರಿಯಿದೆ. ಕಳೆದ ಐದು ವರ್ಷಗಳಿಂದ ಹತ್ತನೆ ತರಗತಿಯಲ್ಲಿ ಶೇಕಡ ನೂರು ಫಲಿತಾಂಶವನ್ನು ಪಡೆದ ಉತ್ತರ ಕರ್ನಾಟಕದ ಅಪರೂಪದ ಶಾಲೆ ಎಂಬ ಹೆಗ್ಗಳಿಕೆಯನ್ನು ಪಡೆದುಕೊಂಡಿದೆ. ಈ ಎಲ್ಲಾ ಪರಿಶ್ರಮ, ಯಶಸ್ಸಿನ ಹಿಂದಿನ ಶಕ್ತಿ ಇಲ್ಲಿನ ಏಳು ಮಂದಿ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು.

ಶಾಲೆಗೆ ಸುಂದರವಾದ ಕಟ್ಟಡವನ್ನೇನು ಕಟ್ಟಿಕೊಡಲು ಸರಕಾರದಿಂದ ಹಣ ಮಂಜೂರಾಗಿದೆ. ಆದರೆ ಕಾಂಟ್ರಾಕ್ಟ್ ವಹಿಸಿದ ಗುತ್ತಿಗೆದಾರರು ಕಟ್ಟಡವನ್ನು ಹಲವು ವರ್ಷಗಳ ಹಿಂದೆಯೇ ಕಟ್ಟಿಕೊಟ್ಟಿದ್ದಾರೆ. ಆದರೆ ಕಟ್ಟಡದಲ್ಲಿ ಅಗತ್ಯವಾಗಿ ಇರಬೇಕಾದ ಫ್ಯಾನ್, ನೀರಿನ ವ್ಯವಸ್ಥೆ, ವಯರಿಂಗ್, ಮೆಟ್ಟಿಲುಗಳು, ಧ್ವಜಕಂಬ, ಶೌಚಾಲಯ ಇವುಗಳ ಕೆಲಸಗಳು ಮುಗಿದಿರಲಿಲ್ಲ. ಹಾಗೆಂದು ಇಲ್ಲಿನ ಪ್ರಾಧ್ಯಾಪಕರು ಸರಕಾರವನ್ನು ಬೈಯುತ್ತಾ ಕೂರಲಿಲ್ಲ. ಶಿಕ್ಷಕರು ಮತ್ತು ಊರಿನವರು ಸೇರಿ ಮುಂದಿನ ಅಗತ್ಯತೆಯನ್ನು ತಾವೆ ಮಾಡಿಕೊಳ್ಳುವ ಭರವಸೆ ನೀಡಿ, ಸರಕಾರದಿಂದ ಅನುಮತಿ ಪಡೆದು ಶಾಲೆಯನ್ನು ಪುಟ್ಟ ಹಂಚಿನ ಗುಡಿಸಲಿನಿಂದ ತಾರಸಿ ಕಟ್ಟಡಕ್ಕೆ ಸ್ಥಳಾಂತರಿಸಿದರು. ಮುಂದಿನ ಅಲ್ಲಿನ ಬದಲಾವಣೆ ಅದ್ಭುತ.

ಶಿಕ್ಷಕರ ಕೊರತೆಯಂತೂ ಇಲ್ಲಿಲ್ಲ. ಪ್ರತಿಯೊಂದು ವಿಷಯಕ್ಕೂ ಪ್ರತ್ಯೇಕವಾದ ಪರಿಣತ ಏಳು ಮಂದಿ ಶಿಕ್ಷಕರ ತಂಡವೊಂದು ಇಲ್ಲಿದೆ. ಗಣಿತ ಶಿಕ್ಷಕರಾಗಿರುವ ದುರ್ಗಾಪ್ರಸಾದ್ ಡಿ. ಪ್ರಭಾರ ಮುಖ್ಯೋಪಾಧ್ಯಾಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರೊಂದಿಗೆ ಪಕ್ಕದ ಬದರ್ೂರಿನ ಬಿ.ಎಡ್. ಪದವೀಧರರಾಗಿರುವ ಸತ್ಯಪ್ಪ ತಲಾವರ್ ಯಾವುದೇ ಸಂಭಾವನೆಯನ್ನು ಪಡೆಯದೆ ಕನ್ನಡ, ಸಮಾಜಶಾಸ್ತ್ರವನ್ನು ಬೋಧಿಸುವ ಜೊತೆಗೆ ಡ್ಯಾನ್ಸ್‌ನ್ನು ಕಳಿಸಿಕೊಡುತ್ತಾರೆ. ಈ ಶಾಲೆಯಲ್ಲಿ ಶಿಕ್ಷಕಿಯರಿಲ್ಲ. ಹೆಣ್ಮಕ್ಕಳಿಗೆ ತಮ್ಮ ಕೆಲವೊಂದು ಸಮಸ್ಯೆಗಳನ್ನು ಹೇಳಿಕೊಳ್ಳಲು ಕಷ್ಟವಾಗುತ್ತದೆ ಎಂಬ ಕೊರಗನ್ನು ಕಳೆದ ಎರಡು ವರ್ಷಗಳಿಂದ ಇದೆ ಊರಿನ ಎಂ.ಎ., ಬಿ.ಎಡ್. ಪದವೀಧರರಾಗಿರುವ ಗೀತಾಂಜಲಿಯವರು ನೀಗಿಸಿದ್ದಾರೆ. ವಿಶೇಷವೆಂದರೆ ಇವರು ಈವರೆಗೆ ಯಾರಿಂದಲೂ ಒಂದೇ ಒಂದು ರೂಪಾಯಿಯನ್ನು ತೆಗೆದುಕೊಂಡಿಲ್ಲ. ಈ ಶಾಲೆಯ ಶಿಕ್ಷಕರ ಮಧ್ಯೆ ಯಾವುದೇ ಮನಸ್ತಾಪ, ತಪ್ಪು ಅಭಿಪ್ರಾಯಗಳಿಲ್ಲ. ಪ್ರತಿಯೊಬ್ಬರು ಶಾಲೆಯ ಅಭಿವೃದ್ಧಿಯತ್ತ ಚಿಂತಿಸುವವರೆ. ಪ್ರತಿಯೊಂದಕ್ಕೂ ಇತರರಿಂದ ಕೇಳದೆ ಇಲ್ಲಿನ ಶಿಕ್ಷಕರು ತಾವೇ ತಮ್ಮ ಸಂಬಳದ ಹಣವನ್ನು ತೊಡಗಿಸಿ ಮೂಲಭೂತ ಸೌಕರ್ಯ, ಅಗತ್ಯಗಳೆಲ್ಲವನ್ನು ಖರೀದಿಸಿದ್ದಾರೆ. ಹತ್ತಾರು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಪ್ರತಿ ತಿಂಗಳ ಸಂಬಳದಲ್ಲಿ 300 ರೂಗಳನ್ನು ಶಾಲಾಭಿವೃದ್ಧಿಗಾಗಿ ಶಿಕ್ಷಕರು ತೊಡಗಿಸುತ್ತಾರೆ.

**ದೇಣಿಗೆ ಹಣದಲ್ಲಿ ಶೌಚಾಲಯ :**

ಶಾಲೆಯ ಶಿಕ್ಷಕರೆಲ್ಲರೂ ಸೇರಿ ಐವತ್ತು ಸಾವಿರ ರೂಪಾಯಿ ವೆಚ್ಚದಲ್ಲಿ ಪ್ರತ್ಯೇಕ ಶೌಚಾಲಯವೊಂದನ್ನು ನಿರ್ಮಿಸುವ ಮೂಲಕ 'ಸ್ವಚ್ಛ ಭಾರತ' ಆಂದೋಲನಕ್ಕೆ ಕೈಜೋಡಿಸಿದ್ದಾರೆ.

**ಬಿಸಿಯೂಟಕ್ಕೆ ವಿಶೇಷ ಮೆರುಗು :**

ಸರಕಾರದಿಂದ ಬಿಸಿಯೂಟಕ್ಕೆ ಬರುವ ಹಣದೊಂದಿಗೆ ತಾವು ಒಂದಷ್ಟು ಮೊತ್ತವನ್ನು ಸೇರಿಸಿ ಮಾದರಿ ಬಿಸಿಯೂಟವನ್ನು ವಿದ್ಯಾರ್ಥಿಗಳಿಗೆ ಉಣಬಡಿಸುತ್ತಿದ್ದಾರೆ. ಎಲ್ಲೆಡೆ ಬಿಸಿಯೂಟದಡಿ





ಪ್ರತಿ ಶನಿವಾರ ಉಪ್ಪಿಟ್ಟು, ಇತರ ದಿನಗಳಲ್ಲಿ ಅನ್ನ ಮತ್ತು ಸಾಂಬಾರ್ ನೀಡುತ್ತಾರೆ. ಇಲ್ಲಿ ಎರಡು ದಿನಕ್ಕೊಮ್ಮೆ ಚಪಾತಿ ಮತ್ತು ಅನ್ನ ಸಾಂಬಾರ್, ಶನಿವಾರ ಪೂರಿ, ಇಡ್ಲಿ, ದೋಸೆ, ಚೌ ಚೌ ಬಾತ್ ಇವುಗಳಲ್ಲೊಂದನ್ನು ಮಾಡುತ್ತಾರೆ. 'ಸರಕಾರ ಕೊಟ್ಟ ಗೋಧಿಯನ್ನು ರವೆ ಮಾಡಿಸುವಾಗ ಅದರಲ್ಲಿ ಸಾಕಷ್ಟು ಹಿಟ್ಟು ಸಿಗುತ್ತದೆ. ಈ ಹಿಟ್ಟನ್ನು ವ್ಯರ್ಥ ಮಾಡದೆ ಚಪಾತಿಗೆ ಬಳಸುತ್ತಿದ್ದಾರೆ.



**ಅಮವಾಸ್ಯೆಯ ದಿನ ಹೋಳಿಗೆ ಊಟ :**

ಮಕ್ಕಳಲ್ಲಿ ಮೂಢನಂಬಿಕೆಯನ್ನು ತೊಡೆದುಹಾಕಬೇಕೆಂಬ ಉದ್ದೇಶದಿಂದ ಪ್ರತಿ ತಿಂಗಳ ಅಮವಾಸ್ಯೆಯ ದಿನ ವಿದ್ಯಾರ್ಥಿಗಳಿಗೆ ಹೋಳಿಗೆ ಊಟವನ್ನು ನೀಡುತ್ತಾರೆ. ಇದರಿಂದಾಗಿ ಶಾಲೆಗೆ ಬರುವ ವಿದ್ಯಾರ್ಥಿಗಳ ಪ್ರಮಾಣವು ಹೆಚ್ಚಿದೆ. ವಿದ್ಯಾರ್ಥಿಗಳು ಶಾಲಾ ಕೆಲಸದಲ್ಲಿ ತೊಡಗಿಸಿಕೊಳ್ಳುವ ಪ್ರಮಾಣವು ಇಮ್ಮಡಿಯಾಗಿದೆ.

**ಗಣರಾಜ್ಯೋತ್ಸವದಂದು ಶಾಲಾ ವಾರ್ಷಿಕೋತ್ಸವ :**

ಶಾಲಾ ವಾರ್ಷಿಕೋತ್ಸವ ಬಂತೆಂದರೆ ಶಾಲೆಗಳಲ್ಲಿ ಮಕ್ಕಳಿಗೆ ತಿಂಗಳುಗಟ್ಟಲೆ ಪಾಠ ಇರುವುದಿಲ್ಲ. ಎಲ್ಲರು ವಾರ್ಷಿಕೋತ್ಸವದ ತಯಾರಿಯಲ್ಲೆ ತೊಡಗುತ್ತಾರೆ. ಆದರೆ ಇಲ್ಲಿ ಹಾಗಾಗುವುದಿಲ್ಲ. ಪ್ರತಿ ವರ್ಷ ಗಣರಾಜ್ಯೋತ್ಸವ ದಿನಕ್ಕಿಂತ ನಾಲ್ಕು ದಿನ ಮುಂಚಿತವಾಗಿ ತಯಾರಿಯನ್ನು ನಡೆಸಿ ಆ ದಿನವೆ ವಾರ್ಷಿಕೋತ್ಸವವನ್ನು ಮಾಡಿ ಮುಗಿಸುತ್ತಾರೆ. ಇದು ಈ ಊರಿನಲ್ಲಿ ನಡೆಯುವ ದೊಡ್ಡ ಹಬ್ಬವೂ ಹೌದು. ಸುಮಾರು ಎರಡು ಸಾವಿರ ಜನ ಸೇರುತ್ತಾರೆ. ವಿಶೇಷವೆಂದರೆ ವಾರ್ಷಿಕೋತ್ಸವದ ಸಂಪೂರ್ಣ ಜವಾಬ್ದಾರಿಯನ್ನು ತಾ ಮುಂದು ತಾ ಮೆಂದೆಂದೂ ಗ್ರಾಮಸ್ಥರೆ ವಹಿಸಿಕೊಳ್ಳುತ್ತಾರೆ. ಪೆಂಡಾಲ್, ಲೈಟಿಂಗ್, ಧ್ವನಿವರ್ಧಕ, ಊಟದ ವ್ಯವಸ್ಥೆ ಎಲ್ಲವನ್ನು ಅವರೆ ಮಾಡಿ ಮುಗಿಸುತ್ತಾರೆ.



**ಊರವರ ಸಹಕಾರ :**

ಈ ಊರಿನ ಯಾವ ವಿದ್ಯಾರ್ಥಿಯೂ ಆಂಗ್ಲಮಾಧ್ಯಮ ಶಾಲೆಗೆ ಹೋಗದಿರುವುದು ಇಲ್ಲಿನ ಪ್ಲಸ್ ಪಾಯಿಂಟ್. ಈ ಹಿಂದೆ ಆಂಗ್ಲ ಮಾಧ್ಯಮಕ್ಕೆ ಸೇರಿಸಿದ ಹೆತ್ತವರು ಇದೀಗ ಮಕ್ಕಳನ್ನು ಇಲ್ಲಿಗೆ ದಾಖಲಿಸುತ್ತಿದ್ದಾರೆ. ಸಾಮಾನ್ಯವಾಗಿ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾದರೆ ಆ ಶಾಲೆಗೆ ಶೇ. 100 ಫಲಿತಾಂಶ ಎಂದು ಕರೆಯುವುದು ವಾಡಿಕೆ. ಆದರೆ ಇಲ್ಲಿನ ಶೇ.90ರಷ್ಟು ಮಕ್ಕಳು ಶೇ.80ಕ್ಕಿಂತ ಅಧಿಕ ಅಂಕ ಪಡೆದರೆ ಅತಿ ಕಡಿಮೆ ಅಂದರೆ ಶೇ. 62 ಅಂಕ ಪಡೆದು ಉತ್ತೀರ್ಣರಾಗುತ್ತಿದ್ದಾರೆ. ಈ ಎಲ್ಲಾ ಸಾಧನೆಯ ಹಿಂದೆ ಇಲ್ಲಿನ ಗ್ರಾಮಸ್ಥರ ಸಹಕಾರವು ಇದೆ. ಶಿಕ್ಷಕರನ್ನು ಗುರುತಿಸುವ, ಪ್ರೋತ್ಸಾಹಿಸುವ ಜೊತೆಗೆ ಎಲ್ಲಾ ಕೆಲಸಗಳಲ್ಲೂ ಕೈಜೋಡಿಸುತ್ತಿದ್ದಾರೆ. ಊರವರು ಕೆಲವೊಂದು ದಾನಿಗಳನ್ನು ಪರಿಚಯಿಸುವ ಮೂಲಕ ಶಾಲಾಭಿವೃದ್ಧಿಯಲ್ಲಿ ಕೈಜೋಡಿಸುತ್ತಿದ್ದಾರೆ. ಇನ್ಫೋಸಿಸ್ ಸಂಸ್ಥೆಯವರು ಈ ಶಾಲೆಗೆ ಈಗಾಗಲೇ 4 ಕಂಪ್ಯೂಟರ್‌ಗಳನ್ನು ನೀಡಿದ್ದಾರೆ. ಶಿಕ್ಷಕರೆಲ್ಲಾ ಸೇರಿ ಪ್ರಿಂಟರ್‌ನ್ನು ಖರೀದಿಸಿದ್ದಾರೆ.

**ಬಿಸಿಯೂಟಕ್ಕೆ ಕೈತೋಟದ ತರಕಾರಿ :**

ಶಾಲಾ ಆವರಣದಲ್ಲಿರುವ ಹತ್ತು ಗುಂಟೆ ಜಮೀನಿನಲ್ಲಿ ಪಾಲಕ್, ಕೊತ್ತಂಬರಿ, ಮೆಂತೆ, ಟೊಮೆಟ, ಕ್ಯಾರೆಟ್, ಬೀನ್ಸ್, ಬೆಂಡೆ, ಆಲೂಗಡ್ಡೆ, ಮೆಣಸಿನಕಾಯಿ, ಸೌತೆ, ಕುಂಬಳ, ಈರುಳ್ಳಿಯನ್ನು ಬೆಳೆದಿದ್ದಾರೆ. ಅಲ್ಲದೆ ಎರಡು ಎಕರೆ 23 ಗುಂಟೆ ಶಾಲಾ ಜಮೀನಿನಲ್ಲಿ ಶಿಕ್ಷಕರು ತಮ್ಮ ಸ್ವಂತ ಹಣದಿಂದ ಖರೀದಿಸಿದ ಮಾವು, ಹುಣಸೆ, ನೇರಳೆ, ಗಿಡ್ಡ ಹುಣಸೆ, ಬಾದಾಮಿ, ಮೋಸಂಬಿ, ಸೀತಾಫಲ, ಕಿತ್ತಳೆ, ದಾಳಿಂಬೆ, ಸಪೋಟ, ಪರಂಗಿ, ಪೇರಳೆ, ಸೀಬೆ ಗಿಡಗಳನ್ನು ಹಾಕಿಸಿದ್ದಾರೆ. ಜೊತೆಗೆ 500 ಕ್ಕೂ ಅಧಿಕ ಔಷಧೀಯ ಗಿಡಗಳನ್ನು ಸಹ ಈ ಕೈತೋಟದಲ್ಲಿ ಬೆಳಸುತ್ತಿದ್ದು, ತರಕಾರಿ ಬೀಜಗಳನ್ನು ಗದಗ ಜಿಲ್ಲಾ ಕೃಷಿ ವಿಶ್ವವಿದ್ಯಾಲಯದ ಹುಲ್ಲುಕೋಟಿಯ ಗೃಹ ವಿಜ್ಞಾನಿಯಾದ ಡಾ। ಸುಧಾ ರಾಯನ್ ಗೌಡರವರು ನೀಡುತ್ತಿದ್ದಾರೆ.

**ಗಿಡಗಳ ಪಾಲನಾ ಸಮಿತಿ:**

ಗಿಡಗಳ ಪಾಲನೆಯ ಸಂಪೂರ್ಣ ಜವಾಬ್ದಾರಿ ವಿದ್ಯಾರ್ಥಿಗಳದ್ದು. ಬೇಸಿಗೆಯಲ್ಲಿ ನೀರಿನ ಸಮಸ್ಯೆಯಾದಾಗ ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಮನೆಯಿಂದ ಒಂದೊಂದು ಕೊಡ ನೀರು ತಂದು ಹಾಕಿ ಗಿಡಗಳನ್ನು ಬೆಳೆಸಿದ್ದಾರೆ. ಇಲ್ಲಿನ ನಿವಾಸಿಯಾದ ಗುರುವಪ್ಪ ರೋಣ ಬೇಸಿಗೆಯಲ್ಲಿ ಸ್ವ ಇಚ್ಛೆಯಿಂದ ಗಿಡಗಳಿಗೆ ಟ್ಯಾಂಕರ್ ಮೂಲಕ ನೀರನ್ನು ತಂದು ಹಾಕಿದ್ದಾರೆ. ಈ ಬಾರಿ ಪಂಚಾಯತ್ ನೀರಿನ ವ್ಯವಸ್ಥೆ ಇರುವುದರಿಂದ ಆ ಸಮಸ್ಯೆಯಿಲ್ಲ. ಕುಡಿಯಲು ಪ್ರತಿ ದಿನ 10 ಕೊಡ ನೀರನ್ನು ಶುದ್ಧಗಂಗಾ ಘಟಕದಿಂದ ಖರೀದಿಸುತ್ತಾರೆ. ಮೂರು ತರಗತಿಯ ವಿದ್ಯಾರ್ಥಿಗಳನ್ನು ಹೂವಿಲಗೋಳ ವೀರನಾರಾಯಣ, ಭಗತ್‌ಸಿಂಗ್, ಪುಟ್ಟರಾಜ ಗಾವಾಯಿಗಳು, ಕುಮಾರವ್ಯಾಸ ಎಂಬ ಹೆಸರಿನಲ್ಲಿ ನಾಲ್ಕು ಗ್ರೂಪ್‌ಗಳಾಗಿ ವಿಭಾಗಿಸಲಾಗಿದೆ. ಪ್ರತಿದಿನ ಬೆಳಿಗ್ಗೆ 9.30ಕ್ಕಿಂತ ಮುಂಚೆ ಸಂಜೆ 4.30ರ ನಂತರ ತಾವೇ ಗುದ್ದಲಿ, ಬುಟ್ಟಿ, ಪೊರಕೆ, ಪೈಪ್ ಹಿಡಿದು ತೋಟದಲ್ಲಿ ದುಡಿಯುತ್ತಾರೆ. ಯಾರನ್ನು ಕೆಲಸ ಮಾಡುವಂತೆ ಬಲವಂತ ಮಾಡುವುದಿಲ್ಲ. ಆದರೆ ಪ್ರತಿಯೊಬ್ಬ ವಿದ್ಯಾರ್ಥಿಯು ಸ್ವ ಇಚ್ಛೆಯಿಂದ ಕೆಲಸದಲ್ಲಿ ತೊಡಗುತ್ತಾರೆ.

ನೀರಿಂಗಿಸುವ ನಿಟ್ಟಿನಲ್ಲಿ ಎರಡು ಇಂಗುಗುಂಡಿಗಳನ್ನು ನಿರ್ಮಿಸಲಾಗಿದೆ. ಇಲ್ಲಿ ಒಂದು ಹನಿ ನೀರು ಕೂಡಾ ವ್ಯರ್ಥವಾಗುವುದಿಲ್ಲ. ಕೈತೊಳೆದ, ಅಡುಗೆ ಕೋಣೆಯ ನೀರು ಪೈಪ್ ಮೂಲಕ ತರಕಾರಿ ಗಿಡಗಳ ಬುಡ ಸೇರುತ್ತದೆ. ಗೊಬ್ಬರಕ್ಕಾಗಿ ಎರಡು ಸಾವಯವ ಗೊಬ್ಬರದ ತೊಟ್ಟಿ ನಿರ್ಮಿಸಲಾಗಿದೆ. ಶಾಲೆಯ ಹಿಂದಿ ಶಿಕ್ಷಕರು ಸಂಜೆ ಮತ್ತು ಬೆಳಿಗ್ಗೆ ಹೆಚ್ಚಿನ ಸಮಯವನ್ನು ತೋಟದ ನಿರ್ವಹಣೆಯಲ್ಲಿ ಕಳೆಯುತ್ತಿದ್ದಾರೆ. ಇಲ್ಲಿನ 'ಅಮರೇಶ್ವರ ಯುವಕ ಸಂಘ'ದಲ್ಲಿ ಓರ್ವ ಶಿಕ್ಷಕರಿಂದ ಆರಂಭವಾದ ಶಾಲೆ ಇದೀಗ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿರುವುದು ಅಭಿನಂದನೀಯ.

**ರಾಷ್ಟ್ರಮಟ್ಟಕ್ಕೆ ಆಯ್ಕೆ :**

ಇತ್ತೀಚೆಗೆ ಸ್ಥಳದಲ್ಲಿ ವಿಜ್ಞಾನ ಮಾದರಿ ತಯಾರಿಕೆ ಸ್ಪರ್ಧೆಯಲ್ಲಿ ಇಲ್ಲಿನ ವಿಜ್ಞಾನ ಪ್ರಾಧ್ಯಾಪಕರಾದ ಎಂ.ಎಚ್. ಸವದತ್ತಿ ಮತ್ತು ವಿದ್ಯಾರ್ಥಿಗಳಾದ ಆನಂದ ಹಳ್ಳಿಕೇರಿ, ಮಲ್ಲಿಕಾರ್ಜುನ ಅಲೆಮನೆಯವರು 'ತ್ಯಾಜ್ಯ ವಸ್ತುಗಳ ಮರು ಬಳಕೆ ಹಾಗೂ ನಿರ್ವಹಣೆ' ಎಂಬ ವಿಷಯದಡಿ ಮೂತ್ರದಿಂದ ಯೂರಿಯಾ ತಯಾರಿಕೆ ಪ್ರಯೋಗ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನವನ್ನು ಪಡೆದು ಇದೀಗ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದೆ.



ಬಿಸಿಲ ನಾಡಿನಲ್ಲಿ

# ಜೇನಿನ ಹೊಳೆ ಹರಿಸಿದ ರೈತರು

**ತುಕಾರಾಂರಾವ್ ಬಿ.ವಿ,**
ಸಹಾಯಕ ನಿರ್ದೇಶಕರು

**ಜೇ**ನು ಸಾಕಾಣಿಕೆ ಸಾಮಾನ್ಯವಾಗಿ ಮಲೆನಾಡಿನಲ್ಲಿ ರೈತರು ಕೈಗೊಳ್ಳುವುದನ್ನು ಕಾಣುತ್ತೇವೆ. ಆದರೆ ಬಿಸಿಲ ನಾಡು ಎನಿಸಿಕೊಂಡಿರುವ ಕೊಪ್ಪಳ ಜಿಲ್ಲೆಯಲ್ಲಿಯೂ ಜೇನು ಕೃಷಿಯನ್ನು ಯಶಸ್ವಿಯಾಗಿ ಕೈಗೊಂಡು ಕೃಷಿಯ ಜೊತೆಗೆ ಉಪ ಕಸುಬಾಗಿ ಲಾಭದಾಯಕ ಮಾಡಿಕೊಳ್ಳಬಹುದಾಗಿದೆ ಎಂಬುದನ್ನು ಇಲ್ಲಿನ ರೈತರು ಸಾಬೀತು ಪಡಿಸಿದ್ದಾರೆ.

ಜೇನು ಕೃಷಿಯನ್ನು ಯಶಸ್ವಿಯಾಗಿ ಕೈಗೊಂಡ ಪ್ರಗತಿ ಪರ ರೈತರ ತೋಟಕ್ಕೆ ಪ್ರತ್ಯಕ್ಷ ವರದಿ ಸಂಗ್ರಹಣೆಗಾಗಿ ಕೊಪ್ಪಳ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಗಂಗಾವತಿ ತಾಲೂಕು ಬಸಾಪಟ್ಟಣ ಗ್ರಾಮಕ್ಕೆ ವಿಶೇಷ ಮಾಧ್ಯಮ ಪ್ರವಾಸ ಆಯೋಜಿಸಿತ್ತು.

ಜೇನು ಸಾಕಾಣಿಕೆ ಎಂಬುದು ರೈತರ ಪಾಲಿಗೆ ಸಂಜೀವಿನಿಯಾಗಿದ್ದು, ಜೇನು ಕೃಷಿಯಿಂದ ಆರ್ಥಿಕ ಲಾಭ ಗಳಿಸಲು ಅವಕಾಶವಿದೆ ಅಲ್ಲದೆ, ಕೃಷಿಯಲ್ಲಿ ಜೇನಿನಿಂದ ನಡೆಯುವ ಪರಾಗ ಕ್ರಿಯೆ, ಇಳುವರಿಯನ್ನು ಸುಮಾರು ಶೇ. 40 ರಷ್ಟು ಹೆಚ್ಚಿಸಲು ಸಹಕಾರಿಯಾಗಿದೆ ಅಂದರೆ, ಇದರ ಮಹತ್ವ ಎಷ್ಟು ಎಂಬುದು ತಿಳಿಯುತ್ತದೆ. ಇದಕ್ಕೆಂದೇ ತೋಟಗಾರಿಕೆ ಇಲಾಖೆ ಇತ್ತೀಚೆಗಷ್ಟೇ ಕೊಪ್ಪಳದಲ್ಲಿ ಮೂರು ದಿನ ಹಮ್ಮಿಕೊಂಡಿದ್ದ ಜೇನು ಮೇಳ ಅತ್ಯಂತ ಯಶಸ್ವಿಯಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಸಮಗ್ರ ಕೃಷಿ ಬೇಕು : ಸಮಗ್ರ ಕೃಷಿ ಇಂದಿನ ಅಗತ್ಯವಾಗಿದೆ. ಒಂದೆರಡು ಬೆಳೆಗಳನ್ನು ಬೆಳೆದಾಗ ಹವಾಮಾನದ ವೈಪರೀತ್ಯದಿಂದಾಗಿ ಒಂದೇ ಬೆಳೆ ಇದ್ದರೆ ನಷ್ಟ ಅನುಭವಿಸಬೇಕಾಗುತ್ತದೆ. ಆದರೆ ಕೃಷಿ ಜೊತೆಗೆ ತೋಟಗಾರಿಕೆ, ಅರಣ್ಯ ಬೆಳೆಗಳು, ಹೈನುಗಾರಿಕೆ, ಲಾಭದಾಯಕವಾಗಿದೆ. ಇದರ ಜೊತೆಗೆ ಉಪಕಸುಬುಗಳಾದ ರೇಷ್ಮೆ ಸಾಕಾಣಿಕೆ ಯಂತಹ ಕಸುಬುಗಳು ಕೃಷಿಯಲ್ಲಿ ನಷ್ಟ ತಡೆಗಟ್ಟಿ ಸ್ಥಿರತೆ ಕಾಪಾಡುವಲ್ಲಿ ಮತ್ತು ಸ್ವಾವಲಂಬನೆಯತ್ತ ಹೆಜ್ಜೆ







ಇಡುವಲ್ಲಿ ಸಹಕಾರಿಯಾಗಿವೆ. ಅಂತಹ ಉಪಕಸುಬುಗಳಲ್ಲಿ ಸರಳ ಮತ್ತು ಹೆಚ್ಚಿನ ಲಾಭ ಕೊಡುವ ಮತ್ತು ಕಡಿಮೆ ಸಮಯ ಬಯಸುವ ಕಸುಬು ಎಂದರೆ ಜೇನು ಸಾಕಾಣಿಕೆಯಾಗಿದೆ. ದಿನದ ತುಸು ಸಮಯ ಮಾತ್ರ ಈ ಉಪ ಕಸುಬಿಗೆ ಸಾಕು, ಲಾಭ ಮಾತ್ರ ಅಧಿಕ. ರೈತ ಮಹಿಳೆಯರಿಗೆ ಇದು ಅತ್ಯಂತ ಸೂಕ್ತ ಉದ್ಯಮ. ಒಂದು ಜೇನು ಪೆಟ್ಟಿಗೆಯಿಂದ ವರ್ಷಕ್ಕೆ ಹಲವು ಬಾರಿ ಜೇನುತುಪ್ಪ ಪಡೆಯಬಹುದು. ನಿರಂತರ ಬೆಳೆ ಇದ್ದಲ್ಲಿ, ಪ್ರತೀ ತಿಂಗಳೂ ತುಪ್ಪ ಪಡೆಯಲು ಸಾಧ್ಯ.

ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಪ್ರಗತಿಪರ ರೈತ ಅನಿಲಕುಮಾರ್ ಹಾಗೂ ಕೊಪ್ಪಳ ತಾಲೂಕಿನ ಇಂದರಗಿ ಗ್ರಾಮದ ರೈತ ನಿಂಗಪ್ಪ ಎನ್ನುವವರು ಜೇನು ಕೃಷಿಯನ್ನು ಯಶಸ್ವಿಯಾಗಿ ಮಾಡುತ್ತಿದ್ದಾರೆ. ಅಲ್ಲದೆ ಹೈದ್ರಾಬಾದ್-ಕರ್ನಾಟಕ ವ್ಯಾಪ್ತಿಯಲ್ಲಿ ಮೊದಲ ಜೇನು ಕೃಷಿಕರ ಎಂಪ್ಯಾನಲ್ ಸಂಘವನ್ನು ಸಹ ಸ್ಥಾಪಿಸಿ, ತೋಟಗಾರಿಕೆ ಇಲಾಖೆಯ ನೆರವು ಪಡೆಯುತ್ತಿದ್ದಾರೆ. ಸಂಘದಲ್ಲಿ ಈಗಾಗಲೆ 25 ರೈತರು ಸದಸ್ಯರಾಗಿದ್ದು, ಎಲ್ಲರೂ ಜೇನು ಕೃಷಿಯಲ್ಲಿ ಆಸಕ್ತಿ ತೋರಿದ್ದಾರೆ.

**40 ಜೇನು ಪೆಟ್ಟಿಗೆ :** ಗಂಗಾವತಿ ತಾಲೂಕು ಬಸಾಪಟ್ಟಣದ ರೈತ ಅನಿಲಕುಮಾರ್ ಅವರು ಮೇಟಿಕುರ್ಕೆಯಲ್ಲಿ ಶಾಂತವೀರಯ್ಯ ಎಂಬುವವರಿಂದ ಜೇನು ಕೃಷಿಯ ತರಬೇತಿ ಪಡೆದು, ಅವರಿಂದಲೇ 02 ಜೇನು ಪೆಟ್ಟಿಗೆ ಪಡೆದುಕೊಂಡು ಬಂದು, ತಮ್ಮ ತೋಟದಲ್ಲಿ ಜೇನು ಸಾಕಾಣಿಕೆ ಪ್ರಾರಂಭಿಸಿಯೇ ಬಿಟ್ಟರು. ಮೊದ ಮೊದಲು ವಿಫಲವಾದರೂ, ಕುಗ್ಗದೆ, ಮತ್ತೆ ಯತ್ನ ಮಾಡಿ ಯಶಸ್ಸು ಕಂಡರು. 20 ಎಕರೆ ಜಮೀನು ಹೊಂದಿರುವ ಇವರು, ಸಮಗ್ರ ಕೃಷಿ ಮಾಡುತ್ತಿದ್ದಾರೆ. ಮಾವು, ಪಪ್ಪಾಯಿ, ಭತ್ತ ಸೇರಿದಂತೆ ಹಲವು ಕೃಷಿ ಬೆಳೆಯನ್ನೂ ಬೆಳೆಯುತ್ತಾರೆ. ವಿಶೇಷವೆಂದರೆ, ಇವರು ಕೈಗಳ್ಳುವುದು ಸಾವಯವ ಕೃಷಿ ಮಾತ್ರ. ಯಾವುದೇ ರಾಸಾಯನಿಕ ಗೊಬ್ಬರ ಬಳಸುವುದಿಲ್ಲ. ಇದೀಗ ತಮ್ಮ ತೋಟದಲ್ಲಿ ಸುಮಾರು 40 ಕ್ಕೂ ಹೆಚ್ಚು ಜೇನು ಪೆಟ್ಟಿಗೆಗಳನ್ನಿಟ್ಟು, ಜೇನು ಕೃಷಿ ಮಾಡುತ್ತಿದ್ದಾರೆ. ಇದೀಗ ಅವರು ಇತರರಿಗೂ, ಜೇನು ಕೃಷಿಗೆ ಉತ್ತೇಜಿಸುತ್ತಿದ್ದು, ಜೇನು ಕೃಷಿಗೆ ಬೇಕಾದ ಪರಿಕರಗಳನ್ನು ನೀಡುವುದಲ್ಲದೆ, ಅಗತ್ಯ ತರಬೆತಿಯನ್ನೂ ಇವರೇ ನೀಡುತ್ತಿದ್ದಾರೆ. ಕೊಪ್ಪಳ ಜಿಲ್ಲೆಯಷ್ಟೇ ಅಲ್ಲ, ಹೈದ್ರಾಬಾದ್-ಕರ್ನಾಟಕ ಪ್ರದೇಶದ ಹಲವು ಜಿಲ್ಲೆಗಳಿಂದ ರೈತರು ಸ್ವಯಂ ಪ್ರೇರಿತರಾಗಿ ಇವರಲ್ಲಿ ಬಂದು ಜೇನು ಸಾಕಾಣಿಕೆಯ ತರಬೇತಿ ಪಡೆದುಕೊಂಡು ಹೋಗುತ್ತಾರೆ.

**ಇಳುವರಿ ಹೆಚ್ಚಳ ಪ್ರಮುಖ ಉದ್ದೇಶ :** ಪ್ರತಿ ಜೇನು ಪೆಟ್ಟಿಗೆಯಿಂದ ವರ್ಷಕ್ಕೆ ಕನಿಷ್ಟ 04 ರಿಂದ 05 ಸಾವಿರ ಆದಾಯ ಗಳಿಸಲು ಸಾಧ್ಯವಿದೆ. ಆದರೆ ಜೇನು ಸಾಕಾಣಿಕೆಯ ಪ್ರಮುಖ ಉದ್ದೇಶ ಕೃಷಿ ಇಳುವರಿ ಹೆಚ್ಚಿಸಿಕೊಳ್ಳುವುದಾಗಿದೆ. ಜೇನು ಹುಳುಗಳು ಕೈಗೊಳ್ಳುವ ಪರಾಗಸ್ಪರ್ಷ ಕ್ರಿಯೆಯಿಂದ ಕೃಷಿಯಲ್ಲಿ ಶೇ. 40 ರಷ್ಟು ಇಳುವರಿ ಹೆಚ್ಚಿಸಿಕೊಳ್ಳಲು ಸಾಧ್ಯವಿದೆ. ಹೀಗಾಗಿ ಜೇನು ಸಾಕಾಣಿಕೆ ಜೇನು ತುಪ್ಪದ ಹಣ ತಂದುಕೊಟ್ಟರೆ, ಅದರ ಇನ್ನೊಂದು ಲಾಭವೆಂದರೆ, ಕೃಷಿ ಬೆಳೆ ಹೆಚ್ಚು ಇಳುವರಿ ತಂದು, ಲಾಭವನ್ನು ಇಮ್ಮಡಿಗೊಳಿಸುತ್ತದೆ.







ಕೃಷಿ ಹಾಗೂ ತೋಟಗಾರಿಕೆಯಲ್ಲಿ ಹೆಚ್ಚಿನ ರಾಸಾಯನಿಕ ಹಾಗೂ ಕೀಟನಾಶಕ ಬಳಕೆಯಿಂದಾಗಿ ಜೇನು ಹುಳುಗಳ ಪೀಳಿಗೆ ಸಂಕಷ್ಟದಲ್ಲಿದೆ. ಜೇನು ಹುಳುಗಳ ಕಣ್ಮರೆಯಿಂದ ಇಡೀ ಕೃಷಿ ಚಟುವಟಿಕೆಯೇ ಆತಂಕಕ್ಕೆ ಸಿಲುಕಲಿದೆ. ಪರಿಸರ ಉಳಿಸಿದಾಗ ಮಾತ್ರ ಜೇನು ಉಳಿದು, ಕೃಷಿ ಹಾಗೂ ಮನುಕುಲ ಉಳಿಯಲು ಸಾಧ್ಯ. ಜನರು ಶುದ್ಧ ಜೇನು ತುಪ್ಪ ಸಿಗುವ ಕಡೆ, ಹುಡುಕಿಕೊಂಡು ಬಂದು ಖರೀದಿಸುತ್ತಾರೆ. ಕೃಷಿ ಚಟುವಟಿಕೆಯ ಜೊತೆಗೆ ಜೇನು ಸಾಕಾಣಿಕೆ ನಿಜಕ್ಕೂ ಒಳ್ಳೆಯ ಉಪಕಸುಬಾಗಿದೆ. ಹೆಚ್ಚು ದೈಹಿಕ ಪರಿಶ್ರಮವಿಲ್ಲದ ಉಪಕಸುಬು ಇದಾಗಿದ್ದು, ರೈತ ಮಹಿಳೆಯರಿಗೂ ಇದು ಅತ್ಯಂತ ಸೂಕ್ತವಾಗಿದೆ ಎನ್ನುತ್ತಾರೆ ಪ್ರಗತಿಪರ ರೈತ ಅನಿಲಕುಮಾರ್.

ಜೇನು ಸಾಕಾಣಿಕೆಯನ್ನು ಇತರೆ ರೈತರಿಗೂ ಪರಿಚಯಿಸುವ ಉದ್ದೇಶದಿಂದ ಕೊಪ್ಪಳ ತೋಟಗಾರಿಕೆ ಇಲಾಖೆ ಇಂದರಗಿ ಗ್ರಾಮದ ರೈತ ನಿಂಗಪ್ಪ ಎನ್ನುವವರನ್ನು ಜೇನುಕೃಷಿ ಪ್ರೇರಕರನ್ನಾಗಿ ನೇಮಿಸಿ, ಪ್ರತಿ ತಿಂಗಳು ಗೌರವಧನ ನೀಡುತ್ತಿದೆ.




ನಿಂಗಪ್ಪ ಹೇಳುವಂತೆ ಒಂದು ಆರೋಗ್ಯವಂತ ರಾಣಿ ಜೇನು ನಿತ್ಯ 500 ರಿಂದ 1000 ಮೊಟ್ಟೆಗಳನ್ನಿಡುತ್ತದೆ. ಪ್ರತಿ ರಾಣಿ ಜೇನಿನ ಜೀವಿತಾವಧಿ 2 ರಿಂದ 3 ವರ್ಷವಾಗಿದ್ದು, ಇತರೆ ಜೇನು ಹುಳುಗಳು ಸುಮಾರು ಒಂದು ಕಿ.ಮೀ. ವಿಸ್ತೀರ್ಣದಲ್ಲಿ ಸಂಚರಿಸಿ, ಮಕರಂದವನ್ನು ಹೀರಿ ತರುತ್ತವೆ. ಒಂದು ಜೇನು ಪೆಟ್ಟಿಗೆಯಲ್ಲಿ 08 ಸೂಪರ್ ಫ್ರೇಮ್ ಹಾಗೂ 08 ಇತರೆ ಫ್ರೇಮ್‌ಗಳನ್ನು ಇರಿಸಲಾಗುತ್ತದೆ. ಜಿಲ್ಲೆಯಲ್ಲಿ ಯಾವುದೇ ಗ್ರಾಮದ ರೈತರು ಜೇನು ಸಾಕಾಣಿಕೆಗೆ ಆಸಕ್ತಿ ತೋರಿದರೆ, ಅವರ ತೋಟಕ್ಕೇ ಹೋಗಿ, ಮಾಹಿತಿ ಹಾಗೂ ತರಬೇತಿ ನೀಡಲು ಸಿದ್ಧ ಎನ್ನುತ್ತಾರೆ.

ಕೊಪ್ಪಳ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆ ಬೆಳೆಯುವ ರೈತರು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದು, ಇದೀಗ, ಜೇನು ಕೃಷಿ ಪ್ರೋತ್ಸಾಹಿಸಿ, ರೈತರಲ್ಲಿ ಉತ್ತೇಜನ ನೀಡಲಾಗುತ್ತಿದೆ. ಮಧು ಮೇಳವನ್ನು ಜಿಲ್ಲೆಯಲ್ಲಿ ಆಯೋಜಿಸಿ, ಜೇನು ಕೃಷಿ ಬಗ್ಗೆ ರೈತರಿಗೆ ಮಾಹಿತಿ ಹಾಗೂ ಶುದ್ಧ ಜೇನು ತುಪ್ಪ ಮಾರಾಟ ಮಾಡಲು ಉತ್ತೇಜನ ನೀಡಲಾಗುತ್ತಿದೆ. ಜೇನು ಸಾಕಾಣಿಕೆಗೆ ಇಲಾಖೆಯಿಂದ ಪ್ರತಿ ಜೇನು ಪೆಟ್ಟಿಗೆಗೆ ಸಾಮಾನ್ಯ ರೈತರಿಗೆ ರೂ. 1800 ಹಾಗೂ ಪ.ಜಾತಿ/ಪ.ಪಂಗಡದವರಿಗೆ ರೂ. 3600 ಸಹಾಯಧನ ನೀಡಲಾಗುತ್ತಿದೆ. ಅಲ್ಲದೆ ಜೇನು ಸಾಕಾಣಿಕೆಯನ್ನು ಹೆಚ್ಚಿಸಿಕೊಂಡು ಮಧುವನ್ನು ಮಾಡಿಕೊಳ್ಳಲು ಬಯಸುವವರಿಗೆ 50 ಸಾವಿರ ರೂ. ಸಹಾಯಧನ ನೀಡಲಾಗುವುದು. ಎನ್ನುತ್ತಾರೆ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ ಉಕ್ಕುಂದ ಅವರು.

ಜೇನು ಕೃಷಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗೆ ರೈತ ಅನಿಲಕುಮಾರ್– 9900440777 ಅಥವಾ ನಿಂಗಪ್ಪ, ಜೇನು ಕೃಷಿ ಪ್ರೇರಕ– 9901499701 ಕ್ಕೆ ಸಂಪರ್ಕಿಸಬಹುದಾಗಿದೆ. ■





## ನೆನಪಿನಂಗಳದಲ್ಲಿ
# ಆರ್.ಕೆ. ನಾರಾಯಣ್

ಡಾ. ಕರೀಗೌಡ ಬೀಚನಹಳ್ಳಿ



**ಭಾ**ರತೀಯ ಲೇಖಕರಾಗಿ ಇಂಗ್ಲೀಷಿನಲ್ಲಿ ಇಪ್ಪತ್ತನೆಯ ಶತಮಾನದ ಮೂರನೆಯ ದಶಕದಿಂದ ಸುಮಾರು ಎಂಟನೆಯ ದಶಕದವರೆಗೆ ನಿರಂತರವಾಗಿ ಬರೆದ ಆರ್.ಕೆ. ನಾರಾಯಣರ ಸಾಹಿತ್ಯದ ಕಾರ್ಯವ್ಯಾಪ್ತಿ ವಿಶಾಲವಾಗಿ ವ್ಯಾಪಿಸಿದೆ. ಅದರಲ್ಲೂ ಸ್ವಾತಂತ್ರ್ಯ ಪೂರ್ವದ ಎರಡು ದಶಕಗಳು ಮತ್ತು ಸ್ವಾತಂತ್ರ್ಯೋತ್ತರದ ನಾಲ್ಕು ದಶಕಗಳಲ್ಲಿ ಬಂದ ಅವರ ಕಥೆ–ಕಾದಂಬರಿಗಳನ್ನು ಒಳಗೊಂಡಿರುವ ಅವರ ಸಾಹಿತ್ಯ ಮೌಲ್ಯಭರಿತವಾದುದು. ಅವರ ಕೆಲವು ಕಥೆಗಳು ಮತ್ತು ಕಾದಂಬರಿಗಳು ದೂರದರ್ಶನದಲ್ಲಿ ಧಾರಾವಾಹಿಯಾಗಿ ಪ್ರಸಾರಗೊಂಡು ಭಾರತದ ದೇಸೀಯತೆಯನ್ನು ಎತ್ತಿ ಹಿಡಿದಿವೆ. ದೇಸೀಯ ಪ್ರಜ್ಞೆಯ ಗಾಂಭೀರ್ಯತೆ ಹಾಗೂ ಬದುಕಿನ ಹಾಸ್ಯಪ್ರಜ್ಞೆ ವಿಲೀನಗೊಂಡ ಅವರ ಕಥನ ಸಾಹಿತ್ಯ ಜನಪ್ರಿಯತೆಯನ್ನು ಪಡೆದುಕೊಂಡಿದೆ.

ರಾಸಿಪುರಂ ಕೃಷ್ಣಸ್ವಾಮಿ ಅಯ್ಯರ್ ನಾರಾಯಣಸ್ವಾಮಿ ಅಯ್ಯರ್ ಹೆಸರಿನಿಂದ ಆರ್.ಕೆ.ನಾರಾಯಣರನ್ನು ಗುರುತಿಸುವುದು ಬಹಳ ಕಡಿಮೆ. ಇದು ಅವರ ಹುಟ್ಟು ಹೆಸರು. ತಮಿಳು ಬ್ರಾಹ್ಮಣ ಹೆಸರು. ದಕ್ಷಿಣ ಭಾರತದ ತಮಿಳುನಾಡಿನ ತೀರಾ ಒಳ ಪ್ರದೇಶವಾಗಿರುವ ರಾಸಿಪುರಂ ನಾರಾಯಣರ ಪೂರ್ವಿಕರ ಊರು. ಸಂಪ್ರದಾಯಸ್ಥ ಅಯ್ಯರ್ ಬ್ರಾಹ್ಮಣರಾಗಿದ್ದ





ಆರ್.ಕೆ.ನಾರಾಯಣರ ಪೂರ್ವಜರು ಭೂಮಾಲಿಕರಾಗಿದ್ದವರು. ಆದರೆ ನಾರಾಯಣರ ತಂದೆ ಕೃಷ್ಣಸ್ವಾಮಿ ಅಯ್ಯರ್ ಮಾತ್ರ ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ವಿಭಿನ್ನ ಪರಿಸರದಲ್ಲಿ ಬೆಳೆದಿದ್ದ ವ್ಯಕ್ತಿಯಾಗಿದ್ದರು. ಭಾರತದಲ್ಲಿ ಅದೇ ತಾನೇ ತಲೆ ಎತ್ತಿದ್ದ ಇಂಗ್ಲೀಷ್ ಶಿಕ್ಷಣ ಮತ್ತು ಬ್ರಿಟೀಷರ ಜೀವನಕ್ರಮದ ಅನುಕರಣೆ ಪಡೆದ ಹೊಸ ಮಧ್ಯಮ ವರ್ಗ ಹುಟ್ಟಿಕೊಂಡಿದ್ದ ಸಮಯ ಅದು.

ಆರ್.ಕೆ. ನಾರಾಯಣರ ತಂದೆ ಕೃಷ್ಣಸ್ವಾಮಿ ಅಯ್ಯರ್ ಕೂಡ ವಸಾಹತುಶಾಹಿಯ ಪ್ರತಿನಿಧಿಯಂತೆ ಇದ್ದವರು. ಈ ಕೃಷ್ಣಸ್ವಾಮಿ ಅಯ್ಯರ್ ತಮ್ಮ ತಂದೆಯವರ ಜೊತೆ, ತಮ್ಮ ಹಳ್ಳಿಯ ಜನರ ಜೊತೆ ಹೆಚ್ಚು ಬೆರೆಯದೆ, ಮದುವೆಯಾದ ಕೂಡಲೇ ಅಚ್ಚುಕಟ್ಟಾಗಿ ಸೂಟುಬೂಟು ಧರಿಸಿ, ಕೈಯಲ್ಲಿ ಬ್ರಿಟೀಷರ ತರ ಬೆತ್ತ ಹಿಡಿದು ಮನೆಬಿಟ್ಟು ಹೊರಟ ಒಬ್ಬ ಪ್ರಗತಿಪರ ವ್ಯಕ್ತಿಯಾಗಿದ್ದರು. ಇವರಿಗೆ ಇಂಗ್ಲೀಷ್ ಭಾಷೆ ಮತ್ತು ಇಂಗ್ಲೀಷ್ ಸಾಹಿತ್ಯದಲ್ಲಿ ಅತೀವ ಪ್ರೀತಿ ಮತ್ತು ಆಸಕ್ತಿ. ಅಪ್ಪಿತಪ್ಪಿಯಾರಾದರೂ ತಮಿಳು ಅಥವಾ ಕನ್ನಡ ಭಾಷೆಗಳಲ್ಲಿ ತಪ್ಪುಗಳನ್ನು ಮಾಡಿದರೂ ಅವರು ಕ್ಷಮಿಸುತ್ತಿದ್ದರಂತೆ. ಆದರೆ ಇಂಗ್ಲೀಷ್ ಭಾಷೆಯಲ್ಲಿ ವ್ಯಾಕರಣ ದೋಷ ಕಂಡು ಬಂದರೆ ದೊಡ್ಡರಂಪವನ್ನೇ ಮಾಡುತ್ತಿದ್ದರೆಂದು ಸ್ವತಃ ಆರ್.ಕೆ. ನಾರಾಯಣ ಅವರೇ ತಮ್ಮ ತಂದೆಯ ಬಗ್ಗೆ ಹೇಳಿಕೊಂಡಿದ್ದಾರೆ. ಅವರ ತಂದೆಯ ಈ ಇಂಗ್ಲೀಷ್ ಮೋಹವೇ ಆರ್.ಕೆ.ನಾರಾಯಣ ಮತ್ತು ಅವರ ತಮ್ಮ ಆರ್.ಕೆ. ಲಕ್ಷ್ಮಣ ಅವರ ತನಕ ಸಾಗಿದೆ. ಕೃಷ್ಣಸ್ವಾಮಿ ಅಯ್ಯರ್ ಅವರು ಮೈಸೂರು ಮಹಾರಾಜರ ಆಳ್ವಿಕೆಯಲ್ಲಿ ಮೈಸೂರಿನಲ್ಲಿ ವಾಸವಾಗಿದ್ದು, ಶಾಲೆಯೊಂದರಲ್ಲಿ ಶಿಸ್ತಿನ ಶಾಲಾ ಮುಖ್ಯೋಪಾಧ್ಯಯರಾಗಿದ್ದರು.

ಆರ್.ಕೆ.ನಾರಾಯಣರು ಅಕ್ಟೋಬರ್ 10, 1906 ರಲ್ಲಿ ಮದ್ರಾಸಿನಲ್ಲಿ ತನ್ನ ತಾಯಿಯ ಮನೆಯಲ್ಲಿ, ಅಂದರೆ ತನ್ನ ಅಜ್ಜಿಯ ಮನೆಯಲ್ಲಿ ಜನಿಸಿದವರು. ಆದರೆ ನಾರಾಯಣರ ತಾಯಿಯ ಕಡೆಯ ಪರಂಪರೆ ವರ್ಣರಂಜಿತವಾದುದು. ಅವರ ಅಜ್ಜ (ತಾಯಿಯ ತಂದೆ) ಬ್ರಿಟೀಷ್ ಆಡಳಿತದಲ್ಲಿ ಕಂದಾಯ ಅಧಿಕಾರಿಯಾಗಿದ್ದವರು. ಬ್ರಾಹ್ಮಣಿಕೆ, ಮಡಿವಂತಿಕೆಯನ್ನು ವಿರೋಧಿಸಿ ಜಿನ್, ಮಾಂಸವನ್ನು ಮೆಚ್ಚಿಕೊಳ್ಳುತ್ತಿದ್ದ ಅವರು ಬ್ರಿಟೀಷರ ಜೀವನಕ್ರಮಕ್ಕೆ ಒಗ್ಗಿ ಹೋಗಿದ್ದರು. ಅವರು ತಮಿಳು ಸಾಂಪ್ರದಾಯಕ ಅಯ್ಯರ್ ಬ್ರಾಹ್ಮಣರ ದೃಷ್ಟಿಗೆ ಧರ್ಮ ಭ್ರಷ್ಟನಾಗಿ ಕಾಣುತ್ತಿದ್ದರು. ಜೊತೆಗೆ ಅವರ ಅಜ್ಜಿ ಪಾರ್ವತಿ ಕೂಡ ಮದ್ರಾಸಿನಲ್ಲಿ 'ಅಮ್ಮಣಿ' (ಗೌರವಾನ್ವಿತ ಮಹಿಳೆ) ಎಂದು ಗುರುತಿಸಿಕೊಂಡಿದ್ದು, ಆಕೆ ಹಲವರ ಬದುಕಿನಲ್ಲಿ ಕೇಂದ್ರ ವ್ಯಕ್ತಿಯಾಗಿದ್ದು, ಸ್ವ–ಶಿಕ್ಷಣ ಪಡೆದು, ಸಂಸ್ಕೃತದಲ್ಲಿ ಮಾತನಾಡುವ ಮತ್ತು ಇಂಗ್ಲೀಷ್‌ನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿದ್ದಳು. ಈ ಉದಾತ್ತ ಮಹಿಳೆ ನೆರೆಹೊರೆಯವರಿಗೆ ನೆರವಾಗುವ ಗುಣ ಹೊಂದಿದ್ದು, ಬೀದಿ ಜನ ಅವರ ಬಳಿ ಕಲಿಯಲು ಬರುತ್ತಿದ್ದರು ಎಂದು ನಾರಾಯಣರೇ ತಮ್ಮ ಅಜ್ಜಿಯ ಬಗ್ಗೆ ಹೇಳಿಕೊಂಡಿದ್ದಾರೆ. ಇಂತಹ ಮದ್ರಾಸಿನ ಪರಿಸರದ ಬಾಲ್ಯದಿಂದ ಮೈಸೂರಿಗೆ ಪದವಿಗೆ ಬರುವತನಕ ಬೆಳೆದ ನಾರಾಯಣ ಅವರು ತನ್ನ ತಾತ, ಅಜ್ಜಿ ಮತ್ತು ತನ್ನ ತಾಯಿಯ ದಟ್ಟ ಪ್ರಭಾವಕ್ಕೆ ಒಳಗಾಗಿದ್ದರು. ಈ ಎಲ್ಲಾ ಪ್ರಭಾವಗಳು ಅವರ ಕೆಲವು ಕಾದಂಬರಿಗಳಲ್ಲಿಯೂ, ಅವರ ಆತ್ಮಚರಿತ್ರೆ (ಮೈ ಡೆಸ್, 1975) ಯಲ್ಲಿಯೂ ನಿರೂಪಿಸಿದ್ದಾರೆ.

ನಾರಾಯಣರ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ಈ ಬಗೆಯ ಅಜ್ಜಿಯರ ಪಾತ್ರಗಳು ದೇಸೀಯ ಸೊಗಡಿನಿಂದ ಕೂಡಿರುವುದು ಮಾತ್ರವಲ್ಲದೆ, ನಾರಾಯಣರ ಬದುಕಿನ ಉದ್ದಕ್ಕೂ ಅವರಿಂದ ಕಲಿತ, ಸಂಗೀತ, ವೀಣೆ, ಹಾಸ್ಯ ಮುಂತಾದ ವಿಷಯಗಳು ಅವರಿಗೆ ಬಳುವಳಿಯಾಗಿ ಬಂದಿವೆ. ಅವರ ಸೋದರ ಮಾವ ಶೇಷಾಚಲಂ ಕೂಡ ನಾರಾಯಣರ ಬದುಕಿನಲ್ಲಿ ನೆರವಿಗೆ ಬಂದವರು. ಅವರು ವಿಶಾಖಪಟ್ಟಣದಲ್ಲಿ ಒಬ್ಬ ಆದರ್ಶವಾದಿ ವಕೀಲರಾಗಿದ್ದರು. ಅವರು ನಾರಾಯಣರಿಗೆ








**ಆರ್.ಕೆ.ನಾರಾಯಣ್ ಅವರಿಗೆ ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಅಕಾಡೆಮಿಯ ಫೆಲೋಶಿಪ್ ಕೂಡ ಸಂದಿರುತ್ತವೆ. ಅವರ ಹಲವಾರು ಕಾದಂಬರಿಗಳು ಜಗತ್ತಿನ ಬೇರೆ ಬೇರೆ ಭಾಷೆಗಳಿಗೆ ಮಾತ್ರವಲ್ಲದೆ ಭಾರತೀಯ ವಿವಿಧ ಭಾಷೆಗಳಿಗೂ ಅನುವಾದವಾಗಿ ಪ್ರಕಟವಾಗಿವೆ.**

"ಎಲ್ಲಿಯೇ ಇರಲಿ, ಒಳ್ಳೆಯ ಲೇಖಕನಾಗಬೇಕೆಂದಿದ್ದರೆ, ನಿಮಗೆ ಧರ್ಮ ಮತ್ತು ಕುಟುಂಬದಲ್ಲಿ ಆಳವಾದ ಬೇರುಗಳು ಇರಬೇಕು" ಎಂದು ಹೇಳುತ್ತಿದ್ದರೆಂದು, ಆ ಸಂಗತಿಗಳು ತಮ್ಮಲ್ಲಿ ಗಾಢವಾಗಿ ಇವೆಯೆಂದೂ, ಅವುಗಳ ಬೇರುಗಳೇ ತಮ್ಮ ಕಾದಂಬರಿಗಳ ಮೂಲ ವಿನ್ಯಾಸವಾಗಿವೆ ಎಂದು ನಾರಾಯಣ ಅವರು ಅದನ್ನು ಒಪ್ಪಿಕೊಂಡಿದ್ದಾರೆ. ಜಗತ್ತಿನ ಪ್ರಸಿದ್ಧ ಲೇಖಕ ವಿ.ಎಸ್. ನೈಪಾಲ್ ಕೂಡ ನಾರಾಯಣರ ಸಾಹಿತ್ಯವನ್ನು ಕುರಿತು ಬರೆಯುತ್ತಾ, "ನಾರಾಯಣರು ಆಳವಾಗಿ ತಮ್ಮ ಸಮಾಜದ ಒಳಗಿನಿಂದಲೇ ಕಾರ್ಯನಿರ್ವಹಿಸುತ್ತಾರೆ" ಎಂದು ಹೇಳುವ ಮಾತು ಕೂಡ ಇದನ್ನೇ ಸಮರ್ಥಿಸುತ್ತದೆ.

ಆರ್.ಕೆ.ನಾರಾಯಣರು ತಮ್ಮ ಹದಿನಾರು ವರ್ಷಗಳನ್ನು ಮದ್ರಾಸಿನಲ್ಲಿ ತನ್ನ ಅಜ್ಜ, ಅಜ್ಜಿ, ಸೋದರ ಮಾವನ ಒಡನಾಟದಲ್ಲಿ ಕಳೆದು, 1922ರಲ್ಲಿ ಮದ್ರಾಸ್ ಬಿಟ್ಟು ಮೈಸೂರಿಗೆ ಬರುತ್ತಾರೆ. ಅಲ್ಲಿ ತನ್ನ ತಂದೆ ಕೃಷ್ಣಸ್ವಾಮಿ ಅಯ್ಯರ್ ಮತ್ತು ತಾಯಿಯ ಕುಟುಂಬವನ್ನು ಸೇರಿಕೊಳ್ಳುತ್ತಾರೆ. ಇದು ಅವರಿಗೆ ಯೌವನದ ದಿನಗಳು. ಮೈಸೂರಿನ ರಾಜಮನೆತನದ ಪರಿಸರ ಅವರ ಮೇಲೆ ಗಾಢ ಪ್ರಭಾವ ಬೀರುತ್ತದೆ. ಅವರು ಅದನ್ನು "ನಾನು ಮೈಸೂರಿನಲ್ಲಿ ನೆಲೆಯೂರುವಂತೆ ಮಾಡಿದ ದೇವರಿಗೆ ಕೃತಜ್ಞನಾಗಿದ್ದೇನೆ. ಮೈಸೂರು ನನಗೆ ಒದಗಿಸಿದ ಜೀವನಮಟ್ಟ ನನ್ನ ಬದುಕಿನಲ್ಲಿ ಮರೆಯಲಾರದ ವಿಶಿಷ್ಟ ಅನುಭವ, ಅದು ನನ್ನ ಕೃತಿಗಳಲ್ಲಿಯೂ ಬಿಂಬಿತವಾಗಿದೆ" ಎಂದಿದ್ದಾರೆ. ನಾರಾಯಣ ಅವರು ತಾವು ಜೀವಮಾನದಲ್ಲಿ ಮೈಸೂರಿನಲ್ಲಿ ಪಡೆದ ಹಲವರ ಗೆಳೆತನ, ತಾಯಿಯ ವಾತ್ಸಲ್ಯವನ್ನು ಸ್ಮರಿಸಿದ್ದಾರೆ. ಅವರೇ "ಮೈಸೂರು ನನ್ನ ಬರವಣಿಗೆಗೆ ಅತ್ಯುತ್ತಮ ಊರಾಗಿತ್ತು. ಆದರೆ ನನ್ನ ಮಾರುಕಟ್ಟೆ ಮಾತ್ರ ಮದ್ರಾಸ್ ಆಗಿತ್ತು" ಎಂದು ನೆನೆದಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ 1930ರ ಹೊತ್ತಿಗೆ ತಮ್ಮ



ಸಹೋದರ ಕಾರ್ಟೂನಿಸ್ಟ್ ಆರ್.ಕೆ. ಲಕ್ಷ್ಮಣ ಜೊತೆ ಬಿ.ಎ.ಪದವಿಯನ್ನು ಪಡೆಯುತ್ತಾರೆ. ಆದರೆ ಮುಂದಕ್ಕೆ ತಮ್ಮ ಓದನ್ನು ಮುಂದುವರಿಸಲು ಆಗುವುದಿಲ್ಲ. ಆಗ ಅವರು ಬಹುಪಾಲು ಓದಿದ್ದು ಹೆಚ್ಚಾಗಿ ಬ್ರಿಟೀಷ್ ಸಾಹಿತ್ಯವೇ. ಆಗ ಮೈಸೂರು ಪ್ರಾಂತ್ಯದಲ್ಲಿ ಬೇರೆ ಸಾಹಿತ್ಯವಾಗಲೀ, ಅಮೆರಿಕನ್ ಅಥವಾ ರಷ್ಯನ್ ಸಾಹಿತ್ಯವಾಗಲೀ ಇನ್ನೂ ಲಭ್ಯವಿಲ್ಲದ ಕಾಲದಲ್ಲಿ ನಾರಾಯಣರಿಗೆ ಬ್ರಿಟೀಷ್ ಸಾಹಿತ್ಯದ ಅಧ್ಯಯನ ಅನಿವಾರ್ಯವಾಗಿರಬಹುದು. ಜೊತೆಗೆ ತಮ್ಮ ತಂದೆಯವರ ಖಾಸಗಿ ಗ್ರಂಥಾಲಯದಲ್ಲಿದ್ದ ಬ್ರಿಟೀಷ್ ಸಾಹಿತ್ಯ, ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಬೈರನ್, ಬ್ರೌನಿಂಗ್ ಮುಂತಾದ ಲೇಖಕರ ಕೃತಿಗಳ ಓದು ನಾರಾಯಣರಿಗೆ ಪ್ರೇರಣೆಯನ್ನು ನೀಡಿದವು. 'ನಾನು 1924ರಿಂದಲೇ ಕಥೆ ಬರೆಯುತ್ತಿದ್ದೆ' ಎಂದು ಹೇಳುವ ಅವರು ಪದವಿ ಗಳಿಸಿದ ಮೇಲೆ ಸಾಂಪ್ರದಾಯಕ ಉದ್ಯೋಗಕ್ಕೆ ಯತ್ನಿಸದೆ, 1930ರ ಹೊತ್ತಿಗೆ ಒಬ್ಬ ವೃತ್ತಿ ನಿರತ ಲೇಖಕರಾಗಿ ಹೊರಹೊಮ್ಮಿದ್ದು ಕಾಣಿಸುತ್ತದೆ.

ನಾರಾಯಣರು ತಮ್ಮ 28ನೇ ವಯಸ್ಸಿನಲ್ಲಿ ಪ್ರೀತಿಸಿ, ಮೆಚ್ಚಿ ತಮಗಿಂತ ಎತ್ತರವಾಗಿದ್ದ, ಬ್ರಾಹ್ಮಣ ಕುಟುಂಬದಲ್ಲಿಯೇ ವಿಶೇಷ ಸಂಗತಿಯೆನಿಸಿದ 'ಪ್ರೇಮವಿವಾಹ'ವನ್ನು 1934ರಲ್ಲಿ 17ವರ್ಷದ ರಾಜಮಳು ಎಂಬ ಹೆಣ್ಣು ಮಗಳ ಜೊತೆ ಮಾಡಿಕೊಳ್ಳುತ್ತಾರೆ. ಆದರೆ ಆಕೆ ಹೇಮಾ ಎಂಬ ಹೆಣ್ಣುಮಗಳಿಗೆ 1936ರಲ್ಲಿ ಜನ್ಮವಿತ್ತು 1939ರಲ್ಲಿ ಅಂದರೆ ಮದುವೆಯಾದ ಕೇವಲ ಐದು ವರ್ಷಗಳಲ್ಲಿಯೇ ತೀರಿಕೊಳ್ಳುತ್ತಾಳೆ. ನಾರಾಯಣರ ಬದುಕಿನಲ್ಲಿ ಆ ವರ್ಷ ಒಂದು ಮರೆಯಲಾರದ ಘಟನೆ. ಆಗ ಅವರ ಸ್ನೇಹಿತರು ಅವರಿಗೆ ಮತ್ತೊಂದು ಮರು ಮದುವೆಗೆ ಒತ್ತಾಯಿಸಿದಾಗ ಅವರು "ಒಮ್ಮೆ ನೀವು ಮದುವೆಯಾದರೆಂದರೆ ಅದು ಇಡೀ ಬದುಕಿಗಾಗಿ ಇರುತ್ತದೆ. ನನ್ನ ಸಂಗಾತಿಯ ಸಾವು ಈ ಬಂಧನವನ್ನು ಬದಲಾಯಿಸಲಾರದು. ಅದು ಬದಲಾಯಿಸಬಹುದೆ?" ಎಂದು ಅವರನ್ನೇ ಪ್ರಶ್ನಿಸಿದ್ದಾರೆ. ಅವರ ದಾಂಪತ್ಯ ನಿಷ್ಠೆ ಪತ್ನಿಯ ಸಾವಿನ

ನಂತರವೂ ಹಾಗೇ ಇತ್ತು. ಆದರೆ ಆ ಒಬ್ಬಳೇ ಮಗಳು ಕೂಡ ತನ್ನ 58ನೇ ವಯಸ್ಸಿನಲ್ಲಿ ತೀರಿಕೊಳ್ಳುತ್ತಾಳೆ. ಆಗ ಅವರು ತಮ್ಮ ಆತ್ಮೀಯ ಸ್ನೇಹಿತ ಎನ್.ರಾಮ್ ಅವರಲ್ಲಿ "ನಾವೆಲ್ಲರೂ ಸರದಿ ಸಾಲಿನಲ್ಲಿ ಇದ್ದೇವೆ. ಆದರೆ ನನ್ನ ಮಗಳು ಸರದಿ ಬಿಟ್ಟು ಜಿಗಿದಿದ್ದಾಳೆ" ಎಂದು ಹೇಳಿಕೊಳ್ಳುತ್ತಾರೆ.

ನಾರಾಯಣ್ ಅವರು ಮೈಸೂರಿನಲ್ಲಿ ಸ್ವಂತ ಮನೆಯನ್ನು ಕಟ್ಟಿಸುತ್ತಾರೆ. ಅದರಲ್ಲಿ ತಮ್ಮ ಅಭಿರುಚಿಗೆ ಅನುಗುಣವಾಗಿ 'ಅಧ್ಯಯನ ಕೋಣೆ'ಯನ್ನು ವಿನ್ಯಾಸಗೊಳಿಸುತ್ತಾರೆ. ಮುಂದೆ ಮುಂಚಾಚಿಕೊಂಡಿರುವ ಎಂಟು ಕಿಟಕಿಗಳ ಕೋಣೆ ಅದು. ಇದು ಮೈಸೂರಿನ ಸರಸ್ವತಿಪುರಂನಲ್ಲಿದೆ. ಇದನ್ನು ಈಗ ಕರ್ನಾಟಕ ಸರ್ಕಾರ ತನ್ನ ವಶದಲ್ಲಿ ವಹಿಸಿಕೊಂಡು ಅದನ್ನು ವಸ್ತುಸಂಗ್ರಹಾಲಯವನ್ನಾಗಿ ಸುಧಾರಣೆಗೊಳಿಸಿದೆ. 1990ರಲ್ಲಿ ನಾರಾಯಣರು ತಮಗೆ ಕಾಯಿಲೆ ಕಾಣಿಸಿಕೊಂಡಾಗ ಮದ್ರಾಸಿನಲ್ಲಿದ್ದ ತಮ್ಮ ಮಗಳ ಕುಟುಂಬವನ್ನು ಆಶ್ರಯಿಸುತ್ತಾರೆ. ಅಲ್ಲಿ ಆಸ್ಪತ್ರೆಯಲ್ಲಿದ್ದು ಮೂರೇ ದಿನಕ್ಕೆ ಅಂದರೆ ಮೇ 14, 2001ರಲ್ಲಿ ತೀರಿಕೊಳ್ಳುತ್ತಾರೆ. ಅವರಿಗೆ ಆಗ 95 ವರ್ಷಗಳು. ನಾರಾಯಣರು ಗಾಂಧೀಜಿಯವರ ಹಾಗೆ ಸರಳವಾಗಿ ಬದುಕಿ ದೊಡ್ಡದಾದ ಮಹತ್ವದ ಕೃತಿಗಳನ್ನು ರಚಿಸಿ ಹೋಗಿದ್ದಾರೆ. ಅವರ ಸರಳ ಜೀವನದ, ಗಾಂಧೀಜಿಯುವರತರದ ಬದುಕಿನ ಅಭಿವ್ಯಕ್ತಿಗೆ ಅವರ 'ವೈಟಿಂಗ್ ಫಾರ್ ಮಹಾತ್ಮ' ಕೃತಿಯ ಶ್ರೀರಾಮ್‌ನ ಪಾತ್ರವೇ ಸಾಕ್ಷಿಯಾಗಿದೆ. ಶ್ರೀರಾಮ್ ಆ ಕಾದಂಬರಿಯಲ್ಲಿ ಸ್ವರಾಜ್ಯಕ್ಕಾಗಿ ಗಾಂಧೀಜಿಯವರಂತೆ 20 ವರ್ಷಗಳ ಕಾಲ ಹೋರಾಟ ಮಾಡುತ್ತಾನೆ. ನಾರಾಯಣರ ಬದುಕಿನ ಹೋರಾಟ ಕೂಡ ಈ ಬಗೆಯದೇ.

'ಕಲೆಗಾಗಿ ಕಲೆ' ಎಂಬಂತೆ 'ಬದುಕಿಗಾಗಿ ಸಾಹಿತ್ಯ' ಎಂದು ನಂಬಿ ಸಾಹಿತ್ಯವನ್ನೇ ಓದಿ, ಬರೆದು ಜೀವಿಸಿದ ವ್ಯಕ್ತಿ ನಾರಾಯಣ ಅವರು. 'ಬರೆವಣಿಗೆಯಿಂದ ಬದುಕುವುದು' ಎಂಬುದು ಅವರ ಧ್ಯೇಯ ವಾಕ್ಯವಾಗಿತ್ತು. ನಾರಾಯಣರ ಯಶಸ್ಸು ಬಹುಪಾಲು ಅವರ ವಿಶಿಷ್ಟ ಅನುಭವ, ಸುತ್ತಾಟ, ಗ್ರಹಿಕೆಯ ಹಿನ್ನೆಲೆಯಿಂದ ಮತ್ತು ಅವರು ತಮಗಾಗಿಯೇ ರೂಪಿಸಿಕೊಂಡ ವಿಭಿನ್ನ ಮಾದರಿ ಹಾಗೂ ಗುರಿಯಿಂದ ಪಡೆದುದಾಗಿದೆ. ಅವರ ಕೃತಿಗಳು ಜಾತ್ಯತೀತವಾದ ಹಾಗೂ ಪ್ರಜಾಪ್ರಭುತ್ವವಾದಿ ನೆಲೆಯದು. ಪಾಂಡಿತ್ಯ ಹಾಗೂ ಉಪದೇಶಾತ್ಮಕವಲ್ಲದ ಆಶಯದ ನೆಲೆಯದು. ಅವರು ಇಂಗ್ಲೀಷ್‌ನಲ್ಲಿ ವಾಸ್ತವವಾದಿ ಕಥಾಲೇಖಕರಾಗಿ ತಮ್ಮ ಚಹರೆಯನ್ನು ಸ್ಥಾಪಿಸಿದ್ದಾರೆ. ಶ್ರೀಸಾಮಾನ್ಯರ ಬದುಕನ್ನು ಅನಾವರಣ ಮಾಡಿದ್ದಾರೆ.

ಆರ್.ಕೆ.ನಾರಾಯಣರ ಆತ್ಮಚರಿತ್ರೆ 'ಮೈಡೇಸ್' (1974)ಕೃತಿಯನ್ನು ಓದಿ ಇದೆಲ್ಲಾ ಬರೆಯಬೇಕಾಗಿ ಬಂತು ಎಂಬುದರ ಬಗ್ಗೆ ಸ್ಪಷ್ಟನೆ ನೀಡುವುದು ಅವಶ್ಯಕವೆನಿಸುತ್ತಿದೆ. ನಾವು ಇವತ್ತು ಕನ್ನಡ ಜಗತ್ತು, ಕನ್ನಡ ಸಂಸ್ಕೃತಿ, ಕನ್ನಡ ಗ್ರಂಥಗಳು ಇಂಗ್ಲೀಷ್ ಭಾಷೆಯನ್ನೊಳಗೊಂಡಂತೆ ಭಾರತದ ಇತರೆ ಪ್ರಾಂತ್ಯ ಭಾಷೆಗಳಿಗೂ ಅನುವಾದಗೊಳ್ಳಬೇಕು ಎಂದು ಮಾತನಾಡುತ್ತಿರುತ್ತೇವೆ. ಭಾಷಾವಾರು ಪ್ರಾಂತ್ಯ ರಚನೆಗೆ ಪೂರ್ವದಲ್ಲಿ ತಮಿಳು□ಕನ್ನಡ ಭಾಷಿಕ ಮತ್ತು ಸಾಹಿತ್ಯಕ ಪರಿಸರಗಳಲ್ಲಿ ಸಾಮ್ಯತೆ ಇದ್ದುದ್ದನ್ನು ಈಗಾಗಲೇ ಪಂಡಿತರು ಗುರುತಿಸಿದ್ದಾರೆ. ಇಂತಹ ಅಖಂಡವಾದ ಪರಿಸರ, ವಸ್ತು, ಪಾತ್ರ, ದೇಸೀಯ ಜ್ಞಾನ – ಇತ್ಯಾದಿಗಳನ್ನೆಲ್ಲಾ ಆ ಸಂದರ್ಭದಲ್ಲಿಯೇ ನಾರಾಯಣರು ನೇರವಾಗಿ ಇಂಗ್ಲೀಷಿನಲ್ಲಿ ಕಟ್ಟಿಕೊಡುವ ಕೆಲಸವನ್ನು ಮಾಡಿರುವುದನ್ನು ನೆನಪು ಮಾಡಿಕೊಂಡಾಗ ಅದರ ಐತಿಹಾಸಿಕ ಸಂದರ್ಭ ಬಹುಮುಖ್ಯವಾಗಿ ಕಂಡುಬರುತ್ತದೆ. ದೇಸೀಯ ಪ್ರಜ್ಞೆ ಅವರ ಇಂಗ್ಲೀಷ್ ಕಥೆ, ಕಾದಂಬರಿಗಳಲ್ಲಿ ಗಾಢವಾಗಿ ಪ್ರಕಟವಾಗಿದೆ.


ನಾರಾಯಣರು ಸುಮಾರು ಇನ್ನೂರು ಸಣ್ಣ ಕಥೆಗಳನ್ನೂ ಬರೆದಿದ್ದಾರೆಂಬುದಕ್ಕೆ ಆಧಾರವಿದೆ. ಅವರ ಕೊನೆಯ ಕಥಾ ಸಂಕಲನ 'ಸಾಲ್ಟ್ ಅಂಡ್ ಸಾಡಸ್ಟ್' 1993 ರಲ್ಲಿ ಪ್ರಕಟವಾಗಿದೆ. ಆರಂಭದಲ್ಲಿ ಅವರ ಮೊದಲ ಮೂರು ಇಂಗ್ಲೀಷ್ ಕಾದಂಬರಿಗಳನ್ನು ಇಂಗ್ಲೆಂಡಿನಲ್ಲಿ ಮೂವರೂ ಬೇರೆ ಬೇರೆ ಪ್ರಕಾಶಕರು ಪ್ರಕಟಿಸಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಅವರ ಐದು ಕಾದಂಬರಿಗಳು ಪ್ರಕಟವಾಗಿವೆ. ಸ್ವಾಮಿ ಅಂಡ್ ಪ್ರೆಂಡ್ಸ್, (1935), ದಿ ಬ್ಯಾಚೆಲರ್ ಆಫ್ ಆರ್ಟ್ಸ್ (1937), ದಿ ಡಾರ್ಕ್‌ರೂಮ್ (1938), ದಿ ಇಂಗ್ಲೀಷ್ ಟೀಚರ್ (1945), ಮಿ ಸಂಪತ್ (1949) ಇವುಗಳಲ್ಲಿ ಕೆಲವು ಕಾದಂಬರಿಗಳು ಅವರ ಆತ್ಮ ಕಥಾನಕಗಳಾಗಿವೆ ಎನ್ನಬಹುದು. ಇವುಗಳಲ್ಲಿ ತಮ್ಮ ಕೌಟುಂಬಿಕ ಸಂಬಂಧಗಳಲ್ಲಿನ ಪ್ರೀತಿ ಮತ್ತು ಕಾಳಜಿಯನ್ನು ಹಾಗೂ ದೇಸೀ ಪ್ರಜ್ಞೆಯನ್ನು ಇವು ದಟ್ಟವಾಗಿ ನಿರೂಪಿಸುತ್ತವೆ.

ಇನ್ನು ಅವರ ಸ್ವಾತಂತ್ರ್ಯೋತ್ತರ ಕಾದಂಬರಿಗಳೆಂದರೆ 1) ದಿ ಫೈನಾನ್ಸಿಯಲ್‌ಎಕ್ಸ್‌ಫರ್ಟ್ (1964), 2) ವೈಟಿಂಗ್ ಫಾರ್ ದಿ ಮಹಾತ್ಮ (1964), 3) ದಿ ಗೈಡ್ (1963), 4) ದಿ.ಮ್ಯಾನ್□ಈಟರ್‌ಆಫ್ ಮಾಲ್ಗುಡಿ (1968), 5) ದಿ ವೆಂಡರ್‌ಆಫ್ ಸ್ವೀಟ್ಸ್ (1981), 6) ದಿ ಪೇಂಟರ್‌ಆಫ್ ಸೈನ್ಸ್ (1982), 7) ಎ ಟೈಗರ್‌ಆಫ್ ಮಾಲ್ಗುಡಿ (1983), 8) ಟಾಕೆಟಿವ್ ಮ್ಯಾನ್ (1990), 9) ದಿ ವರ್ಲ್ಡ್‌ಆಫ್ ನಾಗರಾಜ್ (1990), 10) ಗ್ರಾಂಡ್ ಮದರ್ಸ್‌ಟೇಲ್ (1992).

ಈ ಕಾದಂಬರಿಗಳಲ್ಲಿ ಸಮಕಾಲೀನ ಪ್ರಜ್ಞೆ, ಸ್ತ್ರೀವಾದ, ಅಪ್ಪ–ಮಗನ ಸಂಬಂಧಗಳು, ಗಾಂಧೀಜಿಯ ಪ್ರಭಾವಗಳು, ನಾಯಕರ ದೌರ್ಬಲ್ಯಗಳು, ಹಳ್ಳಿಯ ಸಾಮಾನ್ಯ ಜನರ ಸರಳ ಬದುಕು, ಕಪ್ಪು – ಬಿಳುಪಿನ ಹಾಗೂ ಸೋಲು ಗೆಲುವಿನ– ಹೀಗೆ ವೈವಿಧ್ಯಮಯವಾದ ವಿಷಯ ಹಾಗೂ ಪಾತ್ರಗಳು ಬರುತ್ತವೆ. ಅವರ ವಾಸ್ತವವಾದದ ಕಾದಂಬರಿಗಳ ಹಿಂದೆ ದೊಡ್ಡ ಆದರ್ಶವಾದವಿದೆ. ದೇಸೀ ಪ್ರಜೆಯ ಜೊತೆಗೆ ಜಾಗತಿಕ ಪ್ರಜ್ಞೆ ಕೂಡ ವ್ಯಕ್ತವಾಗುತ್ತದೆ. ಹೀಗೆ ಸಾಮಾಜಿಕ – ಸಾಂಸ್ಕೃತಿಕ, ರಾಜಕೀಯ– ಧಾರ್ಮಿಕ ಆಯಾಮಗಳನ್ನು ಬಿಂಬಿಸುವ ನಾರಾಯಣರ ಕಾದಂಬರಿಗಳಲ್ಲಿ ದೇಸೀಯತೆಯ ಪ್ರಾತಿನಿಧ್ಯವನ್ನು ವಸ್ತು, ಪಾತ್ರ, ಭಾಷೆ, ಸಂಭಾಷಣೆ, ಕಥನಶೈಲಿಯ ವಿನ್ಯಾಸಗಳು ಅಪೂರ್ವವಾಗಿ ಮೂಡಿ ಬಂದಿವೆ.

ಆರ್.ಕೆ.ನಾರಾಯಣ್ ಅವರಿಗೆ ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಅಕಾಡೆಮಿಯ ಫೆಲೋಶಿಪ್ ಕೂಡ ಸಂದಿರುತ್ತವೆ. ಅವರ ಹಲವಾರು ಕಾದಂಬರಿಗಳು ಜಗತ್ತಿನ ಬೇರೆ ಬೇರೆ ಭಾಷೆಗಳಿಗೆ ಮಾತ್ರವಲ್ಲದೆ ಭಾರತೀಯ ವಿವಿಧ ಭಾಷೆಗಳಿಗೂ ಅನುವಾದವಾಗಿ ಪ್ರಕಟವಾಗಿರುತ್ತವೆ. ಒಟ್ಟಾರೆ ಆರ್.ಕೆ.ನಾರಾಯಣ್ ಅವರು ಒಬ್ಬ ಪ್ರಮುಖ ಭಾರತೀಯ ಲೇಖಕರಾಗಿ ಮಾತ್ರವಲ್ಲದೆ, ಜಾಗತಿಕ ಮಟ್ಟದ ಲೇಖಕರಾಗಿ ತಮ್ಮ ಅನನ್ಯತೆಯನ್ನು ಸ್ಥಾಪಿಸಿದ್ದಾರೆ.





# ಗದುಗಿನ ವೀರನಾರಾಯಣ ದೇವಸ್ಥಾನ

ಪಿ. ಎಸ್. ಪಾರ್ವತಿ

ಶ್ರೀ ವನಿತೆಯರಸನೆ ವಿಮಲ ರಾ
ಜೀವಪೀಠನ ಪಿತನೆಜಗಕತಿ
ಪಾವನನೆ ಸನಕಾದಿ ಸಜ್ಜನನಿಕರದಾತಾರ
ರಾವಣಾಸುರಮಥನ ಶ್ರವಣಸು
ಧಾ ವಿನೂತನಕಥನಕಾರಣ
ಕಾವುದಾನತಜನವಗದುಗಿನ ವೀರನಾರಾಯಣ

–ಕುಮಾರವ್ಯಾಸ

"ಕರ್ಣಾಟ ಭಾರತ ಕಥಾಮಂಜರಿ"ಯಲ್ಲಿರುವ ಆದಿ ಪರ್ವದ ಪೀಠಿಕಾ ಸಂಧಿಯ ಮೊದಲ ಚರಣ. ಕನ್ನಡದ ಹೊಸ ಹುಟ್ಟಿನಲ್ಲಿ ಹೊಸ ಮಾರ್ಗಕ್ಕೆ ದಿಕ್ಸೂಚಿಯ ಕೃತಿ ಇದು. ನಾಡಿನ ಮಹಾಕವಿಗಳಲ್ಲೊಬ್ಬನಾದ ನಾರಾಯಣಪ್ಪ ಹೆಸರಿನ "ಕುಮಾರ ವ್ಯಾಸ" ಇದರ ಕರ್ತೃ.

ಗದುಗಿನ ಭಾರತ, ಕನ್ನಡ ಭಾರತ, ನಾರಣಪ್ಪನ ಭಾರತ, ದಶಪರ್ವ ಭಾರತ, ಎಂಬೆಲ್ಲಾ ಹೆಸರುಗಳಿಂದ ಜನಪ್ರಿಯವಾದ ಈ ಕೃತಿ ಕನ್ನಡ ಸಾರಸ್ವತ ಲೋಕದಲ್ಲಿ ಅಜರಾಮರವಾಗಿದೆ. ಈ ಕೃಷ್ಣ ಕಥೆಯನ್ನು ಬರೆಯುವಾಗ ಕವಿ ತಾನು ಕೇವಲ ಲಿಪಿಕಾರ , ವೀರನಾರಾಯಣನೇ ಕವಿ ಎಂದು ಹೇಳಿದ್ದಾನೆ. " ಕಾವ ಗದುಗಿನ ವೀರನಾರಾಯಣನ ಬೀಡು ಎಂಬ ಕವಿ ವಾಣಿಯಂತೆ ಕುಮಾರವ್ಯಾಸನು "ಗದುಗ" ಹಾಗೂ ವೀರನಾರಾಯಣನ ಹೆಸರನ್ನು ಚಿರಸ್ಥಾಯಿಗೊಳಿಸಿದ್ದಾನೆ. ರೂಪಕ ಸಾಮ್ರಾಜ್ಯದ ಚಕ್ರವರ್ತಿ ಈ ತನ್ನ ಕೃತಿಯನ್ನು ಗದುಗಿನ ವೀರನಾರಾಯಣನ ಸನ್ನಿಧಿಯಲ್ಲಿ ರಚಿಸಿರುವ ಐತಿಹ್ಯವಿದೆ. ಕುಮಾರವ್ಯಾಸನ ಪ್ರೇರಕ ದೈವವೆಂದು ಪ್ರಸಿದ್ಧವಾದ ವೀರನಾರಾಯಣ ದೇವಸ್ಥಾನ ಗದಗ ಜಿಲ್ಲಾ ಕೇಂದ್ರ ಸ್ಥಳದಲ್ಲಿದೆ.





### ಭವ್ಯದೇವಾಲಯ:

ಗದುಗಿಗೆ ಬರುವ ಪ್ರತಿಯೊಬ್ಬರು ತಪ್ಪದೇ ನೋಡುವ ಈ ದೇವಾಲಯ ಭವ್ಯ ಪ್ರಾಂಗಣ ಹಾಗೂ ಗೋಪುರ ಹೊಂದಿದ್ದು ಮೋಹಕ ವೀರನಾರಾಯಣನ ದೇವತಾ ಮೂರ್ತಿಯಿಂದ ಕಂಗೊಳಿಸುತ್ತಿದೆ. ಈ ದೇವಾಲಯವನ್ನು 1117 ರಲ್ಲಿ ಹೊಯ್ಸಳ ವಿಷ್ಣುವರ್ಧನನು ನಿರ್ಮಿಸಿದ್ದು, ಇದು ಆತ ನಿರ್ಮಿಸಿದ ಪಂಚನಾರಾಯಣ ದೇವಾಲಯಗಳಲ್ಲೊಂದಾಗಿದೆ. ಇನ್ನೂಳಿದವುಗಳೆಂದರೆ ತಲಕಾಡಿನ ಕೀರ್ತಿ ನಾರಾಯಣ, ಬೇಲೂರಿನ ವಿಜಯ ನಾರಾಯಣ , ಮೇಲುಕೋಟೆಯ ಚೆಲುವ ನಾರಾಯಣ ಹಾಗೂ ಕೈವಾರದ ಯೋಗ ನಾರಾಯಣ ಎಂದು ಹೇಳಲಾಗಿದೆ. ಈ ದೇವಾಲಯ 10 ನೇ ಶತಮಾನದಲ್ಲಿ ನಿರ್ಮಾಣವಾಗಿರಬಹುದೆಂದು ಡಾ.ಅ.ಸುಂದರ ಅವರು ಅಭಿಪ್ರಾಯ ಪಡುತ್ತಾರೆ. 1037 ರ ಶಾಸನದಲ್ಲಿ ಉಲ್ಲೇಖವಾಗಿರುವ "ಬಾರನಾರಾಯಣ" ದೇವಾಲಯವೇ ಪ್ರಸ್ತುತ ವೀರನಾರಾಯಣ ಆಗಿದೆ ಎನ್ನುತ್ತಾರೆ.

ಸಾಂಪ್ರದಾಯಿಕ ನಂಬಿಕೆ ಅನ್ವಯ ವಿಷ್ಣುವರ್ಧನನು ಈ ದೇವಾಲಯ ನಿರ್ಮಿಸಿದನೆಂದು ಪ್ರತಿಪಾದಿಸಿದವರು ಎ. ಎಂ. ಅಣ್ಣಿಗೇರಿಯವರು. ಈ ದೇವಾಲಯ 2 ನೇ ಬಲ್ಲಾಳನಿಂದ ನಿರ್ಮಿತವಾಯಿತೆಂದು ಅವರು ಅಭಿಪ್ರಾಯ ಪಡುತ್ತಾರೆ. "ಕೃತಪುರ ಮಹಾತ್ಮೆ" ಪ್ರಕಾರ ಕೃತು ಮುನಿಯ ರಕ್ಷಣೆಗಾಗಿ ಬದರಿಯಿಂದ (ಬದ್ರಿನಾಥ ) ವೀರಗಚ್ಚೆಯಲ್ಲಿ ಬಂದು ಇಲ್ಲಿ ನೆಲೆಸಿರುವುದಾಗಿ ಹೇಳಲಾಗಿದೆ.





ಈ ದೇವಾಲಯವು 12 ನೇ ಶತಮಾನದಲ್ಲೊಮ್ಮೆ ನಂತರ 14 ಮತ್ತು 15 ನೇ ಶತಮಾನದ ವಿಜಯನಗರ ಕಾಲದಲ್ಲಿ 19 ನೇ ಶತಮಾನ (1850) ಹಾಗೂ ದೇವಾಲಯದ ಗೋಪುರ ಸ್ವಾತಂತ್ರ್ಯ ನಂತರ ( ಅಂದರೆ 1962 ರಲ್ಲಿ ) ಹೀಗೆ ನಾಲ್ಕು ಬಾರಿ ಜೀರ್ಣೋದ್ಧಾರಗೊಂಡಿದ್ದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಇದರಿಂದಾಗಿ ಈ ದೇವಾಲಯ ಚಾಲುಕ್ಯ ಹೊಯ್ಸಳ , ವಿಜಯನಗರ ಮತ್ತು ಆಧುನಿಕ ಶೈಲಿಯ ಸುಂದರ ಸಂಗಮದ ಕಟ್ಟಡವಾಗಿದೆ. ದೇಗುಲದ ಗರ್ಭಗುಡಿ ಹಾಗೂ ಅದರ ಮೇಲಿನ ಶಿಲಾಗೋಪುರ ಚಾಲುಕ್ಯ ಶೈಲಿಯದಾಗಿದ್ದು, ಗರುಡಗಂಬ, ರಂಗಮಂಟಪಗಳು ಹೊಯ್ಸಳ ಶಿಲ್ಪ ಮಾದರಿಯವಾಗಿವೆ. ಗುಡಿಯ ಭವ್ಯ ಮಹಾದ್ವಾರದ ಗೋಪುರ ವಿಜಯನಗರ ಶೈಲಿಯದ್ದಾಗಿದೆ. ವಿಜಯನಗರ ಅರಸರ ಕಾಲದಲ್ಲಿ ಮುಂಭಾಗದ ರಂಗಮಂಟಪ, ಹೊರಪ್ರಕಾರ ಹಾಗೂ ರಾಯಗೋಪುರ ನಿರ್ಮಾಣಗೊಳ್ಳುವ ಮೂಲಕ ದೇವಾಲಯ ಕಟ್ಟಡ ವಿಸ್ತರಣೆ ಆಗಿದೆಯೆಂದು ಡಾ ॥ ಅ. ಸುಂದರ ಅಭಿಪ್ರಾಯ ಪಡುತ್ತಾರೆ. ದೇವಾಲಯಕ್ಕೆ ಎರಡು ಪ್ರವೇಶ ದ್ವಾರಗಳಿವೆ. ದಕ್ಷಿಣದ ದ್ವಾರ ವಿಜಯನಗರ ಪೂರ್ವದಲ್ಲಿ ನಿರ್ಮಾಣಗೊಂಡಿದೆ. ಪೂರ್ವದಲ್ಲಿರುವ ವಿಜಯನಗರ ರಾಯ ಗೋಪುರ ವೈಶಿಷ್ಟ್ಯ ಪೂರ್ಣವಾಗಿದ್ದು, ಐದು ಹಂತದಲ್ಲಿ ಇರುವ ಗೋಪುರದಲ್ಲಿ ಪ್ರಾಚೀನ ರೀತಿಯಂತೆ ಕೀರ್ತಿ ಮುಖಗಳೊಂದಿಗೆ ದೇವ–ದೇವತೆಗಳೊಂದಿಗಿನ ಮೈಥುನ ಶಿಲ್ಪಗಳಿವೆ.

ದೇವಸ್ಥಾನದ ಭವ್ಯದ್ವಾರ ಪ್ರವೇಶಿಸಿದಾಗ ಎದುರಾಗುವುದೇ ಗರುಡಗಂಬ. ಈ ಕಂಬದ ಹತ್ತಿರ ಶ್ರೀವೈಷ್ಣವ ತ್ರಿಪುಂಡ್ರಗಳಿವೆ. ಅದರ ಮುಂದುಗಡೆ ಇರುವ ಕಟ್ಟೆಯ ಮೇಲೆ ಕೈಮುಗಿದು ನಿಂತ ಗರುಡ ಮೂರ್ತಿ ಇದೆ. ಗರ್ಭಗುಡಿಯ ಮುಂಭಾಗದಲ್ಲಿ ಅರ್ಧಮಂಟಪ ನವರಂಗ ಹಾಗೂ ರಂಗಮಂಟಪಗಳಿವೆ.

ನವರಂಗದಲ್ಲಿ ಚಾಲುಕ್ಯರ ಶೈಲಿಯ ನಾಲ್ಕು ಕೇಂದ್ರ ಸ್ತಂಭಗಳಿದ್ದು, ರಂಗಮಂಟಪದಲ್ಲಿ ವಿಜಯನಗರ ಶೈಲಿಯ ಸ್ತಂಬಗಳಿವೆ. ರಂಗಮಂಟಪ ಹಾಗೂ ಹೊರ ಪ್ರಾಕಾರದ ಎತ್ತರವಾದ ಗೋಡೆ, ಮಹಾದ್ವಾರದ ರಾಯಗೋಪುರವು ವಿಜಯನಗರ ಅರಸರಿಂದ ನಿರ್ಮಿತವಾಗಿ ನಂತರ ಮುಖ್ಯ ಕಟ್ಟಡಕ್ಕೆ ಸೇರಿಸಲಾಯಿತು ಎಂದು ಶಾಸನಗಳಿಂದ ವಿದಿತವಾಗುತ್ತದೆ. ರಂಗಮಂಟಪದ ಎರಡೂ ಬದಿಯ ಗೋಡೆಗಳನ್ನು ವಿಸ್ತರಿಸಿ ಮೊದಲಿನ ಗರ್ಭಗೃಹ ಅಂತರಾಳಗಳನ್ನು ಸೇರಿಸಿದ್ದರಿಂದಾಗಿ, ದೇವಾಲಯದ ಮೊದಲಿನ ಭಾಗಗಳು ಹೊರಗಡೆಯಿಂದ ವೀಕ್ಷಿಸಿದಾಗ ಕಾಣುವುದಿಲ್ಲ. ರಂಗಮಂಟಪದ ಕಂಬಗಳ ಮೇಲೆ ದಶಾವತಾರ ಪ್ರತಿನಿಧಿಸುವ ಹಲವು ಉಬ್ಬು ಶಿಲ್ಪಗಳಿವೆ. ಈ ಕಂಬಗಳ ಪೈಕಿ ಆಗ್ನೇಯ ದಿಕ್ಕಿನ ಕಂಬದ ಮುಂಭಾಗದಲ್ಲಿ ಕುಳಿತು ಗದುಗಿನ ನಾರಾಯಣಪ್ಪನು ಜಗತ್ ಪ್ರಸಿದ್ಧ ಗದುಗಿನ ಭಾರತ ರಚಿಸಿದನೆಂದು ಸ್ಥಳೀಯ ಐತಿಹ್ಯಗಳು ತಿಳಿಸುತ್ತವೆ.

### ಮೋಹಕ ಮೂರ್ತಿ:

ಗರ್ಭಗುಡಿಯಲ್ಲಿ ಪ್ರಭಾವಳಿ ಸಹಿತ 8 ಅಡಿ ಎತ್ತರದ, ನೀಲ ಮೇಘ ಶ್ಯಾಮ ವರ್ಣ ಶಿಲೆಯಲ್ಲಿರುವ ಶ್ರೀ ವೀರನಾರಾಯಣ ಸ್ವಾಮಿಯ ಅಪೂರ್ವ ವಿಗ್ರಹವಿದೆ. ಪೀಠದ ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯಿದೆ. ಶ್ರೀ ವೀರನಾರಾಯಣನು ಪಾಣಿಪೀಠದ ಪದ್ಮದ ಮೇಲೆ ಯೋಗ ಮುದ್ರೆಯಲ್ಲಿ ನಿಂತಿದ್ದಾನೆ. ಬಲಗೈಯಲ್ಲಿ ಶಂಖ ಹಾಗೂ ಗದೆಗಳನ್ನು ಹಿಡಿದಿದ್ದು, ಎಡಗೈಯಲ್ಲಿ ಚಕ್ರ ಹಾಗೂ ಪದ್ಮಗಳನ್ನು ಧರಿಸಿ ಅಭಯಹಸ್ತ ಭೂಷಿತನಾಗಿದ್ದಾನೆ. ವೀರಗಚ್ಚೆ ಹಾಕಿ ನಿಂತ ಶ್ರೀ ವೀರನಾರಾಯಣನ ವಿಗ್ರಹ ಸುಂದರವಾಗಿದೆ. ವಿಶಾಲ ವಕ್ಷ ಸ್ಥಳದಲ್ಲಿ ಲಕ್ಷ್ಮೀ, ಪಾದಗಳ ನಡುವೆ ಸಾಲಿಗ್ರಾಮವಿದ್ದು, ಬಲಗಡೆ ಗರುಡ, ಎಡಗಡೆ ಮಹಾಲಕ್ಷ್ಮಿ ಮೂರ್ತಿಗಳಿವೆ.

ದೇವಾಲಯದ ಪ್ರಾಕಾರದಲ್ಲಿ ಶ್ರೀಲಕ್ಷ್ಮೀನರಸಿಂಹ, ಸರ್ಪೆಶ್ವರ, ಹನುಮಂತ ದೇವಾಲಯಗಳು ಮತ್ತು ರಾಘವೇಂದ್ರ ಸ್ವಾಮಿಗಳ ವೃಂದಾವನ ಇವೆ. ಇಲ್ಲಿ ಅನೇಕ ಸಾಂಸ್ಕೃತಿಕ, ಭಕ್ತಿ ಸಂಗೀತ ಕಾರ್ಯಕ್ರಮಗಳು, ಉಪನ್ಯಾಸ ಭಾರತ ವಾಚನದಂತಹ ಕಾರ್ಯಕ್ರಮಗಳು ಜರುಗುತ್ತವೆ.

ಗದಗ ನಗರಕ್ಕೆ ಎಲ್ಲ ಕಡೆಯಿಂದ ರೈಲು ಹಾಗೂ ಬಸ್‌ಗಳ ಸೌಕರ್ಯವಿದೆ. ಹುಬ್ಬಳ್ಳಿ– ಬಳ್ಳಾರಿ ಹೆದ್ದಾರಿಯಲ್ಲಿ ಹುಬ್ಬಳ್ಳಿಯಿಂದ 55 ಕಿ.ಮಿ ದೂರದ ಈ ಊರಿಗೆ ಸ್ವಂತ ವಾಹನದಲ್ಲೂ ಭೇಟಿ ನೀಡಬಹುದ್ದಾಗಿದೆ. ಹುಬ್ಬಳ್ಳಿ ನಗರದಲ್ಲಿ ವಿಮಾನ ನಿಲ್ದಾಣವಿದ್ದು ಬೆಂಗಳೂರಿನಿಂದ ಪ್ರತಿದಿನ ವಿಮಾನ ಸಂಚಾರದ ವ್ಯವಸ್ಥೆ ಇದೆ. ಬಯಲು ವಸ್ತು ಸಂಗ್ರಹಾಲಯ ಎಂದೇ ಪ್ರಸಿದ್ಧವಾದ ಹಂಪೆ, ದೇವಾಲಯಗಳ ವಿದ್ಯಾಲಯವೆಂದೇ ಖ್ಯಾತಿ ಹೊಂದಿದ ಐಹೊಳೆ, ಪಟ್ಟದಕಲ್ಲೂ, ಹಾಗೂ ಗುಹಾಂತರ್ಗತ ದೇವಾಲಯ ಇರುವ ಬಾದಾಮಿ ಹಾಗೂ ಬನಶಂಕರಿಗಳನ್ನು ಇಲ್ಲಿಂದ ಪಯಣಿಸಿ ನೋಡಬಹುದು.




# ಭಾರತ ಸಂವಿಧಾನ
# ಮೂಲಭೂತ ಕರ್ತವ್ಯಗಳು

1. ಪ್ರತಿಯೊಬ್ಬರು ಸಂವಿಧಾನಕ್ಕೆ ನಿಷ್ಠರಾಗಿರಬೇಕು. ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು ಹಾಗೂ ರಾಷ್ಟ್ರ ಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸಬೇಕು. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ ಭಾರತ ದೇಶದ ಪ್ರತಿಷ್ಠೆಯ ದ್ಯೋತಕಗಳು. ಇವುಗಳನ್ನು ಯಾವುದೇ ಕಾರಣಕ್ಕೂ ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡುವಂತಿಲ್ಲ. ಅಲ್ಲದೆ ರಾಷ್ಟ್ರಧ್ವಜಕ್ಕೆ ಮತ್ತು ರಾಷ್ಟ್ರಗೀತೆಗೆ ಅವಮಾನ ಮಾಡುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.
2. ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ಕೊಟ್ಟ ಉದಾತ್ತ ಆದರ್ಶಗಳನ್ನು ಮನನಗೊಳಿಸುವುದು ಮತ್ತು ಅದರಂತೆ ನಡೆದುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. (ಉದಾಹರಣೆ: 1857ರ ಸಿಪಾಯಿದಂಗೆ, ಗಾಂಧೀಜಿಯವರ ದಂಡಿ ಸತ್ಯಾಗ್ರಹ, ಜಲಿಯನ್ ವಾಲಾಬಾಗ್ ಮಾರಣ ಹೋಮ, ಸ್ವದೇಶಿ ಚಳುವಳಿ, ಭಾರತ ಬಿಟ್ಟು ತೊಲಗಿ ಚಳುವಳಿ, ಅಸಹಕಾರ ಚಳುವಳಿ ಇತ್ಯಾದಿ)
3. ಎಲ್ಲ ಭಾರತೀಯರು ರಾಷ್ಟ್ರದ ಸಾರ್ವಭೌಮತ್ವ, ಏಕತೆ, ಅಖಂಡತೆ ಮತ್ತು ನಿಷ್ಠೆಯನ್ನು ಎತ್ತಿ ಹಿಡಿಯಬೇಕು.
4. ದೇಶದ ರಕ್ಷಣೆಗೆ ಸಂಬಂಧಿಸಿದಂತೆ ಅವಶ್ಯಕತೆ ಬಿದ್ದಾಗ ರಾಷ್ಟ್ರದ ಸೇವೆಯಲ್ಲಿ ತೊಡಗಿಸಿಕೊಳ್ಳುವುದು.
5. ಭಾರತೀಯರು ಅವರು ಯಾವುದೇ ಧರ್ಮದವರಾಗಿರಲೀ, ಯಾವುದೇ ಭಾಷಿಕರಾಗಿರಲೀ, ಅಥವಾ ಪ್ರದೇಶದವರಾಗಿರಲೀ, ಪ್ರತಿಯೊಬ್ಬರು ಸಾಮರಸ್ಯವನ್ನು ಮತ್ತು ಭಾತೃತ್ವವನ್ನು ಪ್ರೇರೇಪಿಸಬೇಕು. (ಮಹಿಳೆಯರ ಆತ್ಮಗೌರವಕ್ಕೆ ಚ್ಯುತಿ ಬರುವಂಥ ಎಲ್ಲಾ ಆಚರಣೆಗಳನ್ನು ತ್ಯಜಿಸುವುದು; ಮಹಿಳೆಯರ ಅಪಹರಣ, ವರದಕ್ಷಿಣೆ ಕಿರುಕುಳ, ಸಜೀವ ದಹನ, ಮಹಿಳೆಯರ ಬಗ್ಗೆ ತಿರಸ್ಕಾರ ಭಾವ ಇತ್ಯಾದಿ ಆಚರಣೆಗಳು ನಿಲ್ಲಬೇಕು.)
6. ನಮ್ಮ ಸಮಷ್ಟಿ ಸಂಸ್ಕೃತಿಯ ಚಾರಿತ್ರಿಕ ಮೌಲ್ಯಗಳನ್ನು ಗೌರವಿಸುವುದರ ಜತೆಗೆ ಅವುಗಳನ್ನು ಕಾಪಾಡಿಕೊಂಡು ಬರುವುದು (ನಮ್ಮ ಸಂಸ್ಕೃತಿ, ನಮ್ಮ ಭಾಷೆ, ನಮ್ಮ ಸಂಗೀತ, ನಮ್ಮ ಉಡುಗೆ ತೊಡುಗೆಗಳ ಕುರಿತಾಗಿ ಗೌರವ, ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರಣೆಯನ್ನು ತ್ಯಜಿಸಿ, ನಮ್ಮ ಜೀವನ ಕ್ರಮದ ಮೌಲ್ಯಗಳನ್ನು ಎತ್ತಿ ಹಿಡಿಯುವುದು
7. ಅರಣ್ಯಗಳು, ಜಲ ರಾಶಿಗಳು, ಅಂದರೆ ಕೆರೆ, ಕಟ್ಟೆ, ನದಿ, ಸರೋವರಗಳು, ಅರಣ್ಯ ಜೀವಿಗಳು ಇವುಗಳನ್ನೆಲ್ಲ ಒಳಗೊಂಡಂತೆ ಪರಿಸರವನ್ನು ಕಾಪಾಡಿಕೊಳ್ಳುವುದಲ್ಲದೆ, ಅದನ್ನು ಉಳಿಸಿ ಬೆಳೆಸುವುದು (ಉದಾಹರಣೆಗೆ; ದಂತಕ್ಕಾಗಿ ಆನೆಗಳನ್ನು ಬೇಟೆಯಾಡುವುದು, ಚರ್ಮಕ್ಕಾಗಿ ಕಾಡು ಮೃಗಗಳನ್ನು ಕೊಲ್ಲುವುದು, ಪಶು ಪಕ್ಷಿಗಳನ್ನು ಬೇಟೆಯಾಡುವುದು, ಪರಿಸರಕ್ಕೆ ಹಾನಿ ಮಾಡುವುದು ಇತ್ಯಾದಿ)
8. ವೈಜ್ಞಾನಿಕ ಮನೋಧರ್ಮವನ್ನು, ಮಾನವೀಯತೆಯನ್ನು, ಅನ್ವೇಷಿಕ ಪ್ರವೃತ್ತಿ ಮತ್ತು ಸುಧಾರಣೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕು.
9. ಸಾರ್ವಜನಿಕ ಆಸ್ತಿಯನ್ನು ಕಾಪಾಡುವುದು ಮತ್ತು ಹಿಂಸಾ ಪ್ರವೃತ್ತಿಯನ್ನು ತ್ಯಜಿಸುವುದು. (ಇತ್ತೀಚಿನ ದಿನಗಳಲ್ಲಿ ಯಾವುದೇ ಚಳವಳಿಯಾಗಲೀ, ಯಾರ ಮೇಲೆ ಸಿಟ್ಟಿರಲಿ, ಬಸ್ಸುಗಳಿಗೆ ಬೆಂಕಿ ಹಚ್ಚುವುದು, ಕಟ್ಟಡಗಳ ಗಾಜುಗಳನ್ನು ಪುಡಿ ಮಾಡುವುದು, ಹಿಂಸಾಚಾರದಲ್ಲಿ ತೊಡಗುವುದು ಕಂಡು ಬರುತ್ತದೆ. ಇಂಥ ಕೃತ್ಯಗಳು ಸಭ್ಯವಲ್ಲ)
10. ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳ ಪರಿಧಿಯಲ್ಲಿ ಉತ್ಕೃಷ್ಟತೆ ಅಥವಾ ಮೇಲ್ಮೆಯನ್ನು ಸಾಧಿಸುವುದಕ್ಕೆ ಶ್ರಮಿಸುವುದು. ಇದರಿಂದ, ರಾಷ್ಟ್ರ ನಿರಂತರವಾಗಿ ಉದ್ಯಮಶೀಲತೆಯ ಮತ್ತು ಸಾಧನೆಯ ಮಟ್ಟಗಳನ್ನು ಎತ್ತರೆತ್ತರಕ್ಕೆ ತೆಗೆದುಕೊಂಡು ಹೋಗಲು ಅನುವಾಗುತ್ತದೆ.
11. ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ನೀಡುವುದು ತಂದೆ– ತಾಯಿಗಳು ಅಥವಾ ಪೋಷಕರಾದವರ ಕರ್ತವ್ಯ. 6 ರಿಂದ 14ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವುದು ಕಡ್ಡಾಯವಾಗಿದೆ.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050